ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ12 | ಸಂಚಿಕೆ43 | ಅಕ್ಟೋಬರ್28, 1990 | ರೂ 1-50

"ಎಲ್ಲಾ ಜಾತ್ಯಾತೀತ ಪಕ್ಷಗಳ ಐಕ್ಯತೆ"

-ಇಂದಿನ ತುರ್ತು ಅಗತ್ಯ

—ಕಾಂ. ಇ.ಎಂ.ಎಸ್.ನಂಬೂದರಿಪ್ಪಾಡ್

ಬಿಜೆಪಿ ಹೊತ್ತಿಸಿರುವಂತಹ ಮತೀಯ ಕೋಮುವಾದಿ ಬೆಂಕಿಯನ್ನು ದಮನ ಮಾಡಲು ಕಾಂಗ್ರೆಸ್(ಐ) ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಬೇಕೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದರಿಪ್ಪಾಡ್ ಕರೆ ನೀಡಿದ್ದಾರೆ. ಪ್ರಧಾನಿ ಪದವಿಯಿಂದ ವಿ.ಪಿ.ಸಿಂಗ್‌ರನ್ನು ಬದಲಾವಣೆ ಮಾಡುವ ಯಾವುದೇ ಪ್ರಯತ್ನವನ್ನು ಜನತಾದಳ ಮಾಡಬಾರದೆಂದು ಇವರು ಒತ್ತಾಯಿಸಿದ್ದಾರೆ.

ಇತ್ತೀಚೆಗೆ ಮದ್ರಾಸಿನಲ್ಲಿ ಪತ್ರಕರ್ತರೊಡನೆ ಮಾತನಾಡುತ್ತಾ, ಇ.ಎಂ.ಎಸ್. ರವರು, ಮದ್ರಾಸಿನಲ್ಲಿ ಜರುಗಿದ ರಾಷ್ಟ್ರೀಯ ಏಕತಾ ಮಂಡಳಿಯಲ್ಲಿ ಅಯೋಧ್ಯೆ ವಿವಾದಗ್ರಸ್ಥ ಸ್ಥಳದಲ್ಲಿ ರಾಮಮಂದಿರ ನಿರ್ಮಾಣವನ್ನು ವಿರೋಧಿಸಲು ಬಗ್ಗೆ ಏಕಾಭಿಪ್ರಾಯದಿಂದ ಒಪ್ಪಿರುವ ಎಲ್ಲಾ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಲೋಕಸಭೆಯಲ್ಲಿ ಒಂದಾಗಬೇಕೆಂದು ಕಾಂ. ಇ.ಎಂ.ಎಸ್. ಹೇಳಿದರು.

ವಿ.ಪಿ.ಸಿಂಗ್‌ರವರು ಲೋಕಸಭೆಯಲ್ಲಿ ಹೇಗೆ ಬಹುಮತ ತೋರಿಸುವರೆಂಬ ಪ್ರಶ್ನೆಗೆ ಉತ್ತರಿಸುತ್ತಾ ಅಯೋಧ್ಯೆ ವಿಷಯದಲ್ಲಿ ಬಿಜೆಪಿ ವಿರುದ್ಧ ದೃಢ ನಿಲುವನ್ನು ಹೊಂದಿರುವ ಎಲ್ಲಾ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಜೊತೆಯಲ್ಲಿ ಒಟ್ಟಾಗಿ ನಿಲ್ಲಬೇಕೆಂದು ಇ.ಎಂ.ಎಸ್. ಹೇಳಿದರು. ಲೋಕಸಭೆಯಲ್ಲಿ ಸರಕಾರದ ಭವಿಷ್ಯ ಏನಾಗುತ್ತದೋ ಎನ್ನುವುದಕ್ಕಿಂತ ಈ ರಾಷ್ಟ್ರದ ಭವಿಷ್ಯವೇ ಎಲ್ಲಾ ವಿಷಯಗಳಿಗಿಂತ ದೊಡ್ಡದು ಎಂದು ತಿಳಿಸಿದರು.

ಕೋಮು ದಳ್ಳುರಿಗೆ ಮತ್ತಷ್ಟು ಕಿಚ್ಚಿಡಲು ಬಿಜೆಪಿ ಪಡುತ್ತಿರುವ ಶ್ರಮದ ಪ್ರಾರಂಭವೇ ಈ ಅಕ್ಟೋಬರ್ 24ರ ಭಾರತ್ ಬಂದ್ ಎಂದು ಇ.ಎಂ.ಎಸ್. ಅವರು ಎತ್ತಿ ತೋರಿಸಿದರು.

ವಿ.ಪಿ.ಸಿಂಗ್‌ರವರನ್ನು ಜನತಾದಳ ಪಾರ್ಲಿಮೆಂಟರಿ ನಾಯಕತ್ವದಿಂದ ಕೆಳಗಿಳಿಸುವುದಾಗಲೀ, ರಾಷ್ಟ್ರೀಯ ರಂಗ ಸರಕಾರದ ಪತನ ಮಾಡುವುದಾಗಲೀ, ರಾಷ್ಟ್ರದಲ್ಲಿ ಕೋಮು ದಳ್ಳುರಿಯ ವಾತಾವರಣವನ್ನು ಹೆಚ್ಚಿಸುತ್ತದೆ ಮತ್ತು ಬಿಜೆಪಿಯ ದುಷ್ಟ ಯೋಜನೆಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ ಎಂದರು.

ಜನತಾದಳದಲ್ಲಿ ನಾಯಕತ್ವ ಬದಲಾವಣೆ ಮಾಡುವುದರ ಬಗ್ಗೆ ಸಿಪಿಐ(ಎಂ)ನ ಅಭಿಪ್ರಾಯವೇನು? ಎಂಬ ಪ್ರಶ್ನೆಗೆ ಇದು ಜನತಾದಳ ತೀರ್ಮಾನಿಸಬೇಕಾದ ವಿಷಯವಾಗಿದೆ. ಆದರೆ ವಿ.ಪಿ.ಸಿಂಗ್‌ರವರು ದೇವಿಲಾಲ್, ಚಂದ್ರಶೇಖರ್ ಮತ್ತು ಇತರೆ ಜನತಾದಳದ ಸದಸ್ಯರು ಒಮ್ಮತದಿಂದ ಆರಿಸಿದವರೇ ಆಗಿದ್ದಾರೆ ಎಂದು ಇಎಂಎಸ್ ಉತ್ತರಿಸಿದರು.

ಲೋಕಸಭೆಯಲ್ಲಿ ಮಧ್ಯಂತರ ಚುನಾವಣೆಗಳನ್ನು ತಮ್ಮ ಪಕ್ಷ ಇಷ್ಟ ಪಡುವುದಿಲ್ಲವೆಂದು ಹೇಳಿದರು. ಬಿಜೆಪಿಯ ವಿರುದ್ಧದ ಹೋರಾಟಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕಾಗಿದೆ ಎಂದರು.

ಕಾಂಗ್ರೆಸ್(ಐ)ನವರ ಕಡೆಯಿಂದ ಬದಲಿ ಸರಕಾರ ಯಾವುದೇ ಸಾಧ್ಯತೆಗಳಿಗೆ ಸಿಪಿಐ(ಎಂ) ಬೆಂಬಲಿಸುವುದಿಲ್ಲ ಮತ್ತು ರಾಷ್ಟ್ರೀಯ ಸರಕಾರವೆನ್ನುವ

8 ನೇ ಪುಟಕ್ಕೆ

ರಾಷ್ಟ್ರಕ್ಕೆ ಹಾಕಿದ ಸವಾಲು

ಬಿಜೆಪಿ ಅಧ್ಯಕ್ಷರಾದ ಅದ್ವಾನಿಯವರು ಸೋಮನಾಥದಿಂದ ಅಯೋಧ್ಯೆಯವರೆಗೆ ಚುನಾವಣಾ ಚಿಹ್ನೆಯಾದ ಕಮಲವನ್ನು ಪ್ರದರ್ಶಿಸುತ್ತಾ, ಬಿಜೆಪಿಗೆ ಮತವೀಯಿರಿ ಎಂದು ಪ್ರಚಾರ ಮಾಡುತ್ತಾ ಶ್ರೀರಾಮನಿಗೆ ಅಯೋಧ್ಯೆಯಲ್ಲಿ(ಬಾಬ್ರಿ ಮಸೀದಿ ಒಡೆದು) ಮಂದಿರ ಕಟ್ಟುವೆವು ಎಂದು ದೇಶದ ಹಲವು ರಾಜ್ಯಗಳಲ್ಲಿ(ಬಹಳ ಹಿಂದುಳಿದ ಜನ ವಿಭಾಗಗಳುಳ್ಳ ಪ್ರದೇಶಗಳನ್ನು ಆಯ್ದು) ರಥಯಾತ್ರೆ ಮಾಡಲು ಉದ್ಯುಕ್ತರಾದರು. ಎಲ್ಲಿಯಾದರೂ ರಾಜ್ಯ ಸರಕಾರ(ಬಿಹಾರ ಅಥವಾ ಉತ್ತರ ಪ್ರದೇಶ ಜನತಾ ದಳದ ರಾಜ್ಯ ಸರಕಾರ) ಅಥವಾ ಕೇಂದ್ರದ ರಾಷ್ಟ್ರೀಯ ರಂಗ ಸರಕಾರ ಶ್ರೀಮಾನ್ ಅದ್ವಾನಿಯವರ ರಥವನ್ನು ತಡೆದು ಅವರನ್ನು ದಸ್ತಗಿರಿ ಮಾಡಿದರೆ ಅಥವಾ ಅಯೋಧ್ಯೆಯಲ್ಲಿ ವಿಶ್ವಹಿಂದೂ ಪರಿಷತ್ ತಯಾರಿಸಿದ ಮಂದಿರದ ಕಟ್ಟಡದ ಪ್ಲಾನ್ ಪ್ರಕಾರ ಬಾಬ್ರಿ ಮಸೀದಿಯನ್ನು ಒಡೆದು ರಾಮ ಮಂದಿರವನ್ನು ಕಟ್ಟಲು ಕಾರ್ ಸೇವಾ ಮಾಡುವುದಕ್ಕೆ ಆತಂಕ ಒಡ್ಡಿದರೆ ನಾವು ಬಿಜೆಪಿಯವರು ರಾಷ್ಟ್ರೀಯ ರಂಗದ ವಿ.ಪಿ.ಸಿಂಗ್ ಸರಕಾರಕ್ಕೆ ನಿಶ್ಚಯವಾಗಿ ಕೊಟ್ಟ ಬೆಂಬಲವನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಬೆದರಿಕೆ ಒಡ್ಡಿದರು. ದೇಶದಲ್ಲಿ ರಕ್ತದ ಓಕುಳಿ ಹರಿದೀತು ಎಂದು ಭೀತಿ ಹುಟ್ಟಿಸಿದರು. ವಿ.ಪಿ.ಸಿಂಗ್ ಸರಕಾರ ಬಿದ್ದುಹೋದೀತು ಜಾಗ್ರತೆ ಎಂದು ಘೋಷಿಸಿದರು. ದೇಶದಲ್ಲಿ ಬಿಜೆಪಿ ಬಿಟ್ಟು ಉಳಿದ ಎಲ್ಲಾ ಪಕ್ಷಗಳವರು ಮತ್ತು ದೇಶದ ಎಲ್ಲಾ ಮುಂದಾಳುಗಳಿಗೆ ಎಷ್ಟು ಬುದ್ಧಿ ಹೇಳಿದರೂ ಅದ್ವಾನಿಯವರು ರಥಯಾತ್ರೆಯನ್ನು ನಡೆಸಿಯೇ ನಡೆಸಿದರು. ಇದೀಗ ಬೇರೆ ದಾರಿ ಇಲ್ಲದೆ ಕೇಂದ್ರ ರಾಷ್ಟ್ರೀಯ ರಂಗ ಸರಕಾರ ಹೇಳಿ ಬಿಹಾರಿನ ಲಲ್ಲೂ ಪ್ರಸಾದರು ಮುಖ್ಯಮಂತ್ರಿಯಾಗಿರುವ ಜನತಾದಳದ ಸರಕಾರವು ಅದ್ವಾನಿಯವರ ರಥ ನಿಲ್ಲಿಸಿ ಅದ್ವಾನಿಯವರನ್ನು ದಸ್ತಗಿರಿ ಮಾಡಿದ್ದಾರೆ. ಬಿಜೆಪಿಯು ಕೇಂದ್ರದ ವಿ.ಪಿ.ಸಿಂಗ್ ಸರಕಾರಕ್ಕೆ ತಾವು ಕೊಟ್ಟ ಬೆಂಬಲವನ್ನು ಹಿಂತೆಗೆದುಕೊಂಡಿದ್ದಾರೆ. ದೇಶದಲ್ಲಿ 'ಭಾರತ್ ಬಂದ್ ' ಮಾಡಲು ಕರೆ ಕೊಟ್ಟಿದ್ದಾರೆ.

ಸಂಪಾದಕೀಯ

ಬಿಜೆಪಿ ಒಂದು ರಾಷ್ಟ್ರೀಯ ಪಕ್ಷ. ಲೋಕಸಭೆಯಲ್ಲಿ 88 ಸ್ಥಾನಗಳುಳ್ಳ ಪಕ್ಷ. ಎಂದಲ್ಲ ಒಂದು ದಿನ ಕೇಂದ್ರದಲ್ಲಿ ಅಧಿಕಾರಕ್ಕೆ ಬರಬೇಕೆಂಬ ಆಸೆ ಇಟ್ಟ ಪಕ್ಷ. ಆದರೆ, ಅಂತಹ ಪಕ್ಷ ಸುಪ್ರೀಂ ಕೋರ್ಟು-ಹೈಕೋರ್ಟುಗಳ ತೀರ್ಪನ್ನು ಬಾಬ್ರಿ ಮಸೀದಿ ಮತ್ತು ರಾಮಜನ್ಮ ಭೂಮಿ ವಿಷಯದಲ್ಲಿ ನಾವು ಒಪ್ಪುವುದಿಲ್ಲ ಎಂದು ಹೇಳಿರುವುದು ಎಷ್ಟು ಸಮಂಜಸವೆಂದು ವಿಶ್ಲೇಷಿಸುವುದು ರಾಷ್ಟ್ರದ ರಾಜಕೀಯ ಹಿತದೃಷ್ಟಿಯಿಂದ ಪ್ರಾಮುಖ್ಯವಾಗಿದೆ. ಸರಕಾರದ ಒಂದು ಪ್ರಮುಖ ಭಾಗ ನ್ಯಾಯಾಂಗ. ಸರಕಾರವನ್ನು ನಾಳೆ ಮೂಡಲು ಹೊರಟ ಬಿಜೆಪಿ ನ್ಯಾಯಾಂಗವನ್ನೇ ನಾವು ತಿರಸ್ಕರಿಸುತ್ತೇವೆ ಎಂಬ ನಿಲುಮೆ ತಾಳಿರುವುದು ನಿಜವಾಗಿ ಆಶ್ಚರ್ಯ.

ಮಾತ್ರವಲ್ಲ ಬಹು ವೈವಿಧ್ಯತೆಯುಳ್ಳ ಭಾರತದಂತಹ ರಾಷ್ಟ್ರದಲ್ಲಿ 'ಮಸೀದಿ ಒಡೆದು ಮಂದಿರ ಕಟ್ಟುವೆವು' ಎಂದು ಘಂಟಾಘೋಷವಾಗಿ ಬಿಜೆಪಿ ಸಾರುವುದೆಂದರೆ, ಭಾರತ ರಾಷ್ಟ್ರಕ್ಕೇನೇ ಅದರ ಸ್ಫೂರ್ತಿಗೇನೇ ಕೊಡಲಿ ಪೆಟ್ಟು ಕೊಡುವ ಹವಣಿಕೆಯಿಲ್ಲದೆ ಮತ್ತೇನು?

ಕೇಂದ್ರದಲ್ಲಿರುವ ವಿ.ಪಿ.ಸಿಂಗ್ ಸರಕಾರಕ್ಕಾಗಲಿ, ಬಿಹಾರ್ ಅಥವಾ ಉತ್ತರಪ್ರದೇಶದ ಜನತಾದಳದ ಸರಕಾರಕ್ಕಾಗಲೀ ರಥಯಾತ್ರೆ ನಿಲ್ಲಿಸಿ ಅದ್ವಾನಿಯವರನ್ನು ದಸ್ತಗಿರಿ ಮಾಡುವ ಮತ್ತು ಕಾರ್ ಸೇವಾ ನಿಲ್ಲಿಸುವ ತೀರ್ಮಾನ ಮಾಡದೆ ಬೇರೆ ದಾರಿಯನ್ನು ಅನುಸರಿಸಲು ಬಿಡುವುದೆಂದರೆ ರಾಷ್ಟ್ರದ ಐಕ್ಯತೆಯನ್ನು ಮುರಿಯುವುದೆಂದರ್ಥ. ಇದನ್ನೇ ಅಕ್ಟೋಬರ್ 22 ರಂದು ರಾತ್ರಿ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ವಿ.ಪಿ.ಸಿಂಗ್ 'ಹೃದಯ ತುಂಡಾದರೆ

ಪುಟ 8 ಕ್ಕೆ.

ಬದಲಾಗುತ್ತಾ ಹೋದ ಜನಾಭಿಪ್ರಾಯಕ್ಕೊಂದು ಕೈಗನ್ನಡಿ

'ರಥಯಾತ್ರೆ' ಅಯೋಧ್ಯೆಯವರೆಗೆ ಶಾಂತಿಯುತವಾಗಿ ಹೋಗಿ ವಿವಾದಾಸ್ಪದ ಕಟ್ಟಡವನ್ನು ಯಾವುದೇ ರೀತಿಯಲ್ಲಿ ತಟ್ಟದೆ ರಾಮ ದೇಗುಲದ ಹೊರ ಆವರಣದ ಕೆಲಸ ಆರಂಭಿಸುವುದು ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ಒಳ್ಳೆಯದು.

ಟೈಂಸ್‌ಆಫ್ ಇಂಡಿಯಾ, ಅ.16

ಶ್ರೀಯುತ ಅದ್ವಾನಿ ಸಂಯಮದಿಂದ ವರ್ತಿಸುವ ಬಗ್ಗೆ ಯಾವುದೇ ಸಲಹೆಯನ್ನು ಲಕ್ಷಿಸಲು ನಿರಾಕರಿಸಿದ್ದಾರೆ.... ಸತ್ಯಸಂಗತಿಯೆಂದರೆ ಯಾವುದೇ ಜಾತ್ಯಾತೀತ, ಪ್ರಜಾಸತ್ತಾತ್ಮಕ ಸರಕಾರ ಕೆಲವು ಸಂಕುಚಿತ ಹಿತಾಸಕ್ತಿಗಳಿಗೆ ಅನುಕೂಲ ಮಾಡಿಕೊಡಲು ದೇಶದ ಕಾನೂನನ್ನು ತಿರುಚಲು ಸಾಧ್ಯವಿಲ್ಲ. ಬಿಜೆಪಿ ಹಿಂದೂ ಬಹು ಸಂಖ್ಯಾತರ ಪರವಾಗಿ ಮಾತನಾಡುತ್ತೇನೆ ಎನ್ನುತ್ತಿದೆ. ಆದರೆ ಜಾತ್ಯಾತೀತತೆ ಪರವಾದ ರ್‍ಯಾಲಿಗಳ ಯಶಸ್ಸನ್ನು ಕಂಡಾಗ ಅದರ ಈ ಮಾತು ಸಂಶಯಾಸ್ಪದ..... ದೇಶವೀಗ ಹಿಂದುತ್ವದ ಕಾರ್ಯಕರ್ತರು ಮತ್ತು ದೇಶದ ಕಾನೂನನ್ನು ಎತ್ತಿ ಹಿಡಿಯಬೇಕೆನ್ನುವವರ ನಡುವೆ ಮುಖಾಮುಖಿ ಘರ್ಷಣೆಗೆ ಸಿದ್ಧವಾಗಬೇಕಿದೆ.

ಟೈಂಸ್ ಆಫ್ ಇಂಡಿಯಾ, ಅ.17

ಶ್ರೀಯುತ ಎಲ್.ಕೆ.ಅದ್ವಾನಿಯವರ ಬಂಧನ ಭಾರತೀಯ ಪ್ರಭುತ್ವದ ಜಾತ್ಯಾತೀತ ಸ್ವರೂಪಕ್ಕೊಂದು ಉಜ್ವಲ ಸಾಕ್ಷಿ. ದೇಶವನ್ನು ಕಟ್ಟಿದ ಅಡಿಪಾಯವನ್ನೇ ಈ ಬಿಜೆಪಿ ಮುಖಂಡರ ಬಾಬ್ರಿ ಮಸೀದಿಯನ್ನು ಕೆಡವಿ ರಾಮದೇಗುಲ ಕಟ್ಟಬೇಕೆಂಬ ದೇಶ ಭಕ್ತರ ನಿರ್ಧಾರ ಕೆಳಜಾರಿಸಿತ್ತು.... ಹೀಗಿಗೂ ಪ್ರಧಾನ ಮಂತ್ರಿಗಳು ಗಂಭೀರ ಪರಿಣಾಮಗಳನ್ನು ಲಕ್ಷಿಸದೆ ನೀತಿ ಬದ್ಧ ದಾರಿ ಆರಿಸಿಕೊಂಡಿದ್ದಾರೆ.

ಟೈಂಸ್ ಆಫ್ ಇಂಡಿಯಾ, ಅ.2/.

ಕಾರ್ಮಿಕರು ಬಹಿಷ್ಕರಿಸಿದ ಭಾರತ್ ಬಂದ್

—ಕಾರ್ಯದರ್ಶಿ ಮಂಡಳಿ

ಎಲ್.ಕೆ.ಅದ್ವಾನಿಯವರ ಬಂಧನವನ್ನು ಪ್ರತಿಭಟಿಸಿ 24 ರಂದು ಭಾರತ್ ಬಂದ್‌ಗೆ ಬಿಜೆಪಿಯವರು ಕೊಟ್ಟ ಕರೆಗೆ ಬೆಂಗಳೂರು ಮತ್ತು ರಾಜ್ಯದ ಇತರ ಭಾಗಗಳ ಜನತೆ ಅದರಲ್ಲೂ ಮುಖ್ಯವಾಗಿ ಕಾರ್ಮಿಕ ವರ್ಗ ಬೆಂಬಲ ನೀಡದಿರುವುದಕ್ಕೆ ಅವರನ್ನೆಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ಕಾರ್ಯದರ್ಶಿ ಮಂಡಳಿ ಅಭಿನಂದಿಸಿದೆ. ಬೆಂಗಳೂರಿನಲ್ಲಿ ಬಿ.ಎಂ.ಎಸ್. ಸದಸ್ಯರು ಹಾಗೂ ಬಿಜೆಪಿ ಬೆಂಬಲಿಗರು ಕೂಡ ಬಂದ್ ಕರೆಗೆ ಓಗೊಡದೆ ಕೆಲಸಕ್ಕೆ ಹಾಜರಾಗಿರುವುದು ಗಮನಾರ್ಹ ಎಂದು ಅಭಿಪ್ರಾಯ ಪಟ್ಟಿದೆ.

ನಗರದ ಹಾಗೂ ರಾಜ್ಯದ ಹಲವೆಡೆ ಬಂದ್ ಮಾಡಿಸಲು ಗುಂಡಾಗಿರಿ, ಕಲ್ಲು ತೂರಾಟ ಮತ್ತು ಹಿಂಸೆಗಿಳಿದಿರುವುದನ್ನು ಹಾಗೆಯೇ ಬಂದಿನ ನೆವದಲ್ಲಿ ಬಿಜೆಪಿ, ಆರ್‌ಎಸ್‌ಎಸ್, ವಿಎಚ್‌ಪಿನವರು ಕೋಲಾರ ಜಿಲ್ಲೆ ಹಾಗೆಯೇ ರಾಜ್ಯದ ಹಲವಾರು ಕಡೆಗಳಲ್ಲಿ ಅಲ್ಪ ಸಂಖ್ಯಾತರ ಮೇಲೆ ಧಾಳಿ ಮಾಡಿ ಮನೆ, ಅಂಗಡಿಗಳಿಗೆ ಬೆಂಕಿ ಹಚ್ಚಿ ಗೂಂಡಾಗಿರಿ ನಡೆಸಿರುವುದನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಖಂಡಿಸಿದೆ.

ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರ ಬಂದನ್ನು, ಬಂದಿನ ಹೆಸರಿನಲ್ಲಿ ನಡೆಯುವ ಗೂಂಡಾಗಿರಿಯನ್ನು ತಡೆಯಲು ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದನ್ನು ಸಿಪಿಐ(ಎಂ) ಖಂಡಿಸುತ್ತದೆ. ಇಲ್ಲಿಯವರೆಗೆ ಯಾವುದೇ ಬಂದ್‌ಗಳಲ್ಲಿಯೂ ಕೈಗೊಳ್ಳದ ಕ್ರಮಕ್ಕೆ ಕೈಹಾಕಿ ಕೆ.ಎಸ್.ಆರ್.ಟಿ.ಸಿ.ಯವರು ದೂರದ ಊರುಗಳಿಗೆ ರಾತ್ರಿ ಓಡಾಡುವ ಬಸ್ಸುಗಳನ್ನು ನಿಲ್ಲಿಸುವ ಮೂಲಕ ಬಿಜೆಪಿಯ ಬಂದ್ ಕರೆಗೆ ಅಪ್ರತ್ಯಕ್ಷ ಬೆಂಬಲ ನೀಡಿದೆ ಎಂದೂ ಸಿಪಿಐ(ಎಂ) ಆರೋಪಿಸಿದೆ.

ಬಿಜೆಪಿಯ ಅಪಪ್ರಚಾರಗಳಿಗೂ, ಕುಕೃತ್ಯಗಳಿಗೂ ಹೆದರದೆ, ಜನತೆ ಮತೀಯ ಸೌಹಾರ್ದತೆಯನ್ನು ಕಾಪಾಡಬೇಕೆಂದೂ ಈ ದಿಸೆಯಲ್ಲಿ ಎಲ್ಲಾ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಮತೀಯ ಶಕ್ತಿಗಳ ಹಿಂಸಾ ಕೃತ್ಯಗಳನ್ನೆದುರಿಸಲು ಸಂಯುಕ್ತ ಕಾರ್ಯಾಚರಣೆ ನಡೆಸಬೇಕೆಂದು ಸಿಪಿಐ(ಎಂ) ಕರೆ ಕೊಟ್ಟಿದೆ.



ದ.ರಾ.ಬೇಂದ್ರೆಯವರ
ಕುರುಡು ಕಾಂಚಾಣ

ಕುರುಡು ಕಾಂಚಾಣ ಕುಣೆಯುತಲಿತ್ತು
ಕಾಲಿಗೆ ಬಿದ್ದವರ ತುಳಿಯುತಲಿತ್ತೋ
ಕುರುಡು ಕಾಂಚಾಣ!!

ಬಾಣಂತಿಯೆಲುಬು ಸಾ
ಬಾಣದ ಬಳುಪಿನ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ;
ಸಣ್ಣ ಕಂದಮ್ಮಗಳ
ಕಣ್ಣಿನ ಕವಡಿಯ
ತಣ್ಣನ್ನ ಜೋಮಾಲಿ ಕೊರಳೊಳಗಿತ್ತೋ;

ಬಡವರ ಒಡಲಿನ
ಬಡಬಾನಲದಲ್ಲಿ
ಸುಡುಸುಡು ಪಂಜು ಕೈಯೊಳಗಿತ್ತೋ
ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ—
ದುಂಬಿದಂತುಧೋ ಉಧೋ ಎನ್ನುತಲಿತ್ತೋ

ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ
ಗುಡಿಯೊಳಗೆ ಗಣಣ, ಮಾ
ಹಡಿಯೊಳಗ ತನನ, ಅಂ
ಗಡಿಯೊಳಗೆ ಝಣಣ ನುಡಿಗೊಡುತ್ತಿತ್ತೊ

ಹ್ಯಾಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ.

1928-33 ರ ಕಾಲ. ಇಡೀ ಪ್ರಪಂಚ ಒಂದು ಆರ್ಥಿಕ ಪ್ರಳಯಕ್ಕೆ—ಹಿಂದೆ ಎಂದೆಂದೂ ಕಾಣದ, ಮತ್ತೊಮ್ಮೆ ಇಲ್ಲಿಯವರೆಗೂ ಕಾಣದಿರುವ ಮಹಾನ್ ಆರ್ಥಿಕ ಪ್ರಳಯಕ್ಕೆ ಸಿಲುಕಿತ್ತು. ಕೋಟ್ಯಾಂತರ ಕಾರ್ಮಿಕರು ಇದ್ದಕ್ಕಿದ್ದಂತೆ ಕೆಲವೇ ದಿನಗಳಲ್ಲಿ ಬೀದಿಗೆಸೆಯಲ್ಪಟ್ಟರು. ಅತ್ಯುತ್ತಮ ವಿಜ್ಞಾನಿಗಳು, ಬುದ್ಧಿಜೀವಿವರ್ಗ ಮೈಲುಗಟ್ಟಲೆ ಕ್ಯೂ ನಿಂತು ಕಷ್ಟಪಟ್ಟು ಮಣ್ಣುತೋಡುವ ಕೆಲಸ ದೊರಕಿಸಿಕೊಂಡು ತುತ್ತು ಅನ್ನ ಕಾಣುತ್ತಿದ್ದ ದಿನಗಳವು.

ಭಾರತದ ಪರಿಸ್ಥಿತಿಯಂತೂ ಇನ್ನಷ್ಟು ಭೀಕರವಾಗಿತ್ತು. ರೈತರು ಬೆಳೆದ ಫಸಲನ್ನು ಕೇಳುವವರೇ ದಿಕ್ಕಿಲ್ಲ. ಬೆಲೆಗಳು ಅರ್ಧಕ್ಕರ್ಧ ಕುಸಿದವು. ಎಲ್ಲೆಡೆಯೂ ಹಾಹಾಕಾರ, ಹಸಿವು, ಆಕ್ರಂದನ. ಇಂತಹ ಸನ್ನಿವೇಶದಲ್ಲಿಯೇ 1930ರ 'ಕರ ನಿರಾಕರಣೆ' ಅಥವಾ 'ಉಪ್ಪಿನ ಸತ್ಯಾಗ್ರಹ' ಹುಟ್ಟಿದ್ದು.

ಆಗ ಬಾಂಬೆ ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ಚಳುವಳಿ ಅರಳುತ್ತಿದ್ದ ಸಮಯ. ಹೊಸ ಸಮಾಜದ ಕನಸುಗಳು ಮೂಡಿ ಅದಕ್ಕಾಗಿ ತುಡಿಯುತ್ತಿದ್ದ ಸಮಯ. ಇಂತಹ ಸಂದರ್ಭದಲ್ಲಿ ಹಸಿವಿನ ಆಕ್ರಂದನ ಜನ ಸಮುದಾಯದ ಮೇಲೆ ಎರಗಿತು. ಇಂಗ್ಲಿಷ್ ಶಿಕ್ಷಣದ ಫಲವಾಗಿ ಹೊಸ ಮೌಲ್ಯಗಳಿಗಾಗಿ ಕಾತರಿಸುತ್ತಿದ್ದ ಅನೇಕ ಯುವಕರು ರೈತರನ್ನು ಎಚ್ಚರಿಸುವುದರಲ್ಲಿ, ಅವರೊಡನೆ ಬೆರೆತು ಹೋರಾಟಗಳನ್ನು ಹೂಡುವುದರಲ್ಲಿ ನಿರತರಾದರು. ಈ ಶಿಕ್ಷಿತ ಸಮುದಾಯದ ಭಾಗವಾಗಿಯೇ ಇದ್ದ ಕವಿಗಳನ್ನು ಈ ಹಸಿವಿನ ನೋವು, ಸಾವಿನ ಕರಾಳತೆ ತಟ್ಟದೆ ಇರಲಿಲ್ಲ. ಧಾರವಾಡದಲ್ಲಿಯೇ ವಾಸಿಸುತ್ತಾ ಅಲ್ಲಿನ ಸಮುದಾಯದ ಭಾಗವಾಗಿದ್ದ ಬೇಂದ್ರೆಯವರ ಕವನಗಳಲ್ಲಿ ಈ ಕ್ರೂರತೆ ಪ್ರತಿಫಲಿಸಿತು.

ಆಗ ಅವರ ಲೇಖನಿಯಿಂದಿಳಿದು ಬಂದ ಜನರ ದು:ಖ ದುಮ್ಮಾನಗಳು, ಸಂಕಟಗಳು ಅಂದಿನ ಜನ ಸಮುದಾಯದ ಮನಸ್ಸನ್ನು ಗಾಢವಾಗಿ ಕಲಕಿದವು. ಇಂದಿಗೂ ತೀವ್ರವಾಗಿ ಕಲಕುತ್ತಿವೆ. ಕರ್ನಾಟಕದ ಪ್ರಜಾಸತ್ತಾತ್ಮಕ ಚಳುವಳಿಯ ಬೆಳವಣಿಗೆಯಲ್ಲಿ ನೆರವಾಗಿವೆ.

"ಭೂಮಿ ತಾಯಿಯ ಚೊಚ್ಚಲ ಮಗನನ ಕಣ್ತೆರೆದೊಮ್ಮೆ ನೋಡಿಹಿರೇನು? .... ಕೊರಳಿಗೆ ಹತ್ತಿದೆ ಸಾಲದ ಶೂಲ ಆದರೂ ಬರದೂ ಯಮನಿಗೆ ಕರುಣ", "ಕಣ್ಣೀರಿನ ಕಡಲ ನಡುವೆ ತೇಲುತಿಹವು ನೆಲಗಳು ತಾಯಿ ಹಾಲು ಕುದಿಯುತಿಹುದು ಕೆಂಪೇರಲು ಜಲಗಳು" ಎಂದು ಉದ್ಧರಿಸಿದ ಬೇಂದ್ರೆಯವರು ಸ್ವತ: ನಿಷ್ಠ ವೈದಿಕ ಆಸ್ತಿಕರಾಗಿದ್ದರೂ "ದೇವರದೊಂದು ಗೋರಿಯ ಕಟ್ಟಿ, ಧರ್ಮದ ಧೂಪಕೆ ಬೆಂಕಿಯನಿಕ್ಕಿ.... ನೆಲವನ್ನೆಲ್ಲಾ ತುತ್ತುವೆನೆಂದು ಗದರುತ್ತಿಹುದು ಗರ್ಜಿಸುತಿಹುದು ಬಡವರ ಬಗ್ಗರ ತುತ್ತಿನ ಚೀಲದ ಒಳಗಿನ ಒಳಗಿನ ಒಳದನಿಯೆಂದು ಎಂಬುದನ್ನು ಕಂಡರು. ಈ ಸಂದರ್ಭದ ಅವರ ಕವನಗಳು ಬೇಂದ್ರೆಯವರ ಸಾಹಿತ್ಯ ಸೃಷ್ಟಿಗೆ ಒಂದು ಹೊಸ ತಿರುವನ್ನು ನೀಡಿವೆ.

'ಕುರುಡು ಕಾಂಚಾಣ' ಈ ಕವನಗಳ ಸಾಲಿನಲ್ಲೊಂದು ಶಿಖರ. ಒಬ್ಬ ವಿಮರ್ಶಕರೆಂದಂತೆ 'ಕನ್ನಡದ ಶ್ರೇಷ್ಠ ಕವನಗಳಲ್ಲಿ ಒಂದು'. 'ಭೂಮಿಯ ಕಣಜ ಕಿಕ್ಕಿರಿದು ತುಂಬಿದ್ದರೂ ಬೊಕ್ಕಸದೊಡಲು ಕಕ್ಕಸ ಬಡುತ್ತಿದ್ದರೂ ಬರಿದೋ ಬರಿದಾದ, ತೆರವೋ ತೆರವಾದ ತುತ್ತಿನ ಚೀಲದ ಬಡವರ ಬಗ್ಗರ ತುತ್ತಿನ ಚೀಲದ' ಪರಿಸ್ಥಿತಿಯ ಬಗ್ಗೆ ಮಿಡಿದೊಂದು ಅಪೂರ್ವ ಬಗೆ 'ಕುರುಡು ಕಾಂಚಾಣ' ಕವನ.

ತಲೆಯ ಮೇಲೆ ಮಹಾಲಕ್ಷ್ಮಿಯನ್ನು ಹೊತ್ತ ಕೊಲ್ಲಾಪುರದವ್ವನ ಭಕ್ತರು ಕುಣಿಯುತ್ತಾ ರುದ್ರನಾಟ್ಯವನ್ನಾಡುವ ಚಿತ್ರ, ಕಾಂಚಾಣದ ಭೀಕರತೆಯನ್ನು ಶಕ್ತವಾದ ಮಾತುಗಳಲ್ಲಿ ನಮ್ಮ ಕಣ್ಣಿಗೆ ಕಟ್ಟುವಂತೆ ಮಾಡಿದೆ. ನೇರವಾಗಿ ನಮ್ಮತ್ತ ಕ್ರೂರ ನೋಟ ಬೀರುತ್ತಾ ಎದುರಿಗೆ ನಿಲ್ಲುವ ಈ ಪ್ರತಿಮ ಬಹಳ ಕಾಲ ಕಾಡುತ್ತದೆ. ಆರು ಸಾಲಿಗಳ ಪದ್ಯಗಳ ಈ ಹಾಡು, ಅದರ ಲಯ ಕವನವನ್ನು ಹರಿತವಾಗಿಸಿದೆ. ಇಲ್ಲಿ ಕಾವ್ಯ ಖಡ್ಗವಾಗಿದೆ.

ಮಹಾಲಕ್ಷ್ಮಿಯ ಭಕ್ತರ ಒಂದೊಂದೂ ತೊಡವೂ ಕುರುಡು ಕಾಂಚಾಣದ ಕ್ರೌರ್ಯಕ್ಕೆ ಸ್ಮಾರಕಗಳಾಗಿವೆ. ಸಣ್ಣ ಕಂದಮ್ಮಗಳ ಕಣ್ಣಿನ ಕವಡೆಯ ತಣ್ಣನ್ನ ಜೋಮಾಲಿಯನ್ನು ಕಲ್ಪಿಸಿಕೊಂಡಾಗ ಸಹೃದಯನ ಮೈ ತಣ್ಣಗೆ ಬೆವರುತ್ತದೆ. ಬಡವರ ಒಡಲಿನ ಬೆಂಕಿಯಲ್ಲಿ ಹೊತ್ತಿಸಿಕೊಂಡ ಪಂಜು, ಅವರ ಕಣ್ಣೀರನ್ನು ಕುಡಿಯುವ ಬಾಯಿ ಕೂಲಿಗಾರರ ಮೃತೊಗಲನ್ನು ಸುಟ್ಟು ಪಡೆದ ಹಣೆಯ ಭಂಡಾರ ಕ್ರೌರ್ಯವೇ ಮೂರ್ತಿವೆತ್ತ ಹಣದ ಈ ಚಿತ್ರಣ ಕಾರ್ಲ್ ಮಾರ್ಕ್ಸ್‌ರ ರಂಧ್ರ ರಂಧ್ರಗಳಿಂದಲೂ ರಕ್ತವನ್ನು ಸುರಿಸುತ್ತಾ ಎದ್ದು ಬರುವ ಚಿನ್ನದ ವರ್ಣನೆಯನ್ನು ನೆನಪಿಗೆ ತರುತ್ತದೆ.

ಕೂಲಿ ಕುಂಬಳಿಯವರ ಪಾಲಿನ ಮೃತ್ಯುವಾಗುವ ಈ ಕಾಂಚಾಣ, ಗುಡಿಯೊಳಗೆ, ಮಹಡಿಯೊಳಗೆ, ಅಂಗಡಿಯೊಳಗೆ ನಲಿಯುತ್ತದೆ. ಧರ್ಮಕ್ಕೆ, ದೌಲತ್ತಿಗೆ, ಶೋಷಣೆಗೆ ಅಡಿಪಾಯವಾಗುತ್ತದೆ ಎಂದು ವರ್ಣಿಸುತ್ತಾರೆ ಬೇಂದ್ರೆಯವರು.

ಕೊನೆಗೆ ಕಾಂಚಾಣದ ಅಂತ್ಯವನ್ನು ಕವಿ ಕಾಣುತ್ತಾರೆ. ಅದರ ಮಂಗಾಟವೇ ಅದಕ್ಕೆ ಕೊನೆಯಾಗುವುದನ್ನು ನಾಲ್ಕು ಜನರ ಹೆಗಲ ಮೇಲಿನ ಹೆಣವಾಗುವುದನ್ನೂ ಸೂಚಿಸುತ್ತಾರೆ. ಕುರುಡು ಕಾಂಚಾಣ ಕುಣಿಕುಣಿದು ತನ್ನಷ್ಟಕ್ಕೆ ತಾನೇ ಹೆಣವಾಗುತ್ತದೆ ಎಂಬ ಸೂಚನೆ ಅಸ್ವಾಭಾವಿಕವಾಗಿದೆ. ಕಣ್ಣಿನ ಕವಡೆಯ ಜೋಮಾಲೆ ಬಾಣಂತಿಯೆಲುಬಿನ ಕಿರುಗೆಜ್ಜೆಗಳು ಕೂಲಿಕಂಬಳಿಯವರ ತೊಗಲಿನ ಧೂಳಿ ಎಲ್ಲಕ್ಕೂ ಮಿಗಿಲಾಗಿ ಬಡವರ ಒಡಲಿನ ಬೇಗೆಯ ಪಂಜು, ಕಾಂಚಾಣದ ಒಡವೆಗಳಾಗಿ ಅದಕ್ಕೆ ಶೋಭೆ ತರುವುದನ್ನು ಬಿಟ್ಟು ಅದರ ವಿರುದ್ಧ ತಿರುಗಿ ಸುಡಲು ಪ್ರಯತ್ನಿಸಿದಾಗ ಮಾತ್ರವೇ ಅದು ಅಂಗಾತ ಬೀಳಲು ಸಾಧ್ಯ ಎಂಬ ಸತ್ಯವನ್ನೂ ಮನಸ್ಸಿಗೆ ತಂದುಕೊಳ್ಳುತ್ತಲೇ ಕಾಂಚಾಣದ ಅತ್ಯರ ಈ ಸೂಚನೆಯನ್ನು ಸ್ವೀಕರಿಸಬೇಕು.

ಒಟ್ಟಿನಲ್ಲಿ ಕುರುಡು ಕಾಂಚಾಣದ ಅವಾಸ್ತವಿಕ ಚಿತ್ರಣ ಬೇಂದ್ರೆಯವರನ್ನು ಮೀರಿ ಬೆಳೆಯುತ್ತದೆ. ಕಥ್ಯವನ್ನು ಮೀರಿದ ಕೃತಿಯಾಗುತ್ತದೆ. ಆದ್ದರಿಂದಲೇ ಕನ್ನಡದ ಶ್ರೇಷ್ಠ ಕವನಗಳಲ್ಲೊಂದಾಗುತ್ತದೆ.

ಕನ್ನಡ ಸಾಹಿತ್ಯ ಪರಂಪರೆ —ನಮ್ಮ ದೃಷ್ಟಿಯಲ್ಲಿ

ಕನ್ನಡ ಸಾಹಿತ್ಯ ಕನ್ನಡ ಮಾತನಾಡುವ ಜನರೆಲ್ಲರ ಸ್ವತ್ತು. ಈ ಸಾಹಿತ್ಯವನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಸಿಸುವ ಕೆಲಸ ನಿರಂತರವಾಗಿ ನಡೆದಿದೆ. ಮುಂದಿನ ಯುಗದ ಹರಿಕಾರರಾದ ಕಾರ್ಮಿಕವರ್ಗದ ದೃಷ್ಟಿಕೋನದಿಂದ ಕನ್ನಡ ಸಾಹಿತ್ಯವನ್ನು ಪರಿಶೀಲಿಸುವ, ಅರ್ಥೈಸುವ ಕೆಲಸ, ಕನ್ನಡ ಸಾಹಿತ್ಯ ಪರಂಪರೆಯನ್ನು ನಮ್ಮದಾಗಿಸಿಕೊಳ್ಳುವ, ನಮ್ಮದಾಗಿಸಿ ಕೊಂಡು ಜನ ಚಳುವಳಿಯನ್ನು ಶ್ರೀಮಂತಗೊಳಿಸುವ, ವಿಶಾಲವಾಗಿಸುವ ಕೆಲಸ ಇನ್ನೂ ಪೂರೈಸಬೇಕಾದ ಕೆಲಸ. ಹಾಗೆಯೇ ಕನ್ನಡ ಸಾಹಿತ್ಯದ ಬೆಳವಣಿಗೆಯ ಮುಂದಿನ ಮಜಲನ್ನು ಕಂಡರಿಸುವ ಕೆಲಸದಲ್ಲಿಯೂ ನಮ್ಮ ಕಾಣಿಕೆ ಸಲ್ಲಬೇಕಾಗಿದೆ.

ಈ ಕೆಲಸದ ಭಾರವನ್ನು ಹೊರುವ ಸಾಮರ್ಥ್ಯ 'ಐಕ್ಯರಂಗ' ಕ್ಕಿಲ್ಲವಾದರೂ ಒಂದು ಕಿರು ಕಾಣಿಕೆ ಸಲ್ಲಿಸುವ ಕಾತರವಿದೆ. ಕನ್ನಡ ರಾಜ್ಯೋತ್ಸವ ದಿನವಾದ ನವೆಂಬರ್ ಒಂದರಿಂದ ಈ ಕೆಲಸವನ್ನು ಆರಂಭಿಸುತ್ತಿದ್ದೇವೆ. ಒಂದು ಕವನ, ಅಥವಾ ಕಥೆ, ಕಾದಂಬರಿಗಳ ಭಾಗಗಳನ್ನು ನೀಡುತ್ತಾ ಅದನ್ನು ನಮ್ಮ ದೃಷ್ಟಿಕೋನದಿಂದ ಕೆಲವೇ ವಾಕ್ಯಗಳಲ್ಲಿ ಪರಿಚಯ ಮಾಡಿಕೊಡುವ ಕಾಲಂ ಇದು. "ಐಕ್ಯರಂಗ"ದಲ್ಲಿ ಪ್ರಕಟವಾಗುತ್ತಿರುವ ಕಾಲಂ-ಅಂಕಣಗಳ ಮಾಲಿಕೆಗೊಂದು ಹೊಸ ಸೇರ್ಪಡೆ. ಎರಡು ವಾರಕ್ಕೊಮ್ಮೆ ನಿಮ್ಮ ಮುಂದೆ ಬರಲಿದೆ.

ಕರ್ನಾಟಕದಲ್ಲ ಪ್ರಜಾಸತ್ತಾತ್ಮಕ ಚಳುವಳಿಯ ಬೆಳವಣಿಗೆ —ಒಂದು ಲೇಖನ ಮಾಲೆ.

ಭಾರತದಲ್ಲಿ 'ಜನತಾ ಪ್ರಜಾಪ್ರಭುತ್ವ'ವನ್ನು ಸ್ಥಾಪಿಸಲು, ಬಂಡವಾಳಶಾಹಿಗಳು ನೆರವೇರಿಸಲು ಅಂಜಿದ ಪ್ರಜಾಸತ್ತಾತ್ಮಕ ಚಳುವಳಿಯನ್ನು ಪೂರೈಸಲು ನಮ್ಮ ಪಕ್ಷ ಪಣ ತೊಟ್ಟಿದೆ.

ಈ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸಬೇಕಾದರೆ ಕರ್ನಾಟಕದ ಘಟಕದವರಾದ ನಾವು ಭಾರತದಲ್ಲಿನ ಪ್ರಜಾಸತ್ತಾತ್ಮಕ ಚಳುವಳಿಯ ಸ್ಥಿತಿಯನ್ನು ಅಭ್ಯಸಿಸಬೇಕು. ಕರ್ನಾಟಕದ ಪ್ರಜಾಪ್ರಭುತ್ವ ಚಳುವಳಿಯ ವಿಶಿಷ್ಟ ಸ್ವರೂಪ, ಗುಣಗಳ ವಿವರವಾದ ತಿಳುವಳಿಕೆಯಿಂದ ಮಾತ್ರವೇ ಅಖಿಲಭಾರತ ಮಟ್ಟದಲ್ಲಿ ಪಕ್ಷ ರೂಪಿಸಿದ ಧೋರಣೆ-ನಿಲುವುಗಳನ್ನು ಕರ್ನಾಟಕದ ಪರಿಸ್ಥಿತಿಗೆ ಅಳವಡಿಸಲು, ಇಲ್ಲಿನ ಕ್ರಾಂತಿಕಾರಿ ಚಳುವಳಿಯನ್ನು ಪರಿಣಾಮಕಾರಿಯಾಗಿ ಬೆಳೆಸಲು ಸಾಧ್ಯ.

ಇದಕ್ಕೆ ನೆರವಾಗುವಂತೆ 'ಐಕ್ಯ ರಂಗ' "ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯ ಬೆಳವಣಿಗೆ" ಎಂಬ ಲೇಖನ ಮಾಲೆಯನ್ನು ಆರಂಭಿಸಲಿದೆ. ಪ್ರತಿ 15 ದಿನಗಳಿಗೊಮ್ಮೆ ಪ್ರಕಟವಾಗುವ ಲೇಖನ ಮಾಲೆಯ ಮೊದಲ ಹಂತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿನ ಕರ್ನಾಟಕದ ಪ್ರಜಾಸತ್ತಾತ್ಮಕ ಚಳುವಳಿಯನ್ನು 10 ಲೇಖನಗಳ ಮೂಲಕ ವಿವರಿಸಲಾಗುತ್ತದೆ.

ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ನೋಡುವ ಈ ಲೇಖನಗಳು ಗಂಭೀರವಾದ ವಿಚಾರ ಮಂಥನಕ್ಕೆ ನಿಮ್ಮ ಸುತ್ತ ಮುತ್ತಲಿನ ಸಮಾಜದ ವಿಶ್ಲೇಷಣೆಗೆ ತೊಡಗಿಸಲಿವೆ.

ನಿರೀಕ್ಷಿಸಿ "ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯ ಬೆಳವಣಿಗೆ ಒಂದು ಲೇಖನ ಮಾಲೆ".


ಅದೋ ನೋಡಿ ನಿಜಲಿಂಗಪ್ಪನವರ ರಾಜೀನಾಮೆ ಪಡೆದಾಯಿತು

ಅದೋ ನೋಡಿ, ರಾಜೀನಾಮೆ ಪತ್ರದ ಮೇಲೆ ಎಸ್.ನಿಜಲಿಂಗಪ್ಪನವರ ಸಹಿ ತೆಗೆದುಕೊಂಡಾಯಿತು ಎಂದು ಅತ್ಯಾನಂದದಿಂದ ಕುಣಿಯುತ್ತ ಉದ್ಗಾರ ತೆಗೆದವರು ತರುಣ ಕಮ್ಯುನಿಸ್ಟ್ ಕಾರ್ಯಕರ್ತ ತಡಸದಮಠ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಿಂದ ಎಸ್.ನಿಜಲಿಂಗಪ್ಪನವರು ಕರ್ನಾಟಕ ಏಕೀಕರಣ ಆಗಲೇಬೇಕು, ಕನ್ನಡಿಗರ ಪ್ರತ್ಯೇಕ ಭಾಷಾವಾರು ಪ್ರಾಂತ ರಚನೆ ಆಗಲೇ ಬೇಕೆಂಬ ಪಂಡಿತ ಜವಹರಲಾಲ್ ನೆಹರು ಹಾಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೇಲೆ ಪ್ರಭಾವ ಬೀರಿ ಒತ್ತಾಯ ತಂದು ಮೂರು ಕೋಟಿ ಕನ್ನಡಿಗರ ಕನಸನ್ನು ನನಸಾಗಿಸುವುದರಲ್ಲಿ ವಿಫಲರಾಗಿರುವುದರಿಂದ ಅವರು ತಮ್ಮ ಕೆ.ಪಿ.ಪಿ.ಸಿ. ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬ ಒತ್ತಾಯ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್(ಅಕರಾನಿ ಪರಿಷತ್)ನಿಂದ ಬಂದಿತ್ತು.

ಎರಡು ಸಲ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಎಸ್.-ನಿಜಲಿಂಗಪ್ಪನವರು ಹಾಗೂ ಕಾಂಗ್ರೆಸ್ ಪಕ್ಷವೇ ಕರ್ನಾಟಕ ಏಕೀಕರಣಕ್ಕೆ ಕಾರಣವೆಂಬ ಪ್ರಚಾರ ನಮ್ಮಲ್ಲಿದೆ. ನಿಜನಿಂಗಪ್ಪನವರು ಪ್ರಭಾವಶಾಲಿ ವ್ಯಕ್ತಿ ಕೆಪಿಸಿಸಿ ಅಧ್ಯಕ್ಷ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾಗಿದ್ದರೂ ಕೂಡ ಕನ್ನಡಿಗರ ಒತ್ತದಕ್ಕೆ ಮಣಿದು ದಿಲ್ಲಿಗೆ ಹೋದರೂ, ಹೈಕಮಾಂಡಿನ ಮೇಲೆ ಪ್ರಭಾವ ಬೀರಿ ಏಕೀಕರಣ ಸಾಧಿಸದೆ, ನೆಹರೂರವರ ಮೃದು ಮಾತುಗಳಿಗೆ ಮಣಿದು ವಾಪಸು ಬರುತ್ತಿರುವುದನ್ನು ಕಂಡ ಕಮ್ಯುನಿಸ್ಟ್ ಪಕ್ಷ ಏಕೀಕರಣ ಸಾಧನೆಗಾಗಿ ಬೇರೆ ದಾರಿ ಹಿಡಿಯಬೇಕಾಯಿತು. ಭಾಷಾವಾರು ಪ್ರಾಂತ ರಚನೆಗಾಗಿ ಕೆಪಿಸಿಸಿ ಅಧ್ಯಕ್ಷಪದವಿಗೆ ರಾಜೀನಾಮೆ ಕೊಡಬೇಕೆಂದು ಒತ್ತಾಯಪಡಿಸಿದರೂ ಕೂಡ ಅದಕ್ಕೆ ಒಪ್ಪದ ನಿಜಲಿಂಗಪ್ಪನವರಿಂದ ಒತ್ತಾಯದ ಮೂಲಕ ರಾಜೀನಾಮೆ ಪಡೆಯಬೇಕಾಯಿತು ಎಂಬ ಸಂಗತಿ ಬಹಳ ಜನರಿಗೆ ಗೊತ್ತಿಲ್ಲ.

ಕರ್ನಾಟಕ ಪ್ರಾಂತ ಪಡೆಯುವುದರಲ್ಲಿ ತಮ್ಮ ಅಸಹಾಯಕತೆಯನ್ನು ಪ್ರದರ್ಶಿಸುತ್ತಾ ಕಾಂಗ್ರೆಸ್ ಮುಖಂಡರಿಗೆ ಬೇಸತ್ತ ಕಮ್ಯುನಿಸ್ಟ್ ಪಕ್ಷ, ಸೋಷಲಿಸ್ಟ್ ಪಾರ್ಟಿ, ಹೊಸ ಮನೆ ಸಿದ್ದಪ್ಪ, ವಾಲಿ ಚೆನ್ನಪ್ಪ, ಯಜಮಾನ ರುದ್ರಪ್ಪ ಮುಂತಾದವರನ್ನೂ(-ಎಲ್ಲಾ ಕಾಂಗ್ರೆಸ್ಸಿಗರು) ಇಂಚಗೇರಿ, ಅರಲ ಗುಂದಗಿ ಮಠದ ಸ್ವಾಮಿಗಳನ್ನು ಸೇರಿಸಿಕೊಂಡು ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತನ್ನು ರಚಿಸಿ ಭಾಷಾವಾರು ರಚನೆಗಾಗಿ ತೀವ್ರ ಚಳುವಳಿ ಪ್ರಾರಂಭಿಸಿತ್ತು. ಆ ಚಳುವಳಿಯಲ್ಲಿ ಪೋಲೀಸ್ ದೌರ್ಜನ್ಯ, ಜೈಲುವಾಸಗಳನ್ನೆಲ್ಲಾ ಅನುಭವಿಸಿಯಾಗಿತ್ತು. ಕಾಂಗ್ರೆಸ್ಸಿನ ಕೆಲ ನಾಯಕರೂ ಕಾಂಗ್ರೆಸ್ ವಿರುದ್ಧವೇ ವಿವಿಧ ರೀತಿಯ ಚಳುವಳಿ ಆರಂಭಿಸಿದರು. ಅಂದಾನಪ್ಪ ದೊಡ್ಡಮೇಟಿಯವರು ಕೆಲವೇ ದಿವಸದ ಉಪವಾಸ ಕೈಗೊಂಡಿದ್ದರು. ಗುದ್ಲೆಪ್ಪ ಹಳ್ಳಿಕೇರಿಯವರು ರೈಲ್ವೆ ಹಳಿಯ ಮೇಲೆ ಕುರ್ಚಿ ಹಾಕಿಕೊಂಡು ಸತ್ಯಾಗ್ರಹ ನಡೆಸಿದರು. ಅದರ ಗುಂಚಿ ಶಂಕರೇಗೌಡರು 14 ದಿವಸ ಉಪವಾಸ ಕೈಗೊಂಡರು. ಅಕರಾನಿ ಚಳುವಳಿಯ ಕೆಪಿಸಿಸಿ ಅಧ್ಯಕ್ಷ ಎಸ್.ನಿಜಲಿಂಗಪ್ಪನವರ ರಾಜೀನಾಮೆ ಪಡೆಯಬೇಕೆಂಬ ನಿರ್ಧಾರ.

ಹುಬ್ಬಳ್ಳಿಯ ಇಂದಿನ ನೆಹರು ಮೈದಾನ ಅಂದಿನ ಗುಳಕವ್ವನ ಕೆರೆ. ಕೆಪಿಸಿಸಿ ಮುಖಂಡರಿಗೆ ಪ್ರತಿಭಟನೆ ವ್ಯಕ್ತಮಾಡಲು 25 ಸಾವಿರಕ್ಕೂ ಹೆಚ್ಚು ಜನ ಮುಂಜಾವಿನಿಂದಲೇ ಗುಳಕ-



ವ್ವನ ಕೆರೆ ಮೈದಾನಿನಲ್ಲಿ ನೆರೆದಿದ್ದರು. ಸಂಜೆ 5 ಗಂಟೆಗೆ ಅಲ್ಲೇ ಮಗ್ಗಲಿನಲ್ಲಿರುವ ಟೌನ್-ಹಾಲ್‌ನಲ್ಲಿ ಕೆಪಿಸಿಸಿ ಸಭೆ.

ಇಪ್ಪತ್ತೈದು ಸಾವಿರ ಕಂಠಗಳಿಂದ ಗಗನ ಚುಂಬಿ ಘೋಷಣೆ, "ನಿಜಲಿಂಗಪ್ಪನವರೇ ರಾಜೀನಾಮೆ ಕೊಡಿ", "ಕರ್ನಾಟಕ ಏಕೀಕರಣ ಆಗಿಯೇ ತೀರಬೇಕು", "ಕನ್ನಡಿಗರಿಗೆ ಮೋಸಮಾಡುವ ಕಾಂಗ್ರೆಸ್‌ಗೆ ಧಿಕ್ಕಾರ", "ಅಕರಾನಿ ಪರಿಷತ್‌ಗೆ ಜಯವಾಗಲಿ".

ಟೌನ್ ಹಾಲ್ ಮುತ್ತಿಗೆ ಹಾಕಿದ ಜನರಿಂದ ತಪ್ಪಿಸಿಕೊಂಡು ಕಾಂಗ್ರೆಸ್ ಮುಖಂಡರು ಪೋಲೀಸರ ಸರ್ಪಕಾವಲಿನಲ್ಲಿ ಒಳ ಹೊಕ್ಕರು. ನಮಗೆ ಬೇಕಾಗಿರುವುದು ನಿಜಲಿಂಗಪ್ಪನವರ ರಾಜೀನಾಮೆ. 25-30 ಸಾವಿರ ಜನರ ಪ್ರತಿಭಟನಾ ಪ್ರದರ್ಶ. ಮೊದಲೇ ನಿಯೋಜಿಸಿದ ತಂತ್ರದಂತೆ ತಡಸದಮಠ, ಲಕ್ಷ್ಮೇಶ್ವರ, ಮುಧೋಳ ಸ್ಟೇಜಿನ ಹತ್ತಿರ ಇರಬೇಕು. ಹಳ್ಳಿಕೇರಿ, ಹಿರೇಮಠ ಮೊದಲಾದವರು ಅವರ ಬೆಂಗಾವಲಾಗಿರಬೇಕು. ಎನ್.ಕೆ.ಉಪಾಧ್ಯಾಯ, ಶಾಂತಿನಾಥ ಇಂಗ್ಲೆ ಮೊದಲಾದವರು ಭಾಷಣ ಮಾಡಿ ಜನರನ್ನು ಟೌನ್ ಹಾಲಿನೊಳಕ್ಕೆ ನುಗ್ಗಿಸಬೇಕು.

ಕಾಂಗ್ರೆಸ್‌ನವರು ಸುಳ್ಳು ಆಶ್ವಾಸನಗಳಿಗೆ ಬೇಸತ್ತ ಜನ ತಮ್ಮ ಸೇಡು ತೀರಿಸಿಕೊಂಡರು. ಸಶಸ್ತ್ರ ಪೋಲೀಸರ ಪರದೆಯನ್ನು ಕಿತ್ತೊಗೆದು ಜನ ಟೌನ್ ಹಾಲಿನೊಳಕ್ಕೆ ನುಗ್ಗಿದರು. ಕೂಡಲೇ ತಡಸದ ಮಠ ಮತ್ತಿನ್ನಿತರರು ಸ್ಟೇಜ್ ಹತ್ತಿ ನಿಜಲಿಂಗಪ್ಪನವರಿಗೆ ಸುತ್ತುವರಿದು ರಾಜೀನಾಮೆ ಪತ್ರಕ್ಕೆ ಸಹಿ ಹಾಕಲು ಒತ್ತಾಯಿಸಿದರು. ಅವರು ನಿರಾಕರಿಸದಾಗ ನೆರೆದ ಜನ ಚಪ್ಪಲಿ-ಬೂಟುಗಳ ಸುರಿಮಳೆಗೈದರು. ಅದರ ಪರಿಣಾಮವಾಗಿ ಅಷ್ಟೊತ್ತಿಗೆ ಟೌನ್ ಹಾಲ್-ಸ್ಟೇಜ್ ಎಲ್ಲಾ ಪಾದರಕ್ಷೆಗಳಿಂದ ತುಂಬಿತ್ತು. ಪೋಲೀಸ್ ಗೋಲಿಬಾರ್ ಮಾಡಿದರು. ಲಾಠಿ ಚಾರ್ಜ್‌ಮಾಡಿದರು. ಗೋಳಿಬಾರಿನಿಂದ ಒಬ್ಬನು ಮೃತಪಟ್ಟನು. ಕಮ್ಯುನಿಸ್ಟ್ ಮುಖಂಡರುಗಳಾದ ಎನ್.ಕೆ. ಉಪಾಧ್ಯಾಯ, ಎ.ಜೆ. ಮುಧೋಳ, ಎಂ.ಪಿ. ಲಕ್ಷ್ಮೇಶ್ವರ, ತಡಸದಮಠ, ಹಳ್ಳಿಕೇರಿ, ಕುತ್ತೆ-ಮೊದಲಾದವರನ್ನೆಲ್ಲಾ ಬಂಧಿಸಿ ಲಾಕಪ್ಪಿನಲ್ಲಿ ಹಾಕಲಾಯಿತು. ಅವರ ಮೇಲೆ ಹಲವಾರು ಕೇಸುಗಳನ್ನು ಹೇರಲಾಯಿತು.

ಕೆಪಿಸಿಸಿ ಅಧ್ಯಕ್ಷರ ಪದವಿಗೆ ಎಸ್.-ನಿಜಲಿಂಗಪ್ಪನವರ ರಾಜೀನಾಮೆ, ಕರ್ನಾಟಕ ಏಕೀಕರಣಕ್ಕಾಗಿ 25 ಸಾವಿರ ಜನರ ರಣ ಕಹಳೆ, ಗುಂಡೇಟನಿಂದ ನಾರಾಯಣನ ಸಾವು, ಕಮ್ಯುನಿಸ್ಟ್ ಯುವ ಮುಖಂಡರ ಬಂಧನಗಳಿಂದಾಗಿ, ಅಕರಾನಿ ಪರಿಷತ್ತಿನ ಮುಖಂಡರೆಲ್ಲಾ ಜೈಲಿನಲ್ಲಿದ್ದಾಗ ಹುಬ್ಬಳ್ಳಿಯಲ್ಲಿ ವಿಧಾನ ಸಭೆಗೆ ನಡೆದ ಉಪ- ಚುನಾವಣೆಗಲ್ಲಿ ಅಕರಾನಿ ಪರಿಷತ್ತಿನ ಉಮೇದುವಾರರಾದ ಅಂದಾನಪ್ಪ ಕಂಬ್ಳಿಯವರು ಪ್ರಚಂಡ ಬಹುಮತದಿಂದ ಆರಿಸಿ ಬರುವಂತಾಯಿತು. ಉಪ ಚುನಾವಣೆಯಲ್ಲಿ ನೀಲಗಂಗಯ್ಯ ಪೂಜಾರಿ ಅಕರಾನಿ ಪರಿಷತ್ತಿನಿಂದ ಆರಿಸಿಬಂದರು.

ಈ ಎಲ್ಲಾ ಘಟನೆಗಳು ಕೇಂದ್ರದ ಕಾಂಗ್ರೆ ಮುಖಂಡತ್ವದ ಮೇಲೆ ಪರಿಣಾಮ ಬೀರಿದವು. ಅಕರಾನಿ ಪರಿಷತ್ತಿಗೆ ಏಕೀಕರಣ ಚಳುವಳಿಯನ್ನು ಮುಂದುವರಿಸಲು ಅವಕಾಶ ಮಾಡಿಕೊಟ್ಟಿದ್ದಾದರೆ, ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಸೋಲು ಖಚಿತವೆಂದು ಮನಗಂಡ ಕಾಂಗ್ರೆಸ್ ಸರಕಾರ ತನ್ನ ವಿಚಾರದಲ್ಲಿ ಬದಲಾವಣೆ ಮಾಡಬೇಕಾಯಿತು. ಆಕಾರಣದಿಂದ 1956 ನವೆಂಬರ್ 1ರಂದು ಕರ್ನಾಟಕ ರಾಜ್ಯ ಉದಯಿಸಿತು.

ಎನ್.ಕೆ.ಉಪಾಧ್ಯಾಯ

ಕಲ್ಕತ್ತೆ ನನ್ನ ತವರೂರು—ಮಂಡೇಲಾ

ಅಕ್ಟೋಬರ್ 15ರ ಸೋಮವಾರ ಬೆಳಗ್ಗೆ ಭಾರತದ ರಾಜಧಾನಿ ದೆಹಲಿಯಲ್ಲಿ ವಿಷ್ವಾ ಖಂಡದ ಈ ನಾಡಿಗ ಆಫ್ರಿಕಾ ಖಂಡದ ಅತಿಥಿಯೋರ್ವನ ನಿರೀಕ್ಷೆಯ ಸಂಭ್ರಮವೋ ಸಂಭ್ರಮ.....

ಯಾವುದೇ ರಾಷ್ಟ್ರದ ಸರಕಾರದ ಅಧಿಪತಿಯಲ್ಲ ಈ ಅತಿಥಿ. ಆದರೆ ಅದಕ್ಕಿಂತಲೂ ಹೆಚ್ಚು ಗೌರವ ಪಡೆದಿರುವ, ಆ ದೇಶ-ಈ ದೇಶ, ಗಂಡಸು-ಹೆಂಗಸು, ಅವರ್ಣ-ಈ ವರ್ಣ ಎಂಬ ಭೇದವಿಲ್ಲದೆ ಕೋಟಿ ಕೋಟಿ ಜನರ ಹೃದಯ ಸಾಮ್ರಾಜ್ಯಕ್ಕೆ ಲಗ್ಗೆ ಹಾಕಿರುವ ಅಪ್ರತಿಮ ನಾಯಕ ನೆಲ್ಸನ್ ಮಂಡೇಲಾ ಅವರೇ ಈ ಅತಿಥಿಯಾಗಿದ್ದರು.

ಬಹಳ ಸಮಯ ನಿರೀಕ್ಷಿಸಿದಂತೆ ದ. ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಅವಿರತ ಸಮರ ನಡೆಸುತ್ತಿರುವ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್(ಎ.ಎನ್.ಸಿ.) ಉಪಾಧ್ಯಕ್ಷ ಡಾ.ನೆಲ್ಸನ್ ಮಂಡೇಲಾ ಈ ನಾಡನ್ನು ಸ್ಪರ್ಶಿಸಿದಾಗ ಯಾವುದೇ ಒಂದು ದೇಶದ ಸರಕಾರಿ ಮುಖ್ಯಸ್ಥರಿಗೆ ನೀಡುವ ಸಕಲ ಗೌರವಗಳೊಂದಿಗೆ ಸ್ವಾಗತಿಸಲಾಯಿತು. ಸೇನಾ ಪಡೆಗಳು ಗೌರವ ರಕ್ಷೆ ನೀಡಿದವು. ಐದು ದಿನಗಳ ಭೇಟಿಗಾಗಿ ಬಂದ ಅವರನ್ನು ವಿದೇಶಾಂಗ ಸಚಿವ ಐ.ಕೆ.-ಗುಜ್ರಾಲ್ ವಿಮಾನ ನಿಲ್ದಾಣದಲ್ಲಿ ಹಾಜರಿದ್ದು ಬರಮಾಡಿಕೊಂಡರು.

ಮಂಡೇಲಾ ಜತೆಗೆ ಎ.ಎನ್.ಸಿ.ಯ ಇತರ ಏಳು ಮುಖಂಡರೂ ಇದ್ದರು. ತಮ್ಮ ದೇಶದಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲ ಗಳಿಸಲು ಬೇರೆ ಬೇರೆ ದೇಶಗಳ ಪ್ರವಾಸದ ಅಂಗವಾಗಿ ಅವರು ಭಾರತಕ್ಕೂ ಬಂದಿದ್ದರು.

ವಿಮಾನ ನಿಲ್ದಾಣದಿಂದ ರಾಷ್ಟ್ರಪತಿ ಭವನಕ್ಕೆ ತೆರಳುತ್ತಿದ್ದಾಗ ನೂರಾರು ಬಾಲಕ ಬಾಲಕಿಯರು ಎಎನ್‌ಸಿಯ ಮತ್ತು ಭಾರತದ ರಾಷ್ಟ್ರ ಧ್ವಜ ಬೀಸಿ ಸ್ವಾಗತ ಕೋರಿದರು. ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ಆರ್.ವೆಂಕಟರಾಮನ್ ಮತ್ತು ಪ್ರಧಾನಿ ವಿ.ಪಿ.ಸಿಂಗ್ ಮಹಾ ಹೋರಾಟಗಾರನನ್ನು ಆಲಂಗಿಸಿಕೊಂಡ ದೃಶ್ಯ ಅಸದೃಶ್ಯವಾಗಿತ್ತು.

ಹೋರಾಟಕ್ಕೆ ಭಾರತದ ನೆರವು ಬೇಕು....

"ದಕ್ಷಿಣ ಆಫ್ರಿಕದಲ್ಲಿ ವರ್ಣಭೇದ ನೀತಿ ವಿರುದ್ಧ ನಡೆದಿರುವ ಹೋರಾಟ ಕೊನೆಗೊಳ್ಳುವ ಹಾದಿಯಲ್ಲಿದೆ. ಹೋರಾಟದ ಕೊನೆಯ ಮೈಲಿಯನ್ನು ಒಟ್ಟಿಗೆ ಕ್ರಮಿಸಲು ಭಾರತದ ನೆರವು ಬಯಸುತ್ತೇನೆ." ಎಂದು ರಾಷ್ಟ್ರಪತಿ ಏರ್ಪಡಿಸಿದ್ದ ಔತಣಕೂಟದಲ್ಲಿ ಮಾತನಾಡಿದ ನೆಲ್ಸನ್ ಮಂಡೇಲಾ ಹೇಳಿದರು.

ಆಫ್ರಿಕಾ ನಿಧಿ ಅಧ್ಯಕ್ಷರಾಗಿರುವ ಪ್ರಧಾನಿ ವಿ.ಪಿ.ಸಿಂಗ್ ಡಾ.ಮಂಡೇಲಾರಿಗೆ 80 ಲಕ್ಷ ಡಾಲರುಗಳ ಚೆಕ್ಕನ್ನು ಹಸ್ತಾಂತರಿಸಿದರು.

ಸಮಾರಂಭದಲ್ಲಿ ಮೊಳಗಿದ ಸಿಪಿಐ(ಎಂ) ಘೋಷಣೆ

ಅಕ್ಟೋಬರ್ 15 ರಂದು ದಿಲ್ಲಿಯ ಇಂದಿರಾಗಾಂಧಿ ಸ್ಟೇಡಿಯಂನಲ್ಲಿ ಸಾರ್ವಜನಿಕ ಸ್ವಾಗತ ಸಮಾರಂಭ ಏರ್ಪಡಿಸಲಾಗಿತ್ತು. ಧೀರ ನಾಯಕ ಮಂಡೇಲಾ ವೇದಿಕೆಗೆ ಆಗಮಿಸುತ್ತಿದ್ದಂತೆ ಸುಮಾರು 12000ರಷ್ಟಿದ್ದ ಜನರು ಎದ್ದುನಿಂತು ಸುದೀರ್ಘ ಕರತಾಡನದ ಮೂಲಕ ಸ್ವಾಗತ ಕೋರಿದರು. "ನಾನೀಗ ನಿಮ್ಮ ಮುಂದೆ ನಿಂತಿದ್ದೇನೆ, ಇದು ಭಾರತಕ್ಕೆ ನನ್ನ ಮೊದಲ ಭೇಟಿ. ವರ್ಣಭೇದದ ವಿರುದ್ಧ ರಾಜತಾಂತ್ರಿಕ ಮತ್ತು ಆರ್ಥಿಕ ದಿಗ್ಬಂಧ ಹೇರಬೇಕೆಂಬ ನಮ್ಮ ಕೋರಿಕೆಗೆ ಮೊಟ್ಟಮೊದಲ ಬೆಂಬಲ ನೀಡಿದ ದೇಶಕ್ಕೆ ನಾನು ಕೃತಜ್ಞತೆ ಸೂಚಿಸುತ್ತೇನೆ" ಎಂದು ಅಲಂಕೃತ ವೇದಿಕೆಯಿಂದ ದೀರ್ಘ ಚಪ್ಪಾಳೆಯ ನಡುವೆ ಡಾ. ನೆಲ್ಸನ್ ಮಂಡೇಲಾ ಭಾವಪರವಶರಾಗಿ ನುಡಿದರು.

ನೆಲ್ಸನ್ ಮಂಡೇಲಾ ಕೋ ಲಾಲ್ ಸಲಾಮ್

ಸಮಾರಂಭದಲ್ಲಿ ಬಹಳ ಹೊತ್ತು ಈ ಘೋಷಣೆ ಮೊಳಗಿದವು. ಅಲ್ಲಿ ಭಾರಿ ಸಂಖ್ಯೆಯಲ್ಲಿ ಹಾಜರಿದ್ದ ಸಿಪಿಐ(ಎಂ) ಕಾರ್ಯಕರ್ತರು. ದಕ್ಷಿಣ ಆಫ್ರಿಕ ಜನ- [illegible] ಬೆಂಬಲ ಸಾರುತ್ತಾ ಬಂದಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ ಈ ಉತ್ಸಾಹದ ಘೋಷಣೆಗಳಿಂದ ಭಾಷಣ ಆರಂಭಿಸಲು ಅಡ್ಡಿಯಾಯಿತೆಂದು ಭಾವಿಸಿದಾಗ ಮಂಡೇಲಾ ಎದ್ದು ನಿಂತು ಕೈ ಬೀಸಿ ಘೋಷಣೆ ನಿಲ್ಲಿಸುವಂತೆ ಕೋರಿದರು.

"ವರ್ಣ ಭೇದ ನೀತಿ ಇರುವಷ್ಟು ಕಾಲ ಹಿಂಸೆ ಅವ್ಯಾಹತವಾಗಿ ಮುಂದುವರಿಯುತ್ತದೆ. ಆದ್ದರಿಂದ ವರ್ಣಭೇದವನ್ನು ತೊಡೆದು ಹಾಕುವುದು ಎಎನ್‌ಸಿಯ ಪ್ರಮುಖ ಗುರಿಯಾಗಿದೆ" ಎಂದು ಘೋಷಿಸಿದ ಮಂಡೇಲಾ , "ವರ್ಣಭೇದ ಈಗ ಅವಸಾನದ ಅಂಚಿನಲ್ಲಿದೆ. ದಕ್ಷಿಣ ಆಫ್ರಿಕಾದಲ್ಲಿನ ಸದ್ಯದ ಹಿಂಸೆಯೇ ಅದರ ಸಂಕೇತವಾಗಿದೆ' ಎಂದರು.

ಬಡತನ, ರೋಗ ರುಜಿನ, ನಿರುದ್ಯೋಗ, ಮನೆಯಿಲ್ಲದಿರುವಿಕೆ, ಶಿಕ್ಷಣದ ಕೊರತೆ ಮತ್ತು ಕುಟುಂಬ ಜೀವನ ಹಾಳಾಗಿರುವುದು ಮೊದಲಾದವು ವರ್ಣಭೇದದ ಕೆಲವು ಪ್ರಮುಖ ಅನಿಷ್ಟಗಳು. ಒಡೆದು ಹೋಗಿರುವ ಸಮಾಜವನ್ನು ಸಮಗ್ರಗೊಳಿಸಿ ಸೌಹಾರ್ದಮಯವನ್ನಾಗಿಸುವುದು 'ಶಿಕ್ಷಣ'ದ ಜವಾಬ್ದಾರಿಯಾಗಿದೆ ಎಂದು ಅವರು ವಿವರಿಸಿದರು.

ಇಲ್ಲೂ ತಲೆ ಎತ್ತಿದ ಕಾಂಗ್ರೆ ಸಂಸ್ಕೃತಿ

ಲಾಲ್ ಸಲಾಮ್ ಮತ್ತು ನೆಲ್ಸನ್ ಮಂಡೇಲಾ ಜಿಂದಾಬಾದ್ ಎಂಬ ಘೋಷಣೆಗಳಿಂದ ಸೌಹಾರ್ದತೆಯನ್ನು ಸೂಚಿಸುತ್ತಿರುವಾಗ 'ರಾಜೀವ್‌ಗಾಂಧಿ ಜಿಂದಾಬಾದ್' ಎಂಬ ಘೋಷಣೆ ಇದ್ದಕ್ಕಿದ್ದಂತೆ ಕೇಳಿ ಬಂದು ಒಂದು ಅಪೂರ್ವ ಕಾರ್ಯಕ್ರಮದಲ್ಲಿ ಕಪ್ಪು ಚುಕ್ಕೆಯಾಯಿತು.

ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಆಫ್ರಿಕನ್ ಅಧ್ಯಯನಗಳ ಮಂಡೇಲಾ ಪೀಠವನ್ನು ಸ್ಥಾಪಿಸುವುದಾಗಿ ಸಮಾರಂಭದಲ್ಲಿ ಸ್ವಾಗತ ಭಾಷಣ ಮಾಡಿದ ಉಪರಾಷ್ಟ್ರಪತಿ ಡಾ. ಶಂಕರ್ ದಯಾಳ್ ಶರ್ಮಾ ಹೇಳಿದರು. ಅಲ್ಲದೆ ಭಾರತಕ್ಕೆ ಮಂಡೇಲಾರ ಪ್ರಸ್ತುತ ಭೇಟಿಯ ಸ್ಮರಣಾರ್ಥವಾಗಿ ವಿಶ್ವಶಾಂತಿ ಮತ್ತು ಸಾಮಾಜಿಕ ನ್ಯಾಯ ಅಧ್ಯಯನಗಳಿಗೆ ಗಾಂಧಿ-ಮಂಡೇಲಾ ವಿದ್ಯಾರ್ಥಿವೇತನ ಆರಂಭಿಸುವುದಾಗಿ ಪ್ರಕಟಿಸಿದರು.

'ಭಾರತ ರತ್ನ'

ಅಕ್ಟೋಬರ್ 16ರಂದು ರಾಷ್ಟ್ರಪತಿ ಭವನದಲ್ಲಿ ನಡೆದ ಸಂಕ್ಷಿಪ್ತ ಸಮಾರಂಭದಲ್ಲಿ ಭಾರತದ ಅತ್ಯುಚ್ಚ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ' ಆಫ್ರಿಕಾದ ಪ್ರಚಂಡ ನಾಯಕನ ಕೊರಳನ್ನು ಅಲಂಕರಿಸಿತು.

ಪುಟ 7ಕ್ಕೆ

ಕಪ್ಪನೆ ಮುಖದ, ಕುರುಚಲು ಕೂದಲಿನ ಮಂದಹಾಸ ಮುಖದ ವ್ಯಕ್ತಿ ಕ್ರೀಡಾಂಗಣ ಪ್ರವೇಶಿಸಿದ್ದೇ ತಡ 'ಮಂಡೇಲಾ, ಮಂಡೇಲಾ' ಎಂಬ ಕೂಗು ಮುಗಿಲು ಮುಟ್ಟಿತು.

ಕಲ್ಕತ್ತಕ್ಕೊಂದು ರೋಮಾಂಚನದ ದಿನ. ಪಶ್ಚಿಮ ಬಂಗಾಳ ಎಂಬ ಹೋರಾಟಗಾರ ಅಂದು ಮತ್ತೊಬ್ಬ ಹೋರಾಟಗಾರನನ್ನು ಸಂಧಿಸುತ್ತಿತ್ತು. ಬದುಕಿರುವಾಗಲೇ ದಂತಕಥೆಯಾಗಿ ಹೋಗಿರುವ ಮಂಡೇಲಾ ಎಂಬ ಮಿಂಚು ದೆಹಲಿಯ ನಂತರ ನೇರ ಹಾರಿದ್ದು ಕಲ್ಕತ್ತಕ್ಕೆ.

ತಾವು ಮುಖತ: ಕಂಡರಿಯದ ಆದರೂ ಏನೇನೂ ಅಪರಿಚಿತನಲ್ಲದ ಮಂಡೇಲಾನನ್ನು ಕಾಣಲು ಇಡೀ ಪಶ್ಚಿಮ ಬಂಗಾಳ ಕಲ್ಕತ್ತದೆಡೆಗೆ ಧಾವಿಸಿಬಂದಿತ್ತು. ಕಲ್ಕತ್ತದ ಕ್ರಿಕೆಟ್ ಸ್ಟೇಡಿಯಂ ಅಂದು ತನ್ನ ಇತಿಹಾಸ ಕಂಡರಿಯದಷ್ಟು ಸಂಖ್ಯೆ ಜನರನ್ನು ತನ್ನ ಒಡಲಲ್ಲಿರಿಸಿಕೊಂಡಿತ್ತು. ಸ್ಟೇಡಿಯಂ ಒಳಗಡೆ ಒಂದು ಲಕ್ಷ ಜನವಾದರೆ ಪ್ರವೇಶ ಸಿಗದೆ ಹೊರಗೆ ನಿಂತವರ ಸಂಖ್ಯೆಯೇ ಲಕ್ಷ. ಮುಖ ಕಾಣದಿದ್ದರೂ ದನಿ ಕೇಳಲಿ ಎಂಬ ತವಕ.

ನೀಲಿ ಸಾಗರದ ಹಿನ್ನೆಲೆಯಲ್ಲಿ ಆಫ್ರಿಕಾ ಖಂಡದ ಭೂಪಟ ವೇದಿಕೆಗೆ ಹೊಸರಂಗು ತಂದಿತ್ತು. ಸಾವಿರಾರು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಬಾವುಟಗಳು ಪಟ ಪಟ ಬಡಿಯುತ್ತಿದ್ದವು.

ಮಂಡೇಲಾ ವೇದಿಕೆಗೆ ಅಡಿಯಿಟ್ಟದ್ದೇ ತಡ ಹೆಲಿಕಾಪ್ಟರ್ ಗುಯ್‌ಗುಡುತ್ತಾ ಹೂವಿನ ಮಳೆ ಸುರಿಸಿತು. ದಣಿವರಿಯದ ಕಲಾವಿದರು ಹಾಡಿ ಕುಣಿದರು. ವೇದಿಕೆ ಕೆಳಗೆ ಹಾಡುತ್ತಿದ್ದ ಕಲಾವಿದರನ್ನು ನೋಡಲೇಬೇಕೆಂಬ ಬಯಕೆ ಬಂದದ್ದೇ ತಡ ಮಂಡೇಲಾ ಕುರ್ಚಿ ಮುಂದೆ ಎಳೆದು ಕೊಂಡು ವೇದಿಕೆಯ ಕೆಳಗೆ ಬಗ್ಗಿ ನೋಡುತ್ತಾ ಕೂತರು. ಪ್ರತೀ ಹಾಡಿನ ಸಾಲಿಗೆ ಚಪ್ಪಾಳೆ ತಟ್ಟುತ್ತಾ ತಮಗೆ ಗೊತ್ತಾದ ಪದಗಳಿಗೆ ಕಲಾವಿದರ ಜೊತೆ ದನಿಗೂಡಿಸಿದರು.

ಕ್ರಾಂತಿಕಾರಿಗಳ ಕೇಂದ್ರ

"ಕಲ್ಕತ್ತಕ್ಕೆ ಬರುವುದು ಎಂದರೆ ನಾನು ನನ್ನ ತವರಿಗೆ ಬಂದಂತೆ" ಎಂದು ಮಂಡೇಲಾ ಅಂದದ್ದೇ ತಡ ಚಪ್ಪಾಳೆಯ ಸುರಿಮಳೆ. ಏಕೆಂದರೆ ಕಲ್ಕತ್ತ ಕೇವಲ ಭಾರತೀಯರಿಗೆ ಮಾತ್ರವಲ್ಲ ಇಡೀ ವಿಶ್ವಕ್ಕೆ ಕ್ರಾಂತಿಕಾರಿಗಳ, ಹೋರಾಟಗಾರರ ಕೇಂದ್ರ. ಮಾನವೀಯತೆಯ ಮೇಲೆ ಧಾಳಿ ಮಾಡಿದ ಸಾಮ್ರಾಜ್ಯಶಾಹಿಗಳ ವಿರುದ್ಧ ತೀವ್ರ ಹೋರಾಟ ನಡೆದದ್ದು ಇಲ್ಲಿಯೇ. ಶೋಷಕರ ವಿರುದ್ಧಹೋರಾಟ ಮಾಡಲು ಸಜ್ಜು ಮಾಡಿದ್ದು ಇಲ್ಲಿಯೇ ಎನ್ನುವುದು ನನಗೆ ತೀರಾ ಹೆಮ್ಮೆ ತಂದಿದೆ.

ನಿಮ್ಮ ನಾಯಕರು ನಮ್ಮ ನಾಯಕರು ನಿಮ್ಮ ಹುತಾತ್ಮರು ನಮ್ಮ ಹುತಾತ್ಮರು. ಈ ಕಲ್ಕತ್ತ ಸಾಹಿತ್ಯಕ್ಕೆ, ಬುದ್ಧಿಜೀವಿಗಳಿಗೆ ಹೆಸರುವಾಸಿ. ಅದಕ್ಕಿಂತಲೂ ಹೆಚ್ಚಾಗಿ ಇಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ಕುದಿಯೊಡೆದಿದೆ. ಸಾಮ್ರಾಜ್ಯಶಾಹಿಗಳನ್ನು ನಡುಗಿಸಿದೆ ಎಂದರು.

ನಾವೂ ಸದ್ಯದಲ್ಲಿಯೇ ಸ್ವಾತಂತ್ರ್ಯದ ಹರ್ಷ ಘೋಷವನ್ನು ಮೊಳಗಿಸುತ್ತೇವೆ. ಆಫ್ರಿಕಾ ನ್ಯಾಷನಲ್ ಕಾಂಗ್ರೆಸ್‌ನ ಶಕ್ತಿಕುಂದಿಸಲು ಸರಕಾರ ಪ್ರಯತ್ನಿಸುತ್ತಿದೆ. ಹಾಗೆಯೇ ಗುಪ್ತ ದಳಗಳ ಕರಿಯರನ್ನು ಕೊಂದು ಹಾಕುತ್ತಿದೆ. ವಿಜಯಿಗಳಾಗಲು ನಿಮ್ಮ ಬೆಂಬಲ ಬೇಕು ಎಂದು ಮಂಡೇಲಾ ಪಶ್ಚಿಮ ಬಂಗಾಳದ ಜನತೆಗೆ ಮನವಿ ಮಾಡಿದರು.

ಹುಟ್ಟು ಹೋರಾಟಗಾರ

ಮುಖ್ಯಮಂತ್ರಿ ಜ್ಯೋತಿಬಸುರವರು ಮಾತನಾಡಿ ಕಲ್ಕತ್ತಾದ ಜನತೆ ಮಂಡೇಲಾರಿಗೆ ಬೃಹತ್ ಸ್ವಾಗತ ನೀಡಿದೆ. ಮಂಡೇಲಾ ಹುಟ್ಟು ಹೋರಾಟಗಾರ ಎಂದು ಬಣ್ಣಿಸಿದರು.

'ವಸಂತಕಾಲ ಬಂದರೂ ಕಾಗೆ ಹಾಗೆಯೇ' ಎನ್ನುವುದನ್ನು ಕಾಂಗ್ರೆಸ್ ಅಜಿತ್ ಪಂಜಾ ತಮ್ಮ ಭಾಷಣದಲ್ಲಿ ತೋರಿಸಿಕೊಟ್ಟರು. ಭಾರತಕ್ಕೆ ಕಾಂಗ್ರೆಸ್ ಕೊಡುಗೆ ಬಗ್ಗೆಯೇ ಮಾತನಾಡಿದ ಅವರು ಇಂದಿರಾಗಾಂಧಿಯವರ ಗುಣಗಾನ ಮಾಡಿದರು. ಮತ್ತೂ ಮುಂದುವರಿದು ಭಾರತ ಜಾತಿ ಆಧಾರದ ಮೇಲೆ ಹರಿದು ಹಂಚಿ ಹೋಗುತ್ತಿರುವಾದ ಮಂಡೇಲಾ ಇಂತಹ ವಿಚ್ಛಿದ್ರಕಾರಿತನದ ವಿರುದ್ಧ ಪ್ರತೀಕ ಎಂದು ಹೇಳಿ ಭಾರತದ ಒಳಜಗಳಕ್ಕೆ ಅಂತರರಾಷ್ಟ್ರೀಯ ಲೇಪ ಹಚ್ಚಲು ಪ್ರಯತ್ನಿಸಿದರು.

ಮಂಡೇಲಾರನ್ನು ವಿಮಾನ ನಿಲ್ದಾಣದಲ್ಲಿ ಜ್ಯೋತಿಬಸು ಸ್ವಾಗತಿಸಿದರು. ಮಂಡೇಲಾ ವೇದಿಕೆ ಬರುವ ಹಾದಿಯುದ್ದಕ್ಕೂ ವಿಮಾನ ನಿಲ್ದಾಣದಿಂದಲೂ ಜನ ಕಿಕ್ಕಿರಿದು ನಿಂತಿದ್ದರು. ಕೈಯಲ್ಲಿ ಎಎನ್‌ಸಿ ಬಾವುಟಗಳು. ಮಂಡೇಲಾ, ಮಂಡೇಲಾ ಎಂದು ಕೂಗುತ್ತಲೇ ಇದ್ದ ಜನರನ್ನು ಕಂಡ ಮಂಡೇಲಾ ತಮ್ಮ ಕಾರಿನ ಗಾಜನ್ನು ಕೆಳಗಿಳಿಸಿ ಜನರತ್ತ ಕೈ ಬೀಸಿದರು.

ಹೋರಾಟದ ನಗರಿ ಕಲ್ಕತ್ತೆಗೆ ಆಫ್ರಿಕಾದ ಹೋರಾಟಗಾರ ಹಲವು ಸಂದೇಶ ಹೊತ್ತು ತಂದಿದ್ದರು. ಮಂಡೇಲಾ ಕೇವಲ ಕಲ್ಕತ್ತಕ್ಕೆ ಬರಲಿಲ್ಲ. ಇಡೀ ಪಶ್ಚಿಮ ಬಂಗಾಳದ ಮನೆ ಮನೆಗೆ ಬಂದರು.

ಆಧಾರ: ಟೈಂಸ್ ಆಫ್ ಇಂಡಿಯಾ

ರಾಜ್ಯಾದ್ಯಂತ ರೈತ, ಕೃಷಿ ಕೂಲಿಗಾರರ ಕಾಲು ಜಾಥಾ ಜನವರಿ 2ರಂದು ವಿಧಾನಸೌಧಕ್ಕೆ ಮಹಾಯಾತ್ರೆ

ಎ.ಕೆ.ಜಿ. ಮತ್ತು ಜಾಥಾ ಇವೆರಡು ಪರ್ಯಾಯ ಪದಗಳೇ ಆಗಿಬಿಟ್ಟಿವೆ. ಎ.ಕೆ.ಜಿ. ಯವರ ನೇತೃತ್ವದಲ್ಲಿ ನಡೆದ ಜಾಥಾಗಳು ಅಗಣಿತ. ಕೇರಳದಲ್ಲಿ ಪ್ರಜಾಪ್ರಭುತ್ವ ಆಂದೋಲನ, ಎಡ-ಆಂದೋಲನದ ಈಗಿನ ಶಕ್ತಿಗೆ ಅಸಂಖ್ಯ ಜಾಥಾಗಳ ಕೊಡುಗೆ ಅಪಾರ.

ದುಡಿಯುವ ಜನಗಳ ಈ ಪ್ರಿಯ ಮುಂದಾಳುವಿನ ನೆನಪಿನಲ್ಲಿ ಕರ್ನಾಟಕದ ಮೂಲೆಮೂಲೆಗಳಿಂದ ಕಾಲು ಜಾಥಾ ನಡೆಯಲಿದ್ದು ಜನವರಿ 2ರಂದು ವಿಧಾನಸೌಧದ ಎದುರು ಮಹಾ ಪ್ರದರ್ಶನದಲ್ಲಿ ಲಕ್ಷಾಂತರ ರೈತ, ಕೃಷಿ ಕೂಲಿಗಾರರು ಭಾಗವಹಿಸಲಿದ್ದಾರೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮಂಡಳಿ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘದ ರಾಜ್ಯ ಕಾರ್ಯದರ್ಶಿ ಸಮಿತಿಯ ಜಂಟಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಕಾಂ. ಪಿ. ರಾಮಚಂದ್ರರಾವ್ ಹಾಗೂ ಕಾಂ. ಭೀಮಸಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಒಂದು ಜಾಥಾ ಬೀದರಿನಿಂದ ಹೊರಟು ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಯ ಮುಖಾಂತರ 700 ಕಿ.ಮೀ.ಕ್ರಮಿಸುವುದು.

ಇನ್ನೊಂದು ಜಾಥಾ ಬಿಜಾಪುರದಿಂದ ಹೊರಟು ರಾಯಚೂರು, ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಯ ಮುಖಾಂತರ 600ಕಿಮೀ ಕ್ರಮಿಸುವುದು.

ಮತ್ತೊಂದು ಜಾಥಾ ಮಂಗಳೂರಿನಿಂದ ಹೊರಟು ಹಾಸನ, ತುಮಕೂರು ಮುಖಾಂತರ 400 ಕೀ.ಮೀ./ ನಷ್ಟು ಹಾದು ಬೆಂಗಳೂರಿಗೆ ಬರುತ್ತದೆ.

ಪಕ್ಕದ ಕೋಲಾರ ಹಾಗೂ ಬೆಂಗಳೂರು ತಾಲೂಕಿನಿಂದಲೂ ಜಾಥಾ ಬರಲಿದೆ.

ಜಾಥಾ ಬರುವ ರಸ್ತೆಯಲ್ಲಿಲ್ಲದ ಜಿಲ್ಲೆಗಳಾದ ಬೆಳಗಾಂ, ಧಾರವಾಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಿಂದ ಜಾಥಾಗಳು ಪಕ್ಕದಲ್ಲಿ ಹಾದು ಹೋಗುವ ಮುಖ್ಯ ಜಾಥಾಕ್ಕೆ ಸೇರುವುವು. ಮೈಸೂರು , ಮಂಡ್ಯ, ಚಿಕ್ಕಮಗಳೂರು ಜಿಲ್ಲೆಗಳಿಂದ ಜೀಪ್ ಜಾಥಾ ಬರುತ್ತದೆ.

ಸಾಸ್ಕೃತಿಕ ತಂಡಗಳು- ಕಿರು ಪುಸ್ತಿಕೆಗಳು

ಸಾಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪುಸ್ತಿಕೆಗಳ ಮೂಲಕ ಈ ಜಾಥಾಗಳು ದೇಶದಲ್ಲಿ ರಾಜ್ಯದಲ್ಲಿ ರೈತ, ಕೃಷಿ ಕೂಲಿಗಾರರ ಸ್ಥಿತಿ ಅವರ ಶೋಷಣೆಯ ವೈಖರಿ, ಸಮಸ್ಯೆಗಳ ವಿಶ್ಲೇಷಣೆಗಳನ್ನು ನಾಟಕ , ಹಾಡು, ಹಾಗೂ ಲೇಖನಗಳ ಮೂಲಕ ರಾಜ್ಯದ ಮೂಲೆಮೂಲೆಗಳಲ್ಲೂ ಜನತೆಯೆದುರು ಪ್ರಸ್ತುತ ಪಡಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ರಾಯಚೂರು, ಬೆಂಗಳೂರು, ಮಂಗಳೂರುಗಳಲ್ಲಿ ಸಾಂಸ್ಕೃತಿಕ ಕಾರ್ಯಾಗಾರ ನಡೆಸಿ ಸಮುದಾಯ, ಬಂಡಾಯದ ಮತ್ತಿತರ ಕಲಾವಿದರ ನೆರವಿನೊಂದಿಗೆ ರೈತ, ಕೃಷಿ ಕೂಲಿಗಾರರನ್ನೇ ಆ ಕಾರ್ಯಕ್ರಮಗಳನ್ನು ನಡೆಸಲು ಸಿದ್ಧಗೊಳಿಸಲಾಗುವುದು.

ಎರಡು ರೈತ ಸಂಘಗಳ ಧೋರಣೆಗಳ ವಿಶ್ಲೇಷಣೆ, ಭೂಮಿ ಸಮಸ್ಯೆ, ಸಾಲ ಸಮಸ್ಯೆ, ಕೂಲಿಯ ಪ್ರಶ್ನೆ, ಎಡರಂಗ ಸರಕಾರಗಳು ಮತ್ತು ರೈತ ಕೃಷಿ-ಕೂಲಿಗಾರರು, ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ರೈತರು- ಈ ಬಗ್ಗೆ ಆರು ಕಿರುಹೊತ್ತಿಗೆಗಳನ್ನು ಪ್ರಕಟಿಸಲೂ ನಿರ್ಣಯಿಸಿದೆ.

ಸಹಿ ಸಂಗ್ರಹಣೆ ಹಾಗೂ ಬೇಡಿಕೆಗಳು

ಜನವರಿ ಎರಡರಂದು ಮಿಲಿಯಾಂತರ ಸಹಿ ಸಂಗ್ರಹಣೆಯೊಂದಿಗೆ ಕಾಂಗ್ರೆಸ್ ರಾಜ್ಯ ಸರಕಾರಕ್ಕೆ ಮಹಾಮನವಿಯನ್ನು ನೀಡಲಾಗುವುದು. ಸಹಿ ಸಂಗ್ರಹಣೆಗೆ ಅಳವಡಿಸಿರುವ ಬೇಡಿಕೆಗಳು ಈ ಕೆಳಗಿನಂತಿವೆ.

ಸಾಲಮನ್ನಾ, ಭೂ ಸುಧಾರಣೆಯ ಪ್ರಶ್ನೆ ಹಾಗೂ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದು, ಅತಿವೃಷ್ಟಿ ಹಾಗೂ ಅನಾವೃಷ್ಟಿಗೆ ವಿಶೇಷ ಪರಿಹಾರ, ರಾಷ್ಟ್ರ ಮಟ್ಟದ ಕೃಷಿ ಕೂಲಿಗಾರರ ಸಮಗ್ರ ಮಸೂದೆ, ನೀರಾವರಿ ಯೋಜನೆಗಳು, ಇರುವ ನೀರಾವರಿಯಲ್ಲಿರುವ ತೊಂದರೆಗಳಿಗೆ ಪರಿಹಾರ, ಹಸಿರು-ಕಾರ್ಡ್ ಹಾಗೂ ಅಗತ್ಯ ವಸ್ತುಗಳ ವಿತರಣೆ, ಕೃಷಿ ಹುಟ್ಟುವಳಿಗೆ ಲಾಭದಾಯಕ ಬೆಲೆ, ಬೀಜ, ರಸಗೊಬ್ಬರ ಕ್ರಿಮಿನಾಶಕಗಳ ಸರಿಯಾದ ಸರಬರಾಜು, ವಸತಿ ಪ್ರಶ್ನೆ, ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ತನ್ನು ಭದ್ರ ಪಡಿಸುವುದು, ಹರಿಜನ- ಗಿರಿಜನರ ಮೇಲೆ ಅಲ್ಪ ಸಂಖ್ಯಾತರ ಮೇಲೆ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಯುವುದು, ಕೋಮುವಾದಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಜನರಿಂದ ಬೇರ್ಪಡಿಸುವುದು.

ಸರ್ವಾಧಿಕಾರಿ ಪ್ರವೃತ್ತಿಯನ್ನು ಮೈಗೂಡಿಸಿಕೊಂಡ ಕಾಂಗ್ರೆಸ್ ಒಂದು ವರ್ಷದಲ್ಲಿಯೇ ಮುಖ್ಯಮಂತ್ರಿಯನ್ನು ಕಿತ್ತು ಹಾಕಿ ಇನ್ನೊಬ್ಬ ಮುಖ್ಯಮಂತ್ರಿಯನ್ನು ನೇಮಿಸಿದೆ. ಹನ್ನೆರಡು ಬೇಡಿಕೆಗಳನ್ನು ಕೂಡಿದ ಮನವಿಯನ್ನು ನೂತನ ಮುಖ್ಯಮಂತ್ರಿಗೆ ಕಳಿಸಲಾಗುವುದು. ಮುಂದಿರುವ 75 ದಿವಸಗಳನ್ನು ಅವುಗಳ ಜಾರಿ ಮಾಡುವಂತೆ ರಾಜ್ಯ ವ್ಯಾಪಿ ಪ್ರಚಾರ ನಡೆಸಿ, ಜನವರಿ ಎರಡರಂದು ಮಹಾ ಪ್ರದರ್ಶನ, ಸಹಿ ಸಂಗ್ರಹಣೆಯೊಂದಿಗೆ ಅದೇ ಬೇಡಿಕೆಯ ಅಂತಿಮ ಮನವಿ ನೀಡಲಾಗುವುದು. ಆಗಲೂ ಕಾಂಗ್ರೆಸ್ಸಿನ ಧೋರಣೆ ಬದಲಾಗದಿದ್ದಲ್ಲಿ, ಜನವರಿ ತಿಂಗಳಿಂದ ರಾಜ್ಯ ವ್ಯಾಪಿ ತೀವ್ರಗತಿಯ ಬೃಹತ್ ಚಳುವಳಿಯನ್ನು ನಡೆಸಲು ಎರಡು ಸಂಘಟನೆಗಳು ಕರೆ ಕೊಟ್ಟಿವೆ.

ಪ್ರಜಾಸತ್ತಾತ್ಮಕ ಶಕ್ತಿಗಳ ಬೆಂಬಲ

ಅಸಂಘಟಿತ ರೈತ-ಕೃಷಿ ಕೂಲಿಗಾರರು ಸಂಘಟಿತರಾಗಲು ಸರಿಯಾದ ದಿಕ್ಕಿನಲ್ಲಿ ಹೋಗುವ ಈ ಕಾರ್ಯಕ್ರಮಕ್ಕೆ ರಾಜ್ಯದ ಕಾರ್ಮಿಕ ವರ್ಗ, ನೌಕರ, ವಿದ್ಯಾರ್ಥಿ, ಯುವಜನ, ಮಹಿಳಾ, ಸಾಹಿತ್ಯ, ಸಾಂಸ್ಕೃತಿಕ ಸಂಘಟನೆಗಳು ತನು ಮನ ಧನ ಸಹಾಯವನ್ನು ನೀಡಲು ಮುಂದೆ ಬರಬೇಕೆಂದು ಪ್ರಾಂತ ರೈತ ಸಂಘ, ಕೃಷಿ ಕೂಲಿಗಾರರ ಸಂಘಗಳು ಕರೆ ಕೊಡುತ್ತವೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಚಂದ್ರಶೇಖರ [illegible] ತಿಳಿಸಿದ್ದಾರೆ.

'ಭಾರತದಲ್ಲಿ ಇಂಗ್ಲಿಷರ ಪ್ರಾಬಲ್ಯ ಹೇಗೆ ಸ್ಥಾಪನೆಗೊಂಡಿತು?'—1853 ಜುಲೈನಲ್ಲಿ ಕಾರ್ಲ್ ಮಾರ್ಕ್ಸ್ ಈ ಪ್ರಶ್ನೆ ಕೇಳಿದ್ದರು. ಅದಕ್ಕೆ ತಾವೇ ಒಂದು ಪ್ರತಿಪ್ರಶ್ನೆ ಹಾಕಿಕೊಂಡಿದ್ದರು— 'ಮಹಮ್ಮದೀಯರು ಮತ್ತು ಹಿಂದೂಗಳ ನಡುವೆ ಮಾತ್ರವೇ ಅಲ್ಲ, ಜಾತಿ-ಜಾತಿಗಳ ನಡುವೆ, ಬುಡಕಟ್ಟುಗಳ ನಡುವೆ ವಿಭಜನೆಗೊಂಡ ಒಂದು ದೇಶ, ಸಾಮಾಜಿಕ ಸಮತೋಲನದ ಚೌಕಟ್ಟಿಗೆ ಪರಸ್ಪರ ಪ್ರತ್ಯೇಕತೆ, ದೂರವೇ ಆಧಾರವಾಗಿರುವ ಒಂದು ಸಮಾಜ ಆಕ್ರಮಣದ ಮೊದಲ ಬೇಟೆಯಾಗದಿರಲು ಸಾಧ್ಯವೇ?'

ನಾಲ್ಕು ವರ್ಷಗಳ ನಂತರ, 1857ರಲ್ಲಿ, ಬ್ರಿಟಿಷ್ ಸೇನೆಯ ಭಾರತೀಯ ಸಿಪಾಯಿಗಳು ಬಂಡಾಯವೆದ್ದರು. 'ಇತಿಹಾಸದಲ್ಲಿ ಮೊದಲಬಾರಿಗೆ ಸಿಪಾಯಿ ತುಕಡಿಗಳು ತಮ್ಮ ಯೂರೋಪಿಯನ್ ಅಧಿಕಾರಿಗಳನ್ನು ಕೊಂದರು; ಹಿಂದೂಗಳು, ಮುಸ್ಲಿಮರು ತಮ್ಮ ಪರಸ್ಪರ ವೈಷಮ್ಯವನ್ನು ತೊರೆದು ತಮ್ಮಿಬ್ಬರ ಮಾಲಿಕನ ವಿರುದ್ಧ ಒಂದಾದರು. ಹಿಂದೂಗಳು ಆರಂಭಿಸಿದ ಗಲಭೆ ದಿಲ್ಲಿಯಲ್ಲಿ ಸಿಂಹಾಸನದ ಮೇಲೆ ಮುಸ್ಲಿಮ್ ಸಾಮ್ರಾಟನನ್ನು ಕುಳ್ಳಿರಿಸುವುದರೊಂದಿಗೆ ಮುಕ್ತಾಯವಾಯಿತು' ಎಂದು ಬರೆದರು ಮಾರ್ಕ್ಸ್.

ಹೀಗೆ ಆರಂಭವಾಯಿತು ಭಾರತದ ಸ್ವಾತಂತ್ರ್ಯ ಹೋರಾಟ. ಹಿಂದೂ-ಮುಸ್ಲಿಮ್ ಐಕ್ಯತೆ ಅದರ ಮುಖ್ಯ ಅಂಶವಾಗಿತ್ತು. ತದ್ವಿರುದ್ಧವಾಗಿ 1947ರಲ್ಲಿ ಈ ಹೋರಾಟ ಯಶಸ್ವಿಯಾಗಿ ಅಂತ್ಯಗೊಂಡಾಗ ಎರಡೂ ಕೋಮುಗಳು ಎರಡೂ ಗುಂಪುಗಳಾಗಿ ಒಡೆದಿದ್ದವು. ಅಷ್ಟೇ ಅಲ್ಲ, ಎರಡು ಪರಸ್ಪರ ವಿರೋಧಿಸುವ ಪ್ರಭುತ್ವಗಳಾಗಿ, ದೇಶಗಳಾಗಿ ಉಂಟಾದವು.

'ಮೊದಲ ಭಾರತೀಯ ಸ್ವಾತಂತ್ರ್ಯ ಯುದ್ಧ' ಮತ್ತು 1947ರಲ್ಲಿ ಅದರ ಅಂತಿಮ ಯಶಸ್ಸು ಇವೆರಡರ ನಡುವಿನ ಒಂಬತ್ತು ದಶಕಗಳು ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯ ಶಕ್ತಿಗಳು ಒಂದೆಡೆ, ವಿಚ್ಛಿದ್ರತೆ ಹಾಗೂ ವಿಘಟನಾಕಾರಿ ಶಕ್ತಿಗಳು ಇನ್ನೊಂದೆಡೆ—ಇವೆರಡರ ನಡುವೆ ಒಂದು ದ್ವೈತ್ವ ಘರ್ಷಣೆಯನ್ನೇ ಕಂಡ ದಶಕಗಳು. ಸ್ವಾತಂತ್ರ್ಯ ಹೋರಾಟದ ನೇತಾರರು ಜನರನ್ನು ಸುತ್ತಿದ್ದ ಜಾತಿ- ಮತ-ಭಾಷೆ-ಸಂಸ್ಕೃತಿಗಳ ಬಂಧನವನ್ನು ಮುರಿದು ಒಂದಾಗಿಸಲು ಪ್ರಯತ್ನಿದರೆ ಬ್ರಿಟಿಷ್ ಆಳರಸರು ಸ್ವಾತಂತ್ರ್ಯ ಆಂದೋಲನದ ಈ ಐಕ್ಯತೆಯನ್ನು ಮುರಿಯಲು 'ಕೋಮು ಪ್ರಶ್ನೆ'ಯನ್ನು ಬಳಸಿದರು. ಮುಸ್ಲಿಮರ ವಿರುದ್ಧ ಹಿಂದೂಗಳನ್ನು, ಹಿಂದೂ ಸಮಾಜದ ಕೆಳ ಜಾತಿಗಳ ವಿರುದ್ಧ ಮೇಲ್ ಜಾತಿಗಳನ್ನು ಇತರರ ವಿರುದ್ಧ ಬುಡಕಟ್ಟು ಜನರನ್ನು, ವಿವಿಧ ಭಾಷೆಗಳಾಡುವ ಜನರನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಿದರು.

1947ರಲ್ಲಿ ದೇಶದ ವಿಭಜನೆ ಸ್ವಾತಂತ್ರ್ಯ ಹೋರಾಟದ ಅತ್ಯುನ್ನತ ಮುಂದಾಳು ಮಹಾತ್ಮಾ ಗಾಂಧಿಯವರ ಮನಸ್ಸನ್ನು ಎಷ್ಟೊಂದು ನೋಯಿಸಿತೆಂದರೆ ಸ್ವಾತಂತ್ರ್ಯೋದಯದ ಸಮಾರಂಭಗಳಲ್ಲಿ ಪಾಲುಗೊಳ್ಳಲು ಅವರು ನಿರಾಕರಿಸಿದರು. ಸ್ವಾತಂತ್ರ್ಯದ ಐದು ತಿಂಗಳ ನಂತರ, ಗುಂಡಿಗೆ ಬಲಿಯಾಗುವ ಐದು ದಿನಗಳ ಮೊದಲು ಸ್ವಾತಂತ್ರ್ಯಾ ನಂತರದ ಬೆಳವಣಿಗೆಗಳ ಬಗ್ಗೆ ತನ್ನ ನಿರಾಸೆ ತೋರ್ಪಡಿಸಿದ್ದರು.

ಈ ನಿರಾಸೆ, ಭ್ರಮನಿರಸನಕ್ಕೆ ಕಾರಣ 1946-47ರಲ್ಲಿ ಬ್ರಿಟಿಷ್ ಸರಕಾರದ ಪ್ರತಿನಿಧಿಗಳು ಮತ್ತು ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಮುಖಂಡರ ನಡುವೆ ಮಾತುಕತೆಗಳು ನಡೆಯುವಾಗ ಒಂದು ಕೋಮು ಉನ್ಮಾದನೆ ದೇಶವನ್ನೆಲ್ಲಾ ವ್ಯಾಪಿಸಿತ್ತು. ಭಾರತದ ರಾಷ್ಟ್ರೀಯ ಆಂದೋಲನದಲ್ಲಿ ಹಿಂದೆಂದೂ ಕಾಣದ ಉನ್ಮಾದವದು. ಅಷ್ಟೊಂದು ಮುಸ್ಲಿಮರ, ಹಿಂದೂಗಳ, ಸಿಖ್ಖರ ಅಮಾನುಷ ಕೊಲೆಗಳು ಹಿಂದೆಂದೂ ನಡೆದಿರಲಿಲ್ಲ.

ಹೊಸದಾಗಿ ಸ್ವತಂತ್ರವಾದ ಭಾರತದ ರಾಜಕೀಯ ಸುಮಾರಾಗಿ ಕೋಮುವಾದದ ಆಧಾರದಲ್ಲೇ ನಡೆಯುಬಹುದೆಂಬ ಭಯವೂ ಮಹಾತ್ಮರಿಗಿತ್ತು. ಗುಂಡಿಗೆ ಬಲಿಯಾಗುವ ಮೊದಲು ಸ್ವತಂತ್ರ ಭಾರತದಲ್ಲಿ ಅವರು ಜೀವಿಸಿದ್ದ ಕೆಲವು ವಾರಗಳಲ್ಲಿ ತನ್ನ ಒಬ್ಬ ಅತ್ಯಂತ ವಿಧೇಯ ಶಿಷ್ಯ ಹಾಗೂ ದೇಶದ ಉಪಪ್ರಧಾನಿ ಮತ್ತು ಗೃಹ ಮಂತ್ರಿಯಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಹೇಗೆ ತನ್ನ ಅಧಿಕಾರವನ್ನು ದೇಶದೊಳಗೆ ಮುಸ್ಲಿಮರ ವಿರುದ್ಧ, ಹೊರಗೆ ಪಾಕಿಸ್ತಾನದ ವಿರುದ್ಧ ಕೋಮುವಾದಿ ರೀತಿಯಲ್ಲಿ ಬಳಸುತ್ತಿದ್ದಾರೆ ಎಂಬುದನ್ನು ಕಂಡ ಅವರು ತನ್ನ ಜೀವನದ ಕೊನೆಯ ಉಪವಾಸವನ್ನು ಅದರ ವಿರುದ್ಧ ಕೈಗೊಂಡರು—ಸಾವಿನ ಹದಿನೈದು ದಿನಗಳ ಮೊದಲು.

> 1857ರಲ್ಲಿ ಸ್ವಾತಂತ್ರ್ಯ ಹೋರಾಟ ಆರಂಭವಾದಾಗ ಹಿಂದೂ-ಮುಸ್ಲಿಮ್ ಐಕ್ಯತೆ ಅದರ ಮುಖ್ಯ ಅಂಶವಾಗಿತ್ತು. ತದ್ವಿರುದ್ಧವಾಗಿ 1947ರಲ್ಲಿ ಈ ಹೋರಾಟ 'ಯಶಸ್ವಿಯಾಗಿ' ಅಂತ್ಯಗೊಂಡಾಗ ಎರಡೂ ಕೋಮುಗಳು ಎರಡೂ ಗುಂಪುಗಳಾಗಿ ಪರಸ್ಪರ ವಿರೋಧಿಸುವ ಎರಡು ದೇಶಗಳಾಗಿ ಒಡೆದಿದ್ದವು. ಆ ನಡುವಿನ ಒಂಬತ್ತು ದಶಕ... ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯ ಶಕ್ತಿಗಳು ಒಂದೆಡೆ ವಿಚ್ಛಿದ್ರತೆ, ವಿಘಟನಕಾರಿ [illegible] ಇನ್ನೊಂದೆಡೆ—ಇವೆರಡರ ನಡುವೆ

ಕೋಮುವಾದ-ಜಾತಿವಾದ ವಿರುದ್ಧ ಹೋರಾಟ ಪಾಳೆಯಗಾರಿ ತತ್ವಗಳ ವಿರುದ್ಧ ಹೋರಾಟ

ಇದು ಭಾರತದ ಸ್ವಾತಂತ್ರ್ಯ ಹೋರಾಟದ

ರಾಮ ಜನ್ಮ ಭೂಮಿ-ಬಾಬ್ರಿ ಮಸೀದಿ ವಿವಾದದ ... ತೀಯ ಸಮಾಜದಲ್ಲಿ ಒಂದೆಡೆ ಜಾತ್ಯಾತೀತತೆಯ, ಇ... ಪ್ರಶ್ನೆ ಮತ್ತೆ ಪ್ರಜಾಪ್ರಭುತ್ವವಾದಿಗಳ ಮುಂದೆ ನಿಂತಿದೆ. ... ವೇನು? ಅದನ್ನು ಸ್ವಾತಂತ್ರ್ಯ ಆಂದೋಲನ ಹೇಗೆ ... ಈಗಲೂ ಆಗಾಗ ತಲೆಯೆತ್ತುತ್ತಲೇ ಇದೆ? ಸಿಪಿಐ(ಎ... ಹಾಗೂ ಪ್ರಸಿದ್ಧ ಮಾರ್ಕ್ಸ್‌ವಾದಿ ಚಿಂತಕ ಇ.ಎಂ.ಎಸ್.ನ... ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

ಇದು ಕಲ್ಕತ್ತೆಯಲ್ಲಿ ಸೆಪ್ಟೆಂಬರ್ 24ರಂದು ವಿ... ಮಂಡಿಸಿದ ಪ್ರಬಂಧದ ಸಂಗ್ರಹಾನುವಾದ.

ಇ.ಎಂ.ಎಸ್. ನಂಬೂದರಿಪ್ಪಾಡ್

ಆರಂಭದಲ್ಲಿ ಬ್ರಿಟಿಷ್ ತಂತ್ರ

ಭಾರತೀಯ ಸಮಾಜದಲ್ಲಿನ ಪರಸ್ಪರ ವಿರೋಧಿ ಶಕ್ತಿಗಳನ್ನು ಒಂದು ಐಕ್ಯ ರಾಷ್ಟ್ರೀಯ ಆಂದೋಲನ ಬೆಳಸುವ ಪ್ರಯತ್ನದ ವಿರುದ್ಧ ಬ್ರಿಟಿಷ್ ಆಳರಸರು ಹೇಗೆ ಬಳಸಿದರು, ಸ್ವಾತಂತ್ರ್ಯ ಆಂದೋಲನದ ಮುಖಂಡರು ಅದನ್ನು ಹೇಗೆ ಎದುರಿಸಿದರು, ಆ ಸಮಯದಲ್ಲಿ ಭಾರತೀಯ ಸಮಾಜ, ಜಾತಿಗಳು, ಕೋಮುಗಳು, ಭಾಷಾ, ಬುಡಕಟ್ಟು ಗುಂಪುಗಳು ಇತ್ಯಾದಿಗಳಲ್ಲಿ ಹಂಚಿ ಹೋಗಿದ್ದರಿಂದ ಏನು ತೊಂದರೆಯಾಯಿತೆಂಬುದು ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸ ಕಂಡರೆ ತಿಳಿಯುತ್ತದೆ. ಇದನ್ನು ಸಂಕ್ಷೇಪವಾಗಿ ಪರಿಶೀಲಿಸೋಣ.

ಬ್ರಿಟಿಷರು ಬರುವ ಮೊದಲಿನ ಭಾರತ ಹೇಗಿತ್ತು? ದಿಲ್ಲಿಯಲ್ಲಿ ಸಮ್ರಾಟ, ಸಾಮ್ರಾಟನ ನೇರ ಹತೋಟಿಯಲ್ಲಿ ಸ್ಥಳೀಯ ಪಾಳೆಯಗಾರರು, ಅವರ ಕೈಕೆಳಗೆ ಊಳಿಗಮಾನ್ಯ ಭೂಮಾಲಿಕರು—ಇವರು ಆಗಿನ ಸಮಾಜದ ಮೂರು ಕಂಬಗಳು. ಬ್ರಿಟಿಷರು ಸ್ಥಳೀಯ ಪಾಳೆಯಗಾರರೊಂದಿಗೆ ಮಾತುಕತೆ, ಯುದ್ಧಗಳ ಮೂಲಕ ಅವರನ್ನು ಅಧೀನಗೊಳಿಸುತ್ತಾ ಹೋಗಿ ಕೊನೆಗೆ ದಿಲ್ಲಿಯ ಸಾಮ್ರಾಟನನ್ನೇ ತಮ್ಮ ಅಧೀನಗೊಳಿಸುವಲ್ಲಿ ಯಶಸ್ವಿಯಾದರು. ಈ ಹಿನ್ನೆಲೆಯಲ್ಲಿ 1857ರ ರಾಷ್ಟ್ರೀಯ ಬಂಡಾಯ ನಡೆಯಿತು. ಬ್ರಿಟಿಷರ ಮೊದಲಿನ ಭಾರತೀಯ ಸಮಾಜದಲ್ಲಿ ಪ್ರಬಲ ಸ್ಥಾನದಲ್ಲಿದ್ದ ಪಾಳೆಯಗಾರಿ ಊಳಿಗಮಾನ್ಯ ಶಕ್ತಿಗಳು ಇದಕ್ಕೆ ನೇತೃತ್ವ ನೀಡಿದವು. ಪಾಳೆಯಗಾರಿ ಶಕ್ತಿಗಳಿಗೆ ತಮ್ಮ ರಾಜಕೀಯ ಅಧಿಕರ ಕಾಪಾಡಿಕೊಳ್ಳಬೇಕಾಗಿತ್ತು. ಅವರ ಕೈಕೆಳಗಿನ ಭೂಮಾಲಿಕರಿಗೆ ಜನ ಸಾಮಾನ್ಯರ ಮೇಲೆ ತಮ್ಮ ಹತೋಟಿ ಉಳಿಸಿಕೊಳ್ಳಬೇಕಾಗಿತ್ತು. ಆದ್ದರಿಂದ ಇವಕ್ಕೆ ಪ್ರತಿಸ್ಪರ್ಧಿಯಾಗುತ್ತಿದ್ದ ಬ್ರಿಟಿಷರ ವಿರುದ್ಧ ಅವರು ಎದ್ದು ನಿಲ್ಲಬೇಕಾಯಿತು. ಅತ್ತ ಜನಸಾಮಾನ್ಯರೂ ವಿದೇಶಿ ಕ್ರಿಶ್ಚಿಯನ್ ಸಮಾಜದ ಮತ್ತು ಸಂಸ್ಕೃತಿಯ ಧಾಳಿಯಿಂದ ತಮ್ಮ (ಹಿಂದೂ ಹಾಗೂ ಮುಸ್ಲಿಂ) ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಬಂದೆದ್ದರು. ಹೀಗೆ ಈ ಬಂಡಾಯಕ್ಕಿದ್ದ ರಾಷ್ಟ್ರೀಯ ಸ್ವರೂಪ ಇದರ ಸಕಾರಾತ್ಮಕ ಅಂಶವಾದರೆ, ಹಳೆಯ ಸಾಮಾಜಿಕ ಸಾಂಸ್ಕೃತಿಕ ವ್ಯವಸ್ಥೆ ಉಳಿಸಿಕೊಳ್ಳುವ ಪ್ರತಿಗಾಮಿ ಉದ್ದೇಶ ಅದರ ನಕಾರಾತ್ಮಕ ಅಂಶವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷ್ ಆಳರಸರು ಆ ಮೊದಲ ರಾಷ್ಟ್ರೀಯ ಬಂಡಾಯದ

> ಭಾರತೀಯ ಸ್ವಾತಂತ್ರ್ಯ ಹೋರಾಟದ ಮೊದಲ ಘಟ್ಟದಲ್ಲಿ ಮುಖಂಡತ್ವ ನೀಡಿದ ಪಾಳೆಯಗಾರಿ ವರ್ಗ ಬ್ರಿಟಿಷರ ಚಾತುರ್ಯದಿಂದಾಗಿ ಬ್ರಿಟಿಷ್ ವ್ಯವಸ್ಥೆಯ ಭಾಗವಾಗಿಬಿಟ್ಟಿತು. ಆದ್ದರಿಂದ ಸ್ವಾತಂತ್ರ್ಯ ಹೋರಾಟವನ್ನು ಮುಂದುವರೆಸಲು ಇನ್ನೊಂದು ವರ್ಗ ಮೂಡಿ ಬರಬೇಕಾಗಿತ್ತು.

ಏಕೆಂದರೆ ಒಂದು ವಿದೇಶಿ ಸರಕಾರಕ್ಕೆ ಹಳ್ಳಿ- ಪಟ್ಟಣಗಳ ಜನಸಾಮಾನ್ಯರ ಸಂಕಷ್ಟಗಳನ್ನು ದೂರಮಾಡುವುದಕ್ಕಿಂತ ಅವರ ಅಸಂತೃಪ್ತಿಯನ್ನು ಬಂಡಾಯವಾಗಿ ಪರಿವರ್ತಿಸುವಲ್ಲಿ ಮುಖಂಡತ್ವ ವಹಿಸಿದ ಪಾಳೆಯಗಾರಿ ರಾಜರೊಂದಿಗೆ, ಭೂಮಾಲಿಕರೊಂದಿಗೆ, ಜಾತೀಯ, ಮತೀಯ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ರಾಜಿ ಮಾಡಿಕೊಳ್ಳುವುದೇ ಹೆಚ್ಚು ಸುಲಭ ಸಾಧ್ಯವಾಗಿತ್ತು. ಅಂದರೆ ಬ್ರಿಟಿಷ್ ಆಳರಸರು ಅಂಗೀಕರಿಸಿದ ತಂತ್ರವೆಂದರೆ ಜನಸಮೂಹಗಳನ್ನು ಹತೋಟಿಯಲ್ಲಿಡಲು ಪಾಳೆಯಗಾರರನ್ನು ಸಂತುಷ್ಟಗೊಳಿಸುವುದು. ಬಂಡಾಯ ವಿಫಲವಾದ ಮೇಲೆ ವಿಕ್ಟೋರಿಯಾ ಮಹಾರಾಣಿ ಹೊರಡಿಸಿದ ಘೋಷಣೆ ಪಾಳೆಯಗಾರಿ ರಾಜರ, ಭೂಮಾಲಿಕರ ಅಧಿಕಾರ, ಸೌಲಭ್ಯಗಳನ್ನು ಕಾಪಾಡುವುದಾಗಿ ಮಾತು ಕೊಟ್ಟಿತು. ತಮ್ಮ ದೇಶದಲ್ಲಿ ಊಳಿಗಮಾನ್ಯ ವ್ಯವಸ್ಥೆಯನ್ನು ಅಂತ್ಯಗೊಳಿಸಿದ ಇಂಗ್ಲಿಷರು ಭಾರತದಲ್ಲಿ ಅದನ್ನು ರಕ್ಷಿಸಿದರು.

ಮುಗಿಯಿತು ಮೊದಲ ಘಟ್ಟ

ಹೀಗೆ ಮುಗಿಯಿತು ಭಾರತದ ಸ್ವಾತಂತ್ರ್ಯ ಹೋರಾಟದ ಮೊದಲ ಘಟ್ಟ. ಇದರಲ್ಲಿ ಮುಖಂಡತ್ವ ನೀಡಿದ ಊಳಿಗಮಾನ್ಯ ವರ್ಗ ಈಗ ಬ್ರಿಟಿಷರ ಚಾತುರ್ಯದಿಂದಾಗಿ ಬ್ರಿಟಿಷ್ ವ್ಯವಸ್ಥೆಯ ಭಾಗವಾಗಿಬಿಟ್ಟಿತು. ಆದ್ದರಿಂದ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸಲು ಇನ್ನೊಂದು ವರ್ಗ ಮೂಡಿ ಬರಬೇಕಾಗಿತ್ತು. ಅದು ಆಗಲೇ ಮೂಡಿ ಬಂದಿತ್ತು ಕೂಡಾ.

ಮಾರ್ಕ್ಸ್ ಹೇಳಿರುವಂತೆ ಬ್ರಿಟಿಷ್ ಖಡ್ಗ ಹೇರಿದ, ನಂತರ ಇಲೆಕ್ಟ್ರಿಕ್ ಟೆಲಿಗ್ರಾಫ್ ಮತ್ತಷ್ಟು ಬಲಗೊಳಿಸಿದ ಐಕ್ಯತೆ, ಬ್ರಿಟಿಷ್ ಸೇನಾಧಿಕಾರಿ ತರಬೇತಿ ನೀಡಿದ ಸ್ಥಳೀಯ ಸೈನ್ಯ, ಪತ್ರಿಕೆಗಳು, ಜಮೀನ್ದಾರಿ ಮತ್ತಿತರ ವ್ಯವಸ್ಥೆಗಳ ಮೂಲಕ ಬ್ರಿಟಿಷರು ಸೃಷ್ಟಿಸಿದ ಖಾಸಗೀ ಆಸ್ತಿ, ಇವೆಲ್ಲದರ ಜೊತೆಗೆ ಕಲ್ಕತ್ತೆಯಲ್ಲಿ ಬೇಕೋ ಬೇಡವೋ ಎಂದು ಇಂಗ್ಲಿಷ್ ಶಿಕ್ಷಣ ಕೊಡಿಸಿದ ಭಾರತೀಯರ ನಡುವಿನಿಂದ ಯೂರೋಪಿಯನ್ ವಿಜ್ಞಾನವನ್ನಳವಡಿಸಿಕೊಂಡ ಒಂದು ಹೊಸ ವರ್ಗ ಮೂಡಿಬರುತ್ತಿತ್ತು. ಈ ವರ್ಗ ದೇಶದ ಸಾಮಾಜಿಕ- ಸಾಂಸ್ಕೃತಿಕ ರೀತಿ ನೀತಿಗಳಲ್ಲಿ ಸುಧಾರಣೆಯ ಒಂದು ಆಂದೋಲನವನ್ನೇ ಹರಿಯಬಿಟ್ಟರು. ಬಂಗಾಳದಲ್ಲಿ ರಾಜಾರಾಮ್ ಮೋಹನ್‌ರಾಯರು ಹಾಗೂ ಅವರ ಬ್ರಹ್ಮ ಸಮಾಜ, ಅದೇರೀತಿ ನಂತರ ದೇಶದ ಇತರೆಡೆಗಳಲ್ಲಿ ಇಂತಹ ಆಂದೋಲನಗಳು ಭಾರತದ ಬೂರ್ಜ್ವಾ ವರ್ಗ ಬಂಡವಾಳಶಾಹಿಯ ಹಿಂದಿನ ಸಂಸ್ಕೃತಿ- ನಾಗರೀಕತೆಗಳಿಗೆ ಹಾಕಿದ ಸವಾಲಿನ ಆರಂಭವೆನ್ನಬಹುದು. ಮುಂದೆ ಹಲವು ಘಟ್ಟಗಳನ್ನು ಹಾದು ಇದೇ ಹೊಸ ವರ್ಗ ಭಾರತದ ಬೂರ್ಜ್ವಾ ವರ್ಗ, 1885 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಿಸಿತು.

ಮುಸ್ಲಿಮರಲ್ಲಿಯೂ ಇದೇ ರೀತಿಯ ಸಾಮಾಜಿಕ ಹಾಗೂ ರಾಜಕೀಯ ಸುಧಾರಣೆಯ ಪ್ರಕ್ರಿಯೆ ಆರಂಭವಾಯಿತು. ಸರ್ ಸೈಯದ್ ಅಹ್ಮದ್ ಖಾನ್‌ರವರ ಅಲೀಘಡ್ ಆಂದೋಲನ ...

... ಆರಂಭವಾದ ಪ್ರಕ್ರಿಯೆಗಿಂತ ಐವತ್ತು ವರ್ಷ ಹಿಂದಿತ್ತು.

ಮುಸ್ಲಿಂ ಲೀಗ್ ದೇಶವನ್ನು ವಿಭಜಿಸುವ ಬ್ರಿಟಿಷರ ದುಷ್ಟ ಯೋಜನೆಯಲ್ಲಿ ತನ್ನನ್ನು ಬಳಸಿಕೊಳ್ಳಲು ಅವಕಾಶ ನೀಡಿತು.

ಇದರರ್ಥ ಮುಸ್ಲಿ ಲೀಗ್‌ನ ಮತೀಯ ಕೋಮುವಾದಿ ರಾಜಕೀಯಕ್ಕೆ ಎದುರಾಗಿ ಕಾಂಗ್ರೆಸ್ ಜಾತ್ಯತೀತ ರಾಜಕೀಯವನ್ನು ನಡೆಸಿಕೊಂಡು ಬಂತು ಎಂದು ಅರ್ಥವಲ್ಲ. ವಾಸ್ತವವಾಗಿ ಕಾಂಗ್ರೆಸ್‌ನಲ್ಲಿ ಹಿಂದೂ ಪುನರುತ್ಥಾನವಾದದ ಅಂಶಗಳು ಬಲವಾಗಿದ್ದವು. ತಿಲಕರು ಗಣೇಶೋತ್ಸವ ಬಳಸಿದ್ದರಲ್ಲಿ ಯುವ ಬಂಗಾಳಿ ಕ್ರಾಂತಿಕಾರಿಗಳ ದುರ್ಗಾ ಪಂಥದ ಅಷ್ಟೇ ಅಲ್ಲ ಗಾಂಧೀಜಿಯವರ 'ರಾಮ ರಾಜ್ಯ' ದ ಕಲ್ಪನೆಯಲ್ಲಿ ಹಿಂದೂ ಪುನರುತ್ಥಾನವಾದದ ಅಂಶಗಳಿದ್ದವು. ಮುಸ್ಲಿಮ್ ಕೋಮಿನಲ್ಲಿ ತನ್ನದೇ ಪುನರುತ್ಥಾನವಾದೀ ದೃಷ್ಟಿಯಿತ್ತು. ಹಿಂದೂ ಪುನರುತ್ಥಾನವಾದಿಗಳು ಮೌರ್ಯ ಸಾಮ್ರಾಜ್ಯದ 'ಸುವರ್ಣ ಯುಗ'ದ ಪುನರಾವರ್ತನೆಯ ಕನಸು ಕಂಡರೆ ಮುಸ್ಲಿಮ್ ಪುನರುತ್ಥಾನವಾದಿಗಳು ಮೊಗಲ್ ಸಾಮ್ರಾಜ್ಯದ ಪುನರಾವರ್ತನೆಯ ಕನಸು ಕಾಣುತ್ತಿದ್ದರು. ಬ್ರಿಟಿಷರಿಗೆ ಈ ಭಿನ್ನತೆ ಸ್ವಾಭಾವಿಕವಾಗಿಯೇ ಒಡೆದಾಳುವ ನೀತಿ ಅನುಸರಿಸಲು ಒಳ್ಳೆಯ ಅವಕಾಶ ಒದಗಿಸಿತು.

ಮಹಾತ್ಮಾ ಗಾಂಧಿಯ ತಲೆಮಾರಿನ ಮುಖಂಡರು ಸ್ವಾತಂತ್ರ್ಯಾಂದೋಲನದ ಮುಖಂಡತ್ವ ವಹಿಸಿಕೊಂಡ ಮೇಲೆ ಜಾತಿ, ಮತ, ಭಾಷೆಯ ಭೇದಭಾವವಿಲ್ಲದೆ ಎಲ್ಲರನ್ನು ಹೋರಾಟದಲ್ಲಿ ಅಣಿನೆರೆಸುವ ಪ್ರಯತ್ನ ಆರಂಭವಾಯಿತು.

ಸಾಮೂಹಿಕ ಹೋರಾಟದ ಗಾಂಧೀವಾದಿ ವಿಧಾನ ಪಾಳೆಯಗಾರಿ ಶಕ್ತಿಗಳನ್ನು, ಪಟ್ಟಭದ್ರ ಹಿತಾಕ್ತಿಗಳನ್ನು ಜನರ ಒಗ್ಗಟ್ಟನ್ನು ಮುರಿಯಲು ಬಳಸುವ ಬ್ರಿಟಿಷ್ ತಂತ್ರಗಳನ್ನು ಎದುರಿಸಲು ಕಾಂಗ್ರೆಸ್‌ಗೆ ಬಹಳ ನೆರವಾಯಿತು. ಇದರ ಜೊತೆಗೆ ಪಾರ್ಲಿಮೆಂಟರಿ ಪ್ರಯತ್ನಗಳ ಮೂಲಕ ಒಂದಾದ ಮೇಲೊಂದರಂತೆ ಬ್ರಿಟಿಷರಿಂದ ರಿಯಾಯ್ತಿಗಳನ್ನು ಗಿಟ್ಟಿಸಕೊಳ್ಳಲು, ಅಂತಿಮವಾಗಿ 1947ರಲ್ಲಿ ಅಧಿಕಾರ ಪಡೆಯಲು ಕಾಂಗ್ರೆಸ್‌ಗೆ ಸಾಧ್ಯವಾಯಿತು.

ಆದರೆ ಈ ವಿಧಾನದಿಂದ ಪ್ರಯೋಜನವಾದದ್ದು ಭಾರತೀಯ ಬೂರ್ಜ್ವಾ ವರ್ಗದ ಕಾಂಗ್ರೆಸ್ ವಿಭಾಗಕ್ಕೆ ಮಾತ್ರವೇ ಅಲ್ಲ. ಮುಸ್ಲಿಮ್ ಲೀಗ್‌ನಲ್ಲಿ ಸಂಘಟಿತರಾದ ಬೂರ್ಜ್ವಾ ವರ್ಗದ ಮುಸ್ಲಿಮ್ ವಿಭಾಗ ಕೂಡಾ ಈ ವಿಧಾನ ಅನುಸರಿಸಿತು. ಕಾಂಗ್ರೆಸ್‌ನ 'ಚಲೇ ಜಾವ್' ಬದಲು ಮುಸ್ಲಿಮ್ ಲೀಗ್ 'ವಿಭಜಿಸಿ-ಹೊರಟು ಹೋಗಿ'

> ಸಾಮಾಜಿಕ ಸುಧಾರಣೆ ನಂತರ ರಾಜಕೀಯ ಸುಧಾರಣೆಯ ಪ್ರಕ್ರಿಯೆ ಹಿಂದೂ ಸಮಾಜದಲ್ಲಿ ಆರಂಭವಾಯಿತು. ಮುಸ್ಲಿಂ ಸಮಾಜದಲ್ಲಿಯೂ ಆರಂಭವಾಯಿತು. ಆದರೆ ಮುಸ್ಲಿಂ ಸಮಾಜ ಇದರಲ್ಲಿ ಐವತ್ತು ...

> ಇತಿಹಾಸದ ಪಾಠ ಸ್ಪಷ್ಟ: ಬಂಡವಾಳಶಾಹಿಗಿಂತ ಮೊದಲಿನ ಪ್ರತಿಗಾಮಿ ಸಿದ್ಧಾಂತಗಳ ವಿರುದ್ಧ ಹೋರಾಡುವ ಬದಲು ಭಾರತದ ಬೂರ್ಜ್ವಾ ವರ್ಗ ರಾಜಿ ಮಾಡಿಕೊಳ್ಳುತ್ತದೆ. ಆದ್ದರಿಂದ ಸ್ವಾತಂತ್ರ್ಯ ಹೋರಾಟದ ದಶಕಗಳಲ್ಲಿ ಕಟ್ಟಿದ ಐಕ್ಯತೆಯ ಪರಂಪರೆಯನ್ನು ಮುಂದುವರೆಸುವ ಹೊಣೆ ಕಾರ್ಮಿಕ ವರ್ಗ ಮತ್ತು ಅದರ ರಾಜಕೀಯ ಪಕ್ಷದ ಹೆಗಲ ಮೇಲೆ ಬೀಳುತ್ತದೆ.

...ರತ

...ಯಲ್ಲಿ ಮತ್ತೆ ಭಾರ-
... ಕೋಮುವಾದದ
...ವಾದದ ಮೂಲ-
...? ಏಕೆ ಅದು
...ಸ ಕಾರ್ಯದರ್ಶಿ
...ಪ್ಪಾಡ್‌ರವರು ಈ
...ರಣದಲ್ಲಿ ಅವರು

...ಕು. ಭಾರತೀಯ ಜನತೆ ಎರಡು ದೇಶಗ-
...ಯಿದು.

ಏಕೆ ಈ ವಿಫಲತೆ?

...ರೆ ಸ್ವಾತಂತ್ರ್ಯ ಆಂದೋಲನದ ನೇತೃತ್ವದ-
...ರ್ಜ್ವಾ ವರ್ಗದ ಮುಖ್ಯ ಉದ್ದೇಶ ಸಾಧ-
...ನಲವಾಯಿತು. ಬ್ರಿಟಿಷ್ ಖಡ್ಗದ ಅಡಿ-
...ವಾಗಿದ್ದ ಭಾರತ, ಆ ಖಡ್ಗ ಹಿಂತೆಗೆ-
... ಎರಡು ವೈರಿ ದೇಶಗಳಾಗಿ ವಿಭಜ-
... ಅಷ್ಟೇ ಅಲ್ಲದೆ ಗಡಿಯ ಎರಡೂ ಕಡೆ
...ಂಡಸರು, ಹೆಂಗಸರು, ಮಕ್ಕಳ ಕಗ್ಗೊಲೆಯ
... ಆರಂಭಗೊಂಡಿತು. ವಿವಿಧ ಜಾತಿ, ಭಾಷೆ
...ನಡುವೆ ತಿಕ್ಕಾಟದ ಬೀಜವು ಬಿತ್ತಲ್ಪಟ್ಟಿತು.
...ಜನೆಯ ಪರಿಣಾಮ, ಜತೆಗೆ ಈ ಅಂತರಿಕ
...ವಾಗಿ ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ
... ಸಮಗ್ರತೆಯ ಅತ್ಯಂತ ಗಂಭೀರ ಪ್ರಶ್ನೆಗೆ
...ಒಟ್ಟಿತು.

> ...ಹೋರಾಟದ ಬಗ್ಗೆ ಮಹಾತ್ಮಾ
> ...ಂತಹ ಪ್ರಸಿದ್ಧ ಮುಖಂಡರೂ
> ...ಸೈದ್ಧಾಂತಿಕವಾಗಿ ಹಿಂದೂ ಪುನ-
> ...ವಾದದೊಂದಿಗೆ ಬಂಧಿಸಲ್ಪಟ್ಟಿದ್ದರು.
> ...ವಾಗಿಯೇ ಇದು ಹಿಂದೂವೇ-
> ...ಸಮೂಹಗಳಲ್ಲಿ ಹಾಗೂ ಹಿಂದೂ
> ... ದಲಿತ ಸಮೂಹಗಳಲ್ಲಿ
> ... ಹೋರಾಟದ ಬಗ್ಗೆ ಒಂದು
> ...ನಿರಾಸಕ್ತಿ ಭಾವನೆ ಸೃಷ್ಟಿಸಿತು.

...ಏಳುವ ಪ್ರಶ್ನೆ– ಸ್ವಾತಂತ್ರ್ಯ ಹೋರಾಟದ
...ಂಲದಲ್ಲಿ ತನ್ನ ಪ್ರಮುಖ ಸಾಧನೆಯಲ್ಲಿ
...ರ್ಗ ಏಕೆ ವಿಫಲಗೊಂಡಿತು? ಸ್ವಾತಂತ್ರ್ಯದ
...ಷ್ಟು ಹೇಳಿಕೊಳ್ಳುವ ರಾಷ್ಟ್ರೀಯ ಸಮಗ್ರ-
...ನಿರ್ವಹಣೆಯಲ್ಲಿ ಅದು ಹೇಗೆ ವಿಫಲವಾ-

... ಕಾರಣ, ಹಿಂದೆ ಸ್ವಾತಂತ್ರ್ಯ ಆಂದೋಲ-
...ಕ್ಕೆ ನೀಡಿದ, ಈಗ ಪ್ರಭುತ್ವ,ಸರ-
...ುತ್ತಿರುವ ಬೂರ್ಜ್ವಾ ವರ್ಗಕ್ಕೆ ಬಂಡವಾಳ
... ಮೊದಲಿನ ಸಾಮಾಜಿಕ ವ್ಯವಸ್ಥೆ ಸುಮಾ-
...ಈ ಉಳಿದಿರುವ ಸ್ಥಿತಿಯಲ್ಲಿ ಬಂಡವಾ-
... ಕಟ್ಟುವ ಸಮಸ್ಯೆಯನ್ನು ಗ್ರಹಿಸುವುದು
... ಸಿಪಿಐ(ಎಂ) ಕಾರ್ಯಕ್ರಮ ಈ ಬಗ್ಗೆ
...ವನ್ನು ನೆನಪಿಸಿಕೊಳ್ಳೋಣ– ಬ್ರಿಟಿಷರಿಗಿಂತ
...ಒಂದು ಶತಮಾನಕ್ಕೂ ಹೆಚ್ಚು ಆಳಿದ
...ಹಿಷ್ಕುರುಕಾಶಿಗಳಾಗಲಿ, 1947 ರಲ್ಲಿ ಅಧಿಕಾರ
...ಶೀಯ ಬೂರ್ಜ್ವಾ ವರ್ಗವಾಗಲಿ ಒಂದು
... ಸಮಾಜದ ಮುಕ್ತ ಬೆಳವಣಿಗೆಗೆ ಅಗ-
...ಮು ಹೊಡೆತಗಳನ್ನು ಬಂಡವಾಳಶಾಹಿಗಿಂತ
...ವ್ಯವಸ್ಥೆಗೆ ನೀಡಲಿಲ್ಲ. ಆದ್ದರಿಂದ
...ಶೀಯ ಸಮಾಜ ಜಾತಿ, ಕೋಮು, ಬುಡ-
...ಗಳೊಂದಿಗೆ ಗುತ್ತಿಗೆದಾರ ಬಂಡವಾಳಶಾ-
...ದ ಒಂದು ವಿಚಿತ್ರ ಮಿಶ್ರಣ
... ಸ್ವಾತಂತ್ರ್ಯ ಹೋರಾ-

...ರುತ್ಥಾನವಾದದೊಂದಿಗೆ ಬಂಧಿಸಲ್ಪಟ್ಟಿದ್ದರು. ಸ್ವಾಭಾವಿಕವಾಗಿಯೇ ಇದು ಹಿಂದೂವೇತರ ಜನಸಮೂಹಗಳಲ್ಲಿ ಹಾಗೂ ಹಿಂದೂ ಸಮಾಜದ ದಲಿತ ಸಮೂಹಗಳಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಒಂದು ರೀತಿಯ ನಿರಾಸಕ್ತಿ ಭಾವನೆ ಸೃಷ್ಟಿಸಿತು.

ನಿಜ, ಇದಕ್ಕೆ ಸಮಾನಾಂತರವಾಗಿ ಮುಸ್ಲಿಮ್, ಕ್ರಿಶ್ಚಿಯನ್, ಸಿಖ್ ಮತ್ತಿತರ ಪುನರುತ್ಥಾನವಾದಿ, ಪ್ರತ್ಯೇಕತಾವಾದಿ, ಶಕ್ತಿಗಳಿದ್ದವು. ಬ್ರಿಟಿಷ ಸಾಮ್ರಾಜ್ಯಶಾಹಿ ಇದನ್ನು ಜಾಣತನದಿಂದ ಬಳಸಿಕೊಂಡಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಈ ಜಾಣತನದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಹಿಂದಕ್ಕೆ ಹಾಕಿತು ಎಂಬುದನ್ನು ಕಾಣುವುದು ಮಹಾತ್ಮಾ ಗಾಂಧಿಯವರಿಗಷ್ಟೇ ಸಾಧ್ಯವಾಯಿತು. ಆದರೆ ತನ್ನ ವರ್ಗ ದೃಷ್ಟಿಕೋಣದಿಂದ ಸುತ್ತುವರಿದಿದ್ದ ಅವರು, ಈ ವಸ್ತು ಸ್ಥಿತಿಯಿಂದ ಪಾರಾಗುವ ಬಗೆ ಕಾಣದಾದರು.

ಕಾರ್ಮಿಕ ವರ್ಗ ಮತ್ತು ಅದರ ಪಕ್ಷ(ಕಮ್ಯುನಿಸ್ಟ್ ಪಕ್ಷ) ಒಂದು ಬಲಶಾಲಿ ಶಕ್ತಿಯಾಗಿದ್ದರೆ, ಪರಿಸ್ಥಿತಿ ಎದುರಿಸುವ ಪ್ರೌಢತೆ ಅದಕ್ಕಿದ್ದಿದ್ದರೆ ಸನ್ನಿವೇಶ ಬೇರೆಯೇ ಆಗುತ್ತಿತ್ತು. ಆದರೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಅದು ಅತ್ಯಂತ ದುರ್ಬಲವಾಗಿತ್ತು. ಆದ್ದರಿಂದ ಸಲವತ್ತರ ದಶಕದಲ್ಲಿ ರಾಷ್ಟ್ರದ ರಾಜಕೀಯವೂ ಪ್ರಬಲವಾಗಿದ್ದದು ಎರಡು ಬೂರ್ಜ್ವಾ ರಾಜಕೀಯ ಪಕ್ಷಗಳು–ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅಖಿಲ ಭಾರತ ಮುಸ್ಲಿಂ ಲೀಗ್.

ಭಾರತ ಮೂಲಭೂತವಾಗಿ ಒಂದು ಬಹುದೇಶೀಯ ಸಮಾಜ. ಒಂದು ನೈಜ ಒಕ್ಕೂಟದ ಮೂಲಕವಷ್ಟೇ, ಭಾಷಾವಾರು ಪ್ರಾಂತ್ಯಗಳಿಗೆ ಸಾಧ್ಯವಾದಷ್ಟು ವ್ಯಾಪಕವಾಗಿ ಸ್ವಾಯತ್ತತೆ ನೀಡುವ ಮೂಲಕವಷ್ಟೇ ಅದರ ಐಕ್ಯತೆ, ಸಮಗ್ರತೆಯ ರಕ್ಷಣೆ ಸಾಧ್ಯ ಎಂಬ ವಾಸ್ತವಿಕತೆಯನ್ನು ಕಾಂಗ್ರೆಸ್ ಅರಿಯಲಾರದಾಗಿದೆ ಎಂಬುದನ್ನು ಕಾಣುವುದು ಕಮ್ಯುನಿಸ್ಟ್ ಪಕ್ಷಕ್ಕೆ ಸಾಧ್ಯವಾಗಿತ್ತು. ಅದೇ ರೀತಿ ಮುಸ್ಲಿಂ ಲೀಗ್ ಕೂಡಾ ಹಿಂದೂಗಳು ಹಾಗೂ ಮುಸ್ಲಿಮರಿಂದ ಕೂಡಿರುವ ಹಲವು ರಾಜ್ಯಗಳಿಂದ ಕೂಡಿದ ದೇಶ ಎಂದು ಕಾಣಲು, ದರಿಂದಾಗಿ ತನ್ನ ಎರಡು-ದೇಶಗಳ ಸಿದ್ಧಾಂತ ಸೂಕ್ತವಲ್ಲ ಎಂದು ಅರಿಯುವಲ್ಲಿ ವಿಫಲಗೊಂಡಿತು.

ಹೀಗೆ ಕಾಂಗ್ರೆಸ್ ಮತ್ತು ಲೀಗಿನ ನಿಲುವುಗಳ ದೌರ್ಬಲ್ಯವನ್ನು ಸರಿಯಾಗಿ ಗ್ರಹಿಸಲು ಕಮ್ಯುನಿಸ್ಟ್ ಪಕ್ಷಕ್ಕೆ ಸಾಧ್ಯವಾಗಿದ್ದರೂ, ಅದು ಆಗ ಒಂದು ನಗಣ್ಯ ರಾಜಕೀಯ ಶಕ್ತಿಯಾಗಿತ್ತು. ಅಲ್ಲದೆ ಈ ದೇಶೀ ಪ್ರಶ್ನೆಯ ಅನುಷ್ಠಾನದ ತಿಳುವಳಿಕೆಯಲ್ಲಿ ಸ್ವಲ್ಪ ತಪ್ಪು ಅಂಶಗಳಿದ್ದವು. ಕ್ವಿಟ್ ಇಂಡಿಯಾ ಹೋರಾಟದ ಸಮಯದಲ್ಲಿ ತಳೆದ ಕಾರ್ಯತಂತ್ರದಲ್ಲಿನ ಕೆಲವು ತಪ್ಪುಗಳೂ ಇದರೊಂದಿಗೆ ಸೇರಿಕೊಂಡು ಪಕ್ಷ ಸಾಮ್ರಾಜ್ಯಶಾಹಿ-ವಿರೋಧಿ ಜನಸಮೂಹಗಳಿಂದ ದೂರ ಸರಿಯುವಂತಾಗಿತ್ತು. ಇದರಿಂದಾಗಿ ರಾಜಕೀಯ ರಂಗವನ್ನು ಕಾಂಗ್ರೆಸ್ ಮತ್ತು ಲೀಗ್ ಪರಸ್ಪರ ಹೋರಾಡಲು ತೆರೆದಿಟ್ಟಂತಾಯಿತು. ಈ ಮೂಲಕ ದೇಶದ ಎರಡು ಕೋಮುಗಳ ನಡುವೆ ವೈರತ್ವದ ಯುದ್ಧ ಸಿಡಿಸಲು ಅದಕ್ಕೆ ಪೂರ್ಣ ಅವಕಾಶ ದೊರೆತಂತಾಯಿತು.

ಇತಿಹಾಸದ ಪಾಠ ಇದರಿಂದ ಸ್ಪಷ್ಟ: ಜಾತಿ ಹಾಗೂ ಕೋಮು ವಿಚ್ಛಿದ್ರತೆಯ ವಿರುದ್ಧ ಹೋರಾಟ ಪಾಳೆಯಗಾರಿ ಮತ್ತಿತರ ಬಂಡವಾಳಶಾಹಿಯ ಮೊದಲಿನ ಸಿದ್ಧಾಂತಗಳ, ತತ್ವಗಳ ವಿರುದ್ಧ ದುಡಿಯುವ ಜನಗಳ(ಇದರಲ್ಲಿ ಕಾರ್ಮಿಕ ವರ್ಗವಲ್ಲದೆ, ಬಹುಪಾಲು ರೈತಾಪಿ ವರ್ಗ ಮತ್ತಿತರ ದುಡಿಮೆಗಾರ ಜನ ಸಮೂಹಗಳೂ ಸೇರಿವೆ) ಹೋರಾಟಕ್ಕೂ ಅತ್ಯಂತ ನಿಕಟ ಸಂಬಂಧವಿದೆ. ಈ ಹಳಸಲು ಸಿದ್ಧಾಂತಗಳ ವಿರುದ್ಧ ಬಂಡವಾಳಶಾಹಿ ಹೋರಾಡುವ ಬದಲು ರಾಜಿ ಮಾಡಿಕೊಳ್ಳುತ್ತದೆ. ಆದ್ದರಿಂದ ಸ್ವಾತಂತ್ರ್ಯ ಹೋರಾಟದ ದಶಕಗಳಲ್ಲಿ ಕಟ್ಟಿದ ರಾಷ್ಟ್ರೀಯ ಐಕ್ಯತೆಯ ಪರಂಪರೆಯನ್ನು ಮುಂದುವರೆಸುವ ಕರ್ತವ್ಯ ಕಾರ್ಮಿಕ ವರ್ಗ ಹಾಗೂ ಅದರ ರಾಜಕೀಯ ಪಕ್ಷದ ಹೆಗಲ ಮೇಲೆ ಬೀಳುತ್ತದೆ. ಪ್ರಜಾಪ್ರಭುತ್ವ ಆಂದೋಲನದಲ್ಲಿ ತನ್ನ ಮಿತ್ರ ಶಕ್ತಿಗಳೊಂದಿಗೆ ಈ ಹೊಣೆಗಾರಿಕೆ ನೆರವೇರಿಸಬೇಕು. ಆದರಿಂದಲೇ ಎಲ್ಲಾ ಎಡ ಜಾತ್ಯಾತೀತ ಪ್ರಜಾಪ್ರಭುತ್ವ

ನನ್ನ ಹೆಣದ ಮೇಲೆ ನಡೆದಷ್ಟೇ .... ಮಸೀದಿ ಕೆಡವಲು ಸಾಧ್ಯ

–ಸ್ವಾಮಿ ಲಾಲ್‌ದಾಸ್
ಅಯೋಧ್ಯೆಯ ರಾಮ ದೇವಾಲಯದ ಮಹಂತ

"........ನನ್ನ ಹೆಣವನ್ನು ತುಳಿದಷ್ಟೇ ಅವರು ಬಾಬ್ರಿ ಮಸೀದಿ ಕೆಡವಲು, ಮಂದಿರ ಕಟ್ಟಲು ಸಾಧ್ಯ... ಮಾತ್ರವಲ್ಲ, ಕೋಮು ಸೌಹಾರ್ದತೆಯನ್ನು ತಮ್ಮ ಜೀವನದ ಭಾಗವಾಗಿಸಿಕೊಂಡಿರುವ ಅಯೋಧ್ಯೆಯ ನಿವಾಸಿಗಳ ಮೃತ ದೇಹಗಳನ್ನು ತುಳಿದು ಅವರು ಮುಂದುವರಿಯಬೇಕಾಗುತ್ತದೆ........." ಎಂಬ ಸ್ವಾಮಿ ಲಾಲ್ ದಾಸ್‌ರವರ ಮಾತುಗಳಲ್ಲಿ ರೋಷ, ಮಾನವೀಯತೆಯ ಬಗ್ಗೆ ಬದ್ಧತೆ ತುಂಬಿದೆ.

ಈ ವ್ಯಕ್ತಿಯು ಓರ್ವ ಮುಸ್ಲಿಂ ಮತ ಭ್ರಾಂತನಾಗಲಿ, ತಲೆ ಬಿರುಕ ಹಿಂದೂ ಸ್ವಾಮಿಯಾಗಲೀ ಅಲ್ಲ. ಕೋಮುವಾದಿಗಳ ವಿಷಪೂರಿತ ಪ್ರಚಾರಗಳನ್ನು ಬೆದರಿಕೆಗಳನ್ನು ಎದುರಿಸಿ ಕೋಮುಸೌಹಾರ್ದತೆಯ ಸಂದೇಶವನ್ನು ಎತ್ತಿ ಹಿಡಿಯುವ ಅಯೋಧ್ಯೆಯ ಶ್ರೀರಾಮ ಮಂದಿರದ ಸ್ವಾಮಿ ಲಾಲ್ ದಾಸ್. ನ್ಯಾಯಾಲಯದ ಮೂಲಕ ನೇಮಿಸ್ಪಟ್ಟಿರುವ ಈ ಪೂಜಾರಿ ಬಾಬ್ರಿ ಮಸೀದಿ ಕೆಡವುದಕ್ಕೆ ವಿರೋಧವಿದ್ದಾರೆ. ಕೋಮು ಸೌಹಾರ್ದತೆಗಾಗಿ ತನ್ನ ಪ್ರಾಣವನ್ನು ಒತ್ತೆ ಇಡಲೂ ಸ್ವಾಮಿ ಲಾಲ್ ದಾಸ್ ಸಿದ್ಧರಿದ್ದಾರೆ. ತಮ್ಮ ಕೋಮು ಸೌಹಾರ್ದತಾ ಪ್ರತಿಪಾದನೆಯಿಂದಾಗಿ ಒಂದು ಮತಭ್ರಾಂತರ ಕೆಂಗಣ್ಣಿಗೆ ಒಳಗಾದ ಇವರು ನಾಲ್ಕು ಬಾರಿ ಕೊಲೆ ಪ್ರಯತ್ನದಿಂದ ಪಾರಾಗಿದ್ದಾರೆ.

"ಕರೆಂಟ್" ಪತ್ರಿಕೆಯ ಸಂಪಾದಕ ಅಯೂಬ್‌ರವರು ಸ್ವಾಮಿ ಲಾಲ್‌ದಾಸ್‌ರವರೊಂದಿಗೆ ನಡೆಸಿದ ಸಂದರ್ಶನವನ್ನು ಈ ಕೆಳಗೆ ಕೊಡಲಾಗಿದೆ.

ಪ್ರಶ್ನೆ:
ಅಯೋಧ್ಯೆಯ ಈಗಿನ ಸ್ಥಿತಿಯ ಬಗ್ಗೆ ತಿಳಿಸಬಲ್ಲಿರಾ?

ಉತ್ತರ:
ಅಯೋಧ್ಯೆಯ ಹೆಸರಿನಲ್ಲಿ ಕೋಮುವಾದವು ಸ್ಫೋಟಕ ಸ್ಥಿತಿಗೆ ತಲುಪಿದೆ. ಅಧಿಕಾರಿ ವರ್ಗದ ಕೆಲವರೂ ಕೂಡ ಇದರಲ್ಲಿ ಶಾಮಿಲಾಗಿದ್ದಾರೆ. ಅಯೋಧ್ಯೆಯ ಡಿವೈಎಸ್‌ಪಿ ಪ್ರತಾಪ್‌ಕುಮಾರ್ ಶರ್ಮನಂತವರ ಕಾರ್ಯವೈಖರಿ ಇದಕ್ಕೆ ಉದಾಹರಣೆಗಳಾಗಿವೆ. ದೆಹಲಿಯನ್ನು ಕೇಂದ್ರವನ್ನಾಗಿಸಿಕೊಂಡು ಕಾರ್ಯನಿರ್ವಹಿಸುವ ವಿಶ್ವಹಿಂದೂ ಪರಿಷತ್(ವಿ.ಎಚ್.ಪಿ.) ಮುಖಂಡ ವೈದ್ಯನಾಥ್ ಲಾಲ್ ಶರ್ಮರ ಆದೇಶ ಅನುಸರಿಸಿಯಷ್ಟೇ ಇವರ ಹಲವು ಯೋಜನೆಗಳು ರೂಪಿಸಲ್ಪಡುತ್ತವೆ. ಜಿಲ್ಲಾ ಮುಖ್ಯ ನ್ಯಾಯಾಧೀಶರಾದ ಆರ್.ಎಸ್. ಶ್ರೀವಾಸ್ತವರವರು ಸ್ವಾಮಿ ಚಿನ್ಮಾಯಾನಂದರ ಭಕ್ತರಾಗಿದ್ದಾರೆ. ಪೋಲೀಸ್ ಸೂಪರಿಂಟೆಂಡೆಂಟ್ ಜೋಷಿ ಕೂಡ ಉತ್ತರ ಪ್ರದೇಶ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್‌ರವರನ್ನು ಮೋಸಗೊಳಿಸುತ್ತಿದ್ದಾರೆ.

ಪ್ರಶ್ನೆ:
ಮುಖ್ಯಮಂತ್ರಿಗಳಿಗೆ ಇದು ತಿಳಿಯದೇ?

ಉತ್ತರ:
ಬಹುಶ: ತಿಳಿದಿಲ್ಲ. ಕಾರಣ, ರಾಜ್ಯದ ಗುಪ್ತಾಚಾರ ಇಲಾಖೆ ಪೋಲೀಸರು ನೀಡುವ ವರದಿಗಳಲ್ಲಿ ಹಲವು ವಿಎಚ್‌ಪಿ ಆಶಯಗಳಿಗೆ ಪೂರಕವಾಗಿಯೇ ಇರುತ್ತವೆ.

ಪ್ರಶ್ನೆ:
ಈ ವಿಷಯವನ್ನು ತಾವು ಗೃಹ ಮಂತ್ರಿಗಳ ಗಮನಕ್ಕೆ ತಂದಿದ್ದೀರಾ?

ಉತ್ತರ:
ಖಂಡಿತವಾಗಿಯೂ. ಜನರ ಭಯದ ಕುರಿತೂ ಆಡಳಿತ ಯಂತ್ರದ ನಿಷ್ಕ್ರಿಯತೆಯ ಬಗೆಗೂ ಪ್ರಸ್ತುತ ಕೋಮು ಸ್ಥಿತಿಯ ಬಗೆಗೂ ನಾನು ಗೃಹ ಮಂತ್ರಿಗಳಿಗೆ ತಿಳಿಸಿದ್ದೇನೆ.

ಪ್ರಶ್ನೆ:
ವಿಶ್ವ ಹಿಂದೂ ಪರಿಷತ್ ಯಾತಕ್ಕಾಗಿ ನಿಮ್ಮನ್ನು ವೈರಿಯಂತೆ ಕಾಣುತ್ತಿದೆ?

ಉತ್ತರ:
ವಿಎಚ್‌ಪಿಯ ದಾರಿಗೆ ಪ್ರಧಾನ ಶತ್ರುವಾಗಿ ನಾನು ಗೋಚರಿಸುತ್ತಿದ್ದೇನೆ. ನನ್ನನ್ನು ಒದ್ದು ಹೊರಗಟ್ಟಿದರೆ ಮಂದಿರದ ಪೂರ್ಣ ಹಿಡಿತ ಸಾಧಿಸಲು ಹಲವರಿಗೆ ಸಾಧ್ಯ. ಆದರೆ ಈಗ ನೇರವಾಗಿ ಏನೂ ಮಾಡಲೂ ಅವರಿಗೆ ಸಾಧ್ಯವಾಗುತ್ತಿಲ್ಲ. ಅದರಿಂದಾಗಿಯೇ ಅವರು ನನ್ನ ಮೇಲೆ ಎರಗುತ್ತಿದ್ದಾರೆ.

ಪ್ರಶ್ನೆ:
ನಿಮ್ಮನ್ನು ಅಯೋಧ್ಯೆಯ ರಾಮಮಂದಿರದ ಪುರೋಹಿತ(ಪೂಜಾರಿ)ಯಾಗಿನೇಮಿಸಿದ್ದು ಯಾರು?

ಉತ್ತರ:
1982ರಲ್ಲಿ ನ್ಯಾಯಾಲಯವು ಪೂಜಾರಿಯಾಗಿ ನನ್ನನ್ನು ನೇಮಿಸಿತು. ಇದಕ್ಕಿಂತ ಮೊದಲೇ ನಗರದ ಮುಖ್ಯ ಮ್ಯಾಜಿಸ್ಟ್ರೇಟರು ಈ ಬಗ್ಗೆ ಆದೇಶ ಹೊರಡಿಸಿದ್ದರು. ಹೈಕೋರ್ಟು ಮಾತ್ರ ನನ್ನನ್ನು ಈ ಸ್ಥಾನದಿಂದ ಇಳಿಸಲು ಸಾಧ್ಯ.

ಪ್ರಶ್ನೆ:
ಯಾವತ್ತಾದರೂ ನೀವು ಧಾಳಿಗೆ

ಉತ್ತರ:
ಈ ಮೊದಲು ನಾಲ್ಕು ಬಾರಿ ನನ್ನ ಕೊಲೆ ಯತ್ನ ನಡೆದಿದೆ. ಕೊನೆಯ ಪ್ರಯತ್ನ ಕಳೆದ ಆಗಸ್ಟ್ 5ರಂದು ನಡೆದಿತ್ತು. ಐದಾರು ಮಂದಿ ಬಂದೂಕು ಹಿಡಿದು ಮಂದಿರ ಪ್ರವೇಶಿಸಿದ್ದರು. 'ಜುಲ' ಹಬ್ಬ ನಡೆಯುವ ಸಂದರ್ಭವದು. ನನ್ನ ಸುತ್ತ ಸಾಕಷ್ಟು ಜನರಿದ್ದ ಕಾರಣ ಗೂಂಡಾಗಳನ್ನು ಹಿಡಿದು ಪೋಲೀಸರಿಗೆ ಒಪ್ಪಿಸಲು ಸಾಧ್ಯವಾಯಿತು. ಆದರೆ, ಬಂಧಿತರನ್ನು ಪ್ರಶ್ನಿಸದೆ ಅವರ ಮೇಲೆ ಕ್ರಮವಹಿಸದೆ ಪೋಲೀಸರು ಬಿಡುಗಡೆಗೊಳಿಸಿದರು.

ಪ್ರಶ್ನೆ:
ಅಕ್ಟೋಬರ್ 30ಕ್ಕೆ ಏನಾಗಬಹುದೆಂದು ಹೇಳಬಲ್ಲಿರಾ?

ಉತ್ತರ:
ಅಕ್ಟೋಬರ್ 30 ರಂದು ಮಂದಿರ ನಿರ್ಮಾಣ ಆರಂಭಿಸುವುದಾಗಿ ಅಲ್ಲವೇ ಘೋಷಣೆ. ಆದರೆ ಅದಕ್ಕೆ ನಿವೇಶನವಾದರೂ ಎಲ್ಲಿದೆ? 6 ಎಕರೆ ಭೂಮಿ ಸುಮ್ಮನೆ ಪಾಳು ಬಿದ್ದಿದೆ. ಆದರೆ ಅದು 'ಜನ್ಮ ಭೂಮಿ' ಯಿಂದ ಎಷ್ಟೋ ದೂರದಲ್ಲಿದೆ.

ಪ್ರಶ್ನೆ:
ಆರು ಎಕರೆ ಸ್ಥಳವಿದೆಯೆಂದು ಅದನ್ನು ಉಪಯೋಗಿಸಬಾರದೇ?

ಉತ್ತರ:
ಅಗಾರಿಯಾದ ರಾಜ ರಾಮದಾಸ್ ಈ ಸ್ಥಳವನ್ನು ಯಾವ ಕಾರಣಕ್ಕೂ ಅವರಿಗೆ ನೀಡಲಿಕ್ಕಿಲ್ಲ. ಈ ಪ್ರಶ್ನೆಯಲ್ಲಿ ಬಹಳ ಹಿಂದೆಯೇ ಅವರು ವಿಎಚ್‌ಪಿ ಮೇಲೆ ಕೇಸು ದಾಖಲಿಸಿದ್ದರು. ರಾಜನಿಂದ ತಾವು ಈ ಸ್ಥಳ ಖರೀದಿಸಿದ್ದಾಗಿ ವಿಎಚ್‌ಪಿ - ಅಲ್ಲೊಂದು ಪ್ರದರ್ಶನ ಸಂಘಟಿಸಿತ್ತು. ಜಿಲ್ಲಾಧಿಕಾರಿ ಕೂಡ ಈ ಪ್ರಶ್ನೆಯಲ್ಲಿ ವಿಎಚ್‌ಪಿಯನ್ನು ಬೆಂಬಲಿಸಿದಾಗ ರಾಜ ರಾಮದಾಸ್ ಪ್ರತಿ ಕೇಸು ಹಾಕಿದರು. ಫೈಜಾಬಾದ್, ಅಲಹಾಬಾದ್ ನ್ಯಾಯಾಲಯಗಳಿಗೆ ಪ್ರಶ್ನೆಕೊಂಡೊಯ್ದರು. ಈ ಸ್ಥಳದ ಬಳಿ ಇನ್ನೂ ಆರು ಎಕರೆ ಸ್ಥಳ ಸ್ಮಶಾನ ಇದೆ. ಸಾಧ್ಯವಾದರೆ ಇಲ್ಲೇ ದೇವಾಲಯ ನಿರ್ಮಿಸಬೇಕೆನ್ನುವುದು ವಿಎಚ್‌ಪಿಯ ಉದ್ದೇಶವಾಗಿದೆ.

ಪ್ರಶ್ನೆ:
ಮತ್ತೆ ಹೇಗೆ ಮಂದಿರ ನಿರ್ಮಿಸುವುದು?

ಉತ್ತರ:
ಅವರು ಉದ್ದೇಶಿಸಿರುವುದು ಮಸೀದಿಯನ್ನು ಒಡೆದು ಅಲ್ಲಿ ಮಂದಿರ ನಿರ್ಮಿಸಲು. ಇದು ನಡೆದರೆ ದೇಶಾದ್ಯಂತ ವ್ಯಾಪಕ ಹಿಂಸಾಚಾರ ನಡೆಯಲಿದೆ.

ಪ್ರಶ್ನೆ:
ಮಸೀದಿ ಇರುವ ಸ್ಥಳದ ವಿಸ್ತೀರ್ಣ ಎಷ್ಟೆಂದು ಹೇಳಬಹುದೇ?

ಉತ್ತರ:
ಅರ್ಧ ಎಕರೆಗಿಂತ ಕಡಿಮೆ. 7-8 ಕೋಣೆಗಳನ್ನು ಮಾಡಬಹುದಷ್ಟೇ.

ಪ್ರಶ್ನೆ:
ಮಸೀದಿ ಕೆಡವಬೇಕೆಂದು ತಮ್ಮ ಆಗ್ರಹವಿದೆಯೇ?

ಉತ್ತರ:
ಖಂಡಿತಾ ಇಲ್ಲ. ಈ ವಿಚಾರದಲ್ಲಿ ನ್ಯಾಯಾಲಯದ ತೀರ್ಮಾನದವರೆಗೆ ಕಾಯುವುದು ಸೂಕ್ತವೆಂದು ನನ್ನ ಅಭಿ...

ಪ್ರಶ್ನೆ:
ಒಂದು ಮತದ ಆರಾಧನಾ ಸ್ಥಳವನ್ನು ಕೆಡವಲು ತಮ್ಮ ಸಮ್ಮತಿ ಇದೆಯೇ?

ಉತ್ತರ:
ಇಲ್ಲ. ಮಸೀದಿ ಒಡೆಯುವ ವಿಚಾರದಲ್ಲಿ ಪೂರ್ಣವಾಗಿ ನನ್ನ ವಿರೋಧವಿದೆ.

ಪ್ರಶ್ನೆ:
ಇದರ ಅರ್ಥ–ಮಂದಿರ ನಿರ್ಮಾಣಕ್ಕೆ ನಿಮ್ಮ ವಿರೋಧವಿದೆಯೆಂದೇ?

ಉತ್ತರ:
ಅಲ್ಲ. ಮಸೀದಿ ಕೆಡವದೆ ಮಂದಿರ ನಿರ್ಮಿಸಲು ಸಾಧ್ಯವೇ ಎಂದು ನೋಡಬೇಕು. ಮಂದಿರದ ವಿಸ್ತೀರ್ಣ ವಿಎಚ್‌ಪಿ ಉದ್ದೇಶಿಸಿರುವಷ್ಟು ಆಗಬಾರದೆಂದು ಅರ್ಥ. ಮಸೀದಿ ಒಡೆದರೂ ಕೂಡ ವಿಎಚ್‌ಪಿ ಉದ್ದೇಶಿಸಿದಷ್ಟು ದೊಡ್ಡ ಮಂದಿರ ನಿರ್ಮಿಸಲು ಸಾಧ್ಯವಿಲ್ಲ.

ಪ್ರಶ್ನೆ:
ರಾಮಶಿಲೆ ಪೂಜೆ ಮಾಡಿದ ಇಟ್ಟಿಗೆಗಳು ಈಗ ಎಲ್ಲಿವೆ?

ಉತ್ತರ:
ಅವುಗಳು 2 ಕೀ.ಮೀ. ದೂರದಲ್ಲಿವೆ. ಜನ್ಮ ಭೂಮಿ ಪ್ರದೇಶದಲ್ಲಿ ಸ್ಥಳಾವಕಾಶವಿಲ್ಲದ ಕಾರಣ ಸರಯೂ ನದಿ ದಂಡೆಯಲ್ಲಿ ಅವುಗಳಿವೆ.

ಪ್ರಶ್ನೆ:
ಮತ್ತೆ ವಿಎಚ್‌ಪಿ ಶಿಲಾನ್ಯಾಸ ಮಾಡಿದ್ದೆಲ್ಲಿ?

ಉತ್ತರ:
ವಿಎಚ್‌ಪಿ ಶೇಷಗೋಪಾಲರ ವಶದಲ್ಲಿರುವ ಸ್ಥಳದ ಒಂದು ಭಾಗದಲ್ಲಿ ಅಕ್ರಮವಾಗಿ ಪ್ರವೇಶಿಸಿ ಅಲ್ಲಿ ಶಿಲಾನ್ಯಾಸ ಮಾಡಲು ಪ್ರಯತ್ನಿಸಿತು. ಇದರ ವಿರುದ್ಧ ಪ್ರತಿಭಟನೆ ಬಂದಾಗ ಅವರು ಶಿಲಾನ್ಯಾಸದ ಸ್ಥಳ ಮತ್ತೆ ಬದಲಿಸಿದರು. ಕೊನೆಯದಾಗಿ ಸ್ಮಶಾನದ ಎರಡು ಇಟ್ಟಿಗೆಗಳನ್ನು ತೆಗೆದು ಅಲ್ಲಿ ಇವರು ಇಟ್ಟಿಗೆ ಇರಿಸಿದರೆಂದು ತಿಳಿದು ಬಂದಿದೆ.

ಪ್ರಶ್ನೆ:
ಸ್ಮಶಾನದಲ್ಲೇ?

ಉತ್ತರ:
ಹೌದು. ಸ್ಮಶಾನದಲ್ಲಿ, ಪಾಯಿಖಾನೆ ಇರುವೆಡೆಗಳಲ್ಲಿ ಒಮ್ಮೆಯೂ ದೇವಾಲಯ ನಿರ್ಮಿಸಬಾರದು. ಕಾರಣ, ಅವುಗಳು ಅಪವಿತ್ರವಾದ ಸ್ಥಳಗಳು.

ಪ್ರಶ್ನೆ:
ಮತ್ತೆಲ್ಲಿ ನಿರ್ಮಿಸುವುದು?

ಉತ್ತರ:
ಭಾರತದಿಂದಲೂ, ಪ್ರಪಂಚದ ವಿವಿಧ ಭಾಗಗಳಿಂದಲೂ ದಶಲಕ್ಷಗಟ್ಟಲೆ ಹಣವನ್ನು ವಿಎಚ್‌ಪಿ ಈ ಹೆಸರಿನಲ್ಲಿ ಸಂಗ್ರಹಿಸಿದೆ. ಈಗ ಕ್ಲೀನ್ ಮಾಡಿದ್ದೇವೆ ಎಂದು ಹೇಳುತ್ತಾ ಎದೆ ಬಡಿದುಕೊಳ್ಳುತ್ತಿದ್ದಾರೆ ಅವರು.

ಪ್ರಶ್ನೆ:
ಮತ್ತೆ ಹೇಗೆ ಮಂದಿರ ನಿರ್ಮಾಣಕ್ಕೆ ಅಭೂತಪೂರ್ವ ಬೆಂಬಲ ದೊರೆಯಿತೆಂದು ಪ್ರಚಾರ ನಡೆಸುವುದು?

ಉತ್ತರ:
ಜನರನ್ನು ವಂಚಿಸಲು ಮಾಡುವ ತಂತ್ರವದು. ತನ್ನ ಸ್ಥಳವಾಗಿ ...

ಕೇರಳ: ಎಲ್.ಡಿ.ಎಫ್‌ನ ಇನ್ನೊಂದು ಪ್ರಯೋಗ

ಕೇರಳವನ್ನು ಭಾರತದ ರಾಜಕೀಯ ...ಯೋಗಾಲಯ ಎನ್ನಲಾಗುತ್ತದೆ. ಎಡ-...ಪ್ರಜಾಸತ್ತಾತ್ಮಕ ಚಳುವಳಿ ಬೇರುಬಿಟ್ಟಿರುವ ...ಕೇರ ನಾಡಿನಲ್ಲಿ ರಾಜಕೀಯ ...ತ್ರವಲ್ಲದೆ ಬೇರೆ ಇತರ ರಂಗಗಳಲ್ಲೂ ...ಯೋಗ ನಡೆಯುತ್ತಲೇ ಇದೆ. ಮಾನವ ...ಸನ್ಮೂಲ ಸದ್ಬ- ...ಪ್ರಯೋಗವೊಂದಕ್ಕೆ ಅದೀಗ ಸಜ್ಜಾಗಿದೆ. ನಿರುದ್ಯೋಗಿಗ-...ಳುವ ಲಕ್ಷಾಂತರ ಯುವಕ-ಯುವತಿಯ-...ರಚನಾತ್ಮಕ ಕಾರ್ಯಗಳಲ್ಲಿ ತೊಡ-...ವ ಯೋಜನೆಯೊಂದು ಅಲ್ಲಿ ಸಿದ್ಧವಾ-...ಸಿ.ಪಿ.ಐ(ಎಂ) ನೇತೃತ್ವದ ಎಡ-ಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್) ಸರಕಾರ ರೂಪಿಸಿರುವ ಈ ಯೋಜನೆ ನಿರುದ್ಯೋಗಿ ಯುವಜನರನ್ನು ಆಸ್ಪತ್ರೆಯ ನಿರ್ಮಾಣ, ಸಾರ್ವಜನಿಕ ತಂಗುದಾಣಗಳು, ರಸ್ತೆ, ಕಾಲುವೆ ನಿರ್ಮಾಣ ಮೊದಲಾದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸುವ ದಿಸೆಯಲ್ಲಿ ಇಡೀ ದೇಶಕ್ಕೆ ಮಾದರಿಯಾಗಬಲ್ಲುದು ಎಂದು 'ಇಂಡಿಯಾ ಟುಡೇ' ವರದಿಯೊಂದು ವಿಶ್ಲೇಷಿಸಿದೆ.

ಇಂಥ ಯೋಜನೆಯೊಂದರ ಯಶಸ್ವಿ ಜಾರಿಗೆ ಮಾರ್ಕ್ಸ್‌ವಾದಿಗಳ ಬಳಿ ಸಾಧನವಿರುವುದೇ ಕಾರಣ. ಗಾಂಧಿ ಜಯಂತಿ(ಅಕ್ಟೋಬರ್ 2)ರಂದು ಈ ಯೋಜನೆ ಕಾರ್ಯಾರಂಭಿಸಿದೆ. ಯೋಜನೆಗಾಗಿ ಹೊಸದಾಗಿ ರಚಿಸಲಾಗಿರುವ 'ಅಭಿವೃದ್ಧಿ ಪಡೆ'ಗ (ವಿಕಾಸನ ಸೇನಾ) ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಬೆನ್ನೆಲುಬಾಗಿದೆ. ವಿಕಾಸನ ಸೇನೆಗೆ 25ಕೋಟಿ ಮಾನವ ದಿನಗಳ ಕೊಡುಗೆ ನೀಡುವುದಾಗಿ ಡಿವೈಎಫ್ಐ ರಾಜ್ಯ ಘಟಕ ಭರವಸೆ ನೀಡಿದೆ. ಈಗಾಗಲೇ 15 ಲಕ್ಷ ಸದಸ್ಯರು ಯೋಜನೆಯಲ್ಲಿ ಭಾಗವಹಿಸುವುದಾಗಿ ಸಹಿ ಹಾಕಿದ್ದಾರೆ.

ಡಿ.ವೈ.ಎಫ್.ಐ. ಪ್ರೇರಣೆ

ಕೇರಳದ ಯೋಜನಾ ಮಂಡಳಿ ಈ ಯೋಜನೆಯನ್ನು ರೂಪಿಸಿದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವಿದೆ. ಮಂಡಳಿ ಯೋಜನೆ ರೂಪಿಸಿ ಸ್ವಯಂ ಸೇವೆಗೆ ಆಹ್ವಾನಿಸಿದ್ದಲ್ಲ. ಬದಲಾಗಿ, ಡಿವೈಎಫ್ಐ ತನ್ನ ಸೇವೆ ಒದಗಿಸುವುದಾಗಿ ಸ್ವಯಂ ಪ್ರೇರಣೆಯಿಂದ ತಿಳಿಸಿದ ಮೇಲಷ್ಟೇ ಈ ಯೋಜನೆ ರೂಪುಗೊಂಡಿತು. ಸ್ವಯಂ ಸೇವಾ ನೆಲೆಯಲ್ಲಿ ಅನೇಕ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸಿರುವ ಪರಂಪರೆ ಕೇರಳ ಡಿವೈಎಫ್ಐಗಿದೆ. ಉದಾಹರಣೆಗೆ, ಈ ವರ್ಷ ಫೆಬ್ರವರಿಯಲ್ಲಿ ರಾಜ್ಯದ 60 ಆಸ್ಪತ್ರೆಗಳಲ್ಲಿ ಹೆಚ್ಚುವರಿ ಸೌಲಭ್ಯಗಳನ್ನು ಒದಗಿಸುವಲ್ಲಿ ಶ್ರಮದಾನದ ಪ್ರಮುಖ ಕಾರಣವಾಯಿತು.

ಡಿವೈಎಫ್ಐ ಪ್ರೇರಣೆಯಿಂದ ಸರಕಾರ ದೇಶದಲ್ಲೇ ಅಪೂರ್ವವಾದ ಕಾರ್ಯಕ್ರಮ ರೂಪಿಸಿರುವ ಬಗ್ಗೆ ಕೆಲವರಲ್ಲಿ ಅಸೂಯೆ ಉಂಟಾಗಿದ್ದು ಅಪಪ್ರಚಾರ ನಡೆಸಲಾಗುತ್ತಿದೆ. ಇದು ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ)ಗೆ ಮತ ಗಳಿಸಿಕೊಡುವ ತಂತ್ರ ಎಂದೂ ಟೀಕಿಸಲಾಗುತ್ತಿದೆ. ಆದರೆ ಈ ಎಲ್ಲಾ ಟೀಕಾಕಾರರ ಬಾಯಿ ಮುಚ್ಚಿಸುವ ರೀತಿಯಲ್ಲಿ ಒಂದು ಕುತೂಹಲಕಾರಿ ಬೆಳವಣಿಗೆಯೂ ನಡೆದಿದೆ. ತನ್ನ ಕೆಲವು ಯುವಜನರನ್ನು ಕೂಡ ವಿಕಾಸನಾ ಸೇನಾದಲ್ಲಿ ತೊಡಗಿಸುವುದಾಗಿ ಬಿಜೆಪಿಯ ರಾಜ್ಯ ಘಟಕ ತಿಳಿಸಿದೆ. ಬಹುತೇಕ ಎಲ್ಲಾ ಪಕ್ಷಗಳು ಯೋಜನೆಗೆ ಸಹಕರಿಸುತ್ತಿವೆ. ಕಾಂಗ್ರೆಸ್(ಐ) ಮಾತ್ರ ಅದರಿಂದ ಹೊರಗೆ ಉಳಿದಿದೆ. 'ಕೈಲಾಗದವ ಮೈ ಪರಚಿಕೊಂಡ' ಎಂಬ ಗಾದೆಯನ್ನು ಅದು ನೆನಪಿಸುತ್ತಿದೆ.

ಕೇರಳದಲ್ಲಿ ಒಟ್ಟು ಸುಮಾರು 31 ಲಕ್ಷ ನಿರುದ್ಯೋಗಿಗಳಿದ್ದು ಅವರಲ್ಲಿ 19 ಲಕ್ಷ ವಿದ್ಯಾವಂತ ನಿರುದ್ಯೋಗಿಗಳು. ಈ ನಿರುದ್ಯೋಗಿ ಯುವಜನರ ಶಕ್ತಿಯನ್ನು ಬಳಸಿಕೊಳ್ಳುವುದೇ ಗುರಿಯಾಗಿದೆ. ಈಗಾಗಲೇ ಉದ್ಯೋಗಾವಕಾಶಗಳು ಕಡಿಮೆ. ಸ್ವಯಂ ಸೇವಾ ನೆಲೆಯಲ್ಲಿ ಕೆಲಸವಾದರೆ ಈ ಅವಕಾಶ ಇನ್ನಷ್ಟು ಕುಗ್ಗುತ್ತದೆ ಎಂಬ ಭೀತಿಯ ಅಲೆಯೊಂದು ತಲೆದೋರಿದೆ. ಅದನ್ನು ಮುಖ್ಯಮಂತ್ರಿ ಇ.ಕೆ.ನಯನಾರ್ ಹೀಗೆ ಪರಿಹರಿಸುತ್ತಾರೆ: ವಿಕಾಸನ ಸೇನಾ ಬಜೆಟೇತರ ಕಾರ್ಯಕ್ರಮಗಳನ್ನು ಮಾತ್ರ ಕೈಗೆತ್ತಿಕೊಳ್ಳುತ್ತದೆ. ಜನರೇ ಈ ಎಲ್ಲಾ ಯೋಜನೆಗಳ ಹಣ ಭರಿಸುತ್ತಾರೆ. ಅಲ್ಲದೆ ಆವ ಪ್ರದೇಶಗಳಲ್ಲಿ ಸ್ವಯಂ ಸೇವಕರ ಅವಶ್ಯಕತೆಯಿದೆ ಎಂಬುದ್ನು ಕೂಡ ಜನರೇ ನಿರ್ಧರಿಸುತ್ತಾರೆ.

ಆರ್‌ಎಸ್‌ಪಿ ಯಿಂದ ಜತೀನ್ ಚಕ್ರವರ್ತಿ ಅಮಾನತು

ಪಶ್ಚಿಮ ಬಂಗಾಳದ ಎಡರಂಗ ಸರಕಾರದಲ್ಲಿ ಹಿಂದೆ ಲೋಕೋಪಯೋಗಿ (ಪಿಡಬ್ಲ್ಯುಡಿ)ಸಚಿವರಾಗಿದ್ದ ಜತಿನ್. ಚಕ್ರವರ್ತಿಯವರನ್ನು ಕ್ರಾಂತಿಕಾರಿ ಸಮಾಜವಾದಿ ಪಕ್ಷ(ಆರ್‌ಎಸ್‌ಪಿ) ಅಮಾನತು ಮಾಡಿದೆ.

ಪಕ್ಷ ಮತ್ತು ಎಡರಂಗ ವಿರೋಧಿ 'ಚಟುವಟಿಕೆಗಳನ್ನು ನಡೆಸಿದ್ದಕ್ಕಾಗಿ ಪಕ್ಷದ ರಾಜ್ಯ ಘಟಕ ಅಕ್ಟೋಬರ್ 16 ರಂದು ಈ ಕ್ರಮ ಕೈಗೊಂಡಿದೆ. ಜತಿನ್ ಚಕ್ರವರ್ತಿ ಸ್ವತ: ತಾವು ಸಚಿವರಾಗಿರುವ ಎಡರಂಗ ಸರಕಾರ ಮತ್ತು ಮುಖ್ಯ ಮಂತ್ರಿ ಜ್ಯೋತಿ ಬಸು ಅವರ ವಿರುದ್ಧ ಆಪಾದನೆಗಳನ್ನು ಮಾಡುತ್ತಾ ಕಳಂಕ ಹಚ್ಚಲು ಪ್ರಯತ್ನಿಸುತ್ತಿದ್ದರು. ಪಶ್ಚಿಮ ಬಂಗಾಳದಲ್ಲಿ ಒಂದು ದಶಕದಿಂದ ಜನಪರ ಆಡಳಿತ ನೀಡುತ್ತಿದ್ದ ಎಡರಂಗ ಸರಕಾರದ ವಿರುದ್ಧ ಕತ್ತಿ ಮಸೆಯುತ್ತಿದ್ದ ಕಾಂಗ್ರೆಸ್(ಐ) ಮತ್ತಿತರ ಪಕ್ಷಗಳು ಹಾಗೂ ಬಂಡವಾಳಶಾಹಿ ಪತ್ರಿಕೆಗಳಿಗೆ ಜತಿನ್ ಚಕ್ರವರ್ತಿ 'ಆಹಾರ' ಒದಗಿಸುತ್ತಿದ್ದರು. ಅವರ ಇಂಥ ಚಟುವಟಿಕೆಗಳು ಅತಿಯಾಯಿತು ಎನ್ನುವ ಮಟ್ಟಕ್ಕೆ ತಲುಪಿತ್ತು. ಆಗ ಎಡರಂಗ ಸಮಿತಿ ಸಭೆ ಸೇರಿ ಜತಿನ್ ಸರಕಾರದಿಂದ ಹೊರಹೋಗಬೇಕೆಂದು ನಿರ್ಣಯಿಸಿತ್ತು. ಆರ್‌ಎಸ್‌ಪಿ ಕೂಡ ಅವರಿಂದ ಎಡರಂಗಕ್ಕಾಗುತ್ತಿರುವ ಹಾನಿಯನ್ನು ಅರಿತಿತ್ತು. ಈ ಹಿನ್ನೆಲೆಯಲ್ಲಿ ಜತಿನ್ ಚಕ್ರವರ್ತಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಮಿಜೋರಾಂ: ಕಾಂಗ್ರೆ ಸರಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ

ಮಿಜೋರಾಂನಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್(ಐ) ಸರಕಾರ ಭಾರಿ ಭ್ರಷ್ಟಾಚಾರದ ಆರೋಪವನ್ನು ಎದುರಿಸುತ್ತಿದೆ. ಪ್ರತಿಪಕ್ಷವಾದ ಮಿಜೋ ರಾಷ್ಟ್ರೀಯ ರಂಗ (ಎಂಎನ್‌ಎಫ್) ಆರೋಪ ಹೊರಿಸಿದೆ. 1989-90ನೇ ವರ್ಷಕ್ಕಾಗಿ ಮಂಜೂರಾದ 102 ಕೋಟಿ ರೂಪಾಯಿಗಳಲ್ಲಿ 89 ಕೋಟಿ ರೂ.ಗಳನ್ನು ಸರಕಾರ ಪೋಲು ಮಾಡಿದೆ ಎನ್ನುವುದು ಆರೋಪದ ತಿರುಳು.

ಮಧ್ಯಪ್ರದೇಶದಲ್ಲಿ ಪಂಚಾಯತ್ ಚುನಾವಣೆಗೆ ಸಿದ್ಧತೆ

ಮಧ್ಯ ಪ್ರದೇಶದ ಬಿಜೆಪಿ ಸರಕಾರ ಜನರಿಗಾಗಿ ಯಾವುದೇ ಮಹತ್ತರ ಕಾರ್ಯ ನಡೆಸದೆ ಕಾಲಹರಣ ಮಾಡುತ್ತಿದೆ. ಅನಾವಶ್ಯಕವಾಗಿ ನೌಕರರ ವರ್ಗಾವಣೆ, ಕೋಮುವಾದಿ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ಇವೇ ಮೊದಲಾದವು ಅದರ ಕೆಲಸವಾಗಿದೆ. ಈ ಸರಕಾರವೀಗ ಜನಪ್ರಿಯತೆ ಕಳೆದು ಕೊಳ್ಳುತ್ತಿದೆ. ಅದನ್ನು ಉಳಿಸಿಕೊಳ್ಳಲು ಅದು ಹೆಣಗಾಡುತ್ತಿದೆ.

ಡಿಸೆಂಬರ್ 12 ರಂದು ರಾಜ್ಯದಲ್ಲಿ ನಡೆಯಲಿರುವ ಪಂಚಾಯತ್ ಚುನಾವಣೆಗಳತ್ತ ಅದು ದೃಷ್ಟಿ ನೆಟ್ಟಿದೆ. ಮತದಾರರು 1,63,174 ಪಂಚರನ್ನು ಆಯ್ಕೆ ಮಾಡಲಿದ್ದಾರೆ. ರಾಜಕೀಯ ಪಕ್ಷ ಆಧಾರದಲ್ಲಿ ರಾಜ್ಯದಲ್ಲಿ ಪಂಚಾಯತ್ ಚುನಾವಣೆ ನಡೆಯಲಿರುವುದು ಇದು ಮೊದಲ ಬಾರಿಯಾಗಿದೆ.

ಹೇಳಿಕೊಳ್ಳುವ ಸಾಧನೆ ಏನೂ ಇಲ್ಲದಿದ್ದರಿಂದ ಸುಂದರಲಾಲ್ ಪಟ್ವಾ ಸರಕಾರ ಮಾಮೂಲಿನಂತೆ ಕೋಮುವಾದಕ್ಕೆ ನಮೋ ನಮ: ಎನ್ನುತ್ತಿದೆ. ಬಿಜೆಪಿ ಅಧ್ಯಕ್ಷ ಎಲ್.ಕೆ. ಅದ್ವಾಣಿ ರಾಜ್ಯದಲ್ಲಿ ತಮ್ಮ ರಥಯಾತ್ರೆಅಂಗವಾಗಿ ಇತ್ತೀಚೆಗೆ ಬಂದಿದ್ದಾಗ ಮುಂದಿನ ಪಂಚಾಯತ್ ಚುನಾವಣೆಗಳಲ್ಲಿ 'ಹಿಂದೂ ಮತ' ಗಿಟ್ಟಿಸಿಕೊಳ್ಳಲು ಪ್ರಯತ್ನ ನಡೆಸಿದರು.

ಅಧಿಕಾರ ವಿಕೇಂದ್ರೀಕರಣ ತೀರಾ ಕೆಳಸ್ತರದ ಪ್ರಕ್ರಿಯೆಯ ಫಲಿತಾಂಶವನ್ನು ಕುತೂಹಲದಿಂದ ನಿರೀಕ್ಷಿಸುವಂತಾಗಿದೆ.

ವಜಾ ಆದ ರೈಲ್ವೆ ಕಾರ್ಮಿಕರು: ಇನ್ನೂ ನ್ಯಾಯ ...ಕಿಲ್ಲ?

ರಾಷ್ಟ್ರೀಯ ರಂಗ ಸರಕಾರ ಅಧಿಕಾರಕ್ಕೆ ಬಂದು 10 ತಿಂಗಳಾದರೂ ರೈಲ್ವೆ ಮಂತ್ರಿಗಳು ಹಲವು ಬಾರಿ ಆಶ್ವಾಸನೆ ನೀಡಿದ್ದರೂ ಹಿಂದಿನ ಕಾಂಗ್ರೆ ಆಡಳಿತದಲ್ಲಿ ನ್ಯಾಯಬಾಹಿರವಾಗಿ ವಜಾ ಆದ ಸುಮಾರು 536 ರೈಲ್ವೆ ಕಾರ್ಮಿಕರನ್ನು ಇನ್ನೂ ಕೆಲಸಕ್ಕೆ ತೆಗೆದುಕೊಳ್ಳದಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ತೀವ್ರ ಖೇದ ವ್ಯಕ್ತ ಪಡಿಸಿದೆ. ಇದು ತಾನು ಪ್ರಜಾಪ್ರಭುತ್ವ ವಿಧಾನಗಳಿಗೆ ಬದ್ಧ ಎಂಬ ರಾಷ್ಟ್ರೀಯರಂಗದ ವಚನಗಳಿಗೆ ವಿರುದ್ಧವಾಗಿದೆ ಎಂದು ಅದು ಅಭಿಪ್ರಾಯಪಟ್ಟಿದೆ.

ಈ ಕಾರ್ಮಿಕರನ್ನು ವಿಚಾರಣೆಯಿಲ್ಲದೆ ವಜಾ ಮಾಡಲಾಗಿತ್ತು, ಕೇಂದ್ರೀಯ ಆಡಳಿತ ಟ್ರಿಬ್ಯುನಲ್ ಹಿಂದೆ ಕೆಲವರನ್ನು ಕೆಲಸಕ್ಕೆ ಮತ್ತೆ ತೆಗೆದು ಕೊಳ್ಳಲು ಆಜ್ಞೆ ನೀಡಿ ಉಳಿದವರ ಬಗ್ಗೆ ವಿಚಾರಣೆ ನಡೆಸಲು ಅಥವಾ ನೇರವಾಗಿ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ರೈಲ್ವೇ ಆಡಳಿತ ಈ ಆಜ್ಞೆಯನ್ನು ಪಾಲಿಸುವ ಬದಲು ಸುಪ್ರೀಂ ಕೋರ್ಟಿಗೆ ಮನವಿ ಮಾಡಲು ನಿರ್ಧರಿಸಿದೆ ಎಂಬುದು ಕಾರ್ಮಿಕವಿರೋಧಿ ನೀತಿ ಎಂದಿರುವ ಪಿಬಿ ಅಧಿಕಾರ ಶಾಹಿ ವಿಧಾನ ಕಾರ್ಮಿಕರಿಗೆ ನ್ಯಾಯ ನೀಡಬಾರದು, ಈಗ ಬೇಕಿರುವುದು ಒಂದು ತುರ್ತು ರಾಜಕೀಯ ನಿರ್ಧಾರ ಎಂದು ಹೇಳುತ್ತಾ ಈ ವಿಷಯದಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ರಾಷ್ಟ್ರೀಯ ರಂಗ ಸರಕಾರವನ್ನು ರೈಲ್ವೆ ಮಂತ್ರಿಗಳನ್ನು ಒತ್ತಾಯಿಸಿದೆ.

ಬಿಜಾಪುರ ವಾರ್ತಾ ಪತ್ರ

ಅಪಾಯಕಾರಿ ವಿಚಾರಧಾರೆಗಳು—ತುರ್ತು ಪ್ರತಿರೋಧದ ಅವಶ್ಯಕತೆ

ಎನ್.ಕೆ. ಉಪಾಧ್ಯಾಯ

ಕೋಲಾರ ಜಿಲ್ಲೆಯಲ್ಲಿ ನಡೆದ ಇತ್ತೀಚಿನ ಮತೀಯ ಗಲಭೆಗಳ ಕುರಿತು ಅಭ್ಯಾಸ ಮಾಡಿದ ನಮ್ಮ ಸಂಗಾತಿಗಳು ಈ ಗಲಭೆಗ ಬೇಕಾದ ತಯಾರಿ ಹೋದ ವರ್ಷ ರಾಮ ದೇಗುಲದ ಶಿಲಾನ್ಯಾಸಕ್ಕಾಗಿ ಇಟ್ಟಿಗೆಯ ಮೆರವಣಿಗೆ ನಡೆಸಿದ ಕಾಲದಿಂದಲೂ ನಡೆದಿದೆ ಎಂಬ ಅಂಶವನ್ನು ಒತ್ತಿ ಹೇಳಿದ್ದಾರೆ. ಆರೋಗ್ಯ ದೃಷ್ಟಿಯಿಂದ ಒಂದು ವಾರ ಕಾಲ ನಾನು ಬಿಜಾಪುರದಲ್ಲಿದ್ದಾಗ ಉಚ್ಚ ಶಿಕ್ಷಣ ಪಡೆದವರಿಂದ ಹಿಡಿದು ನಿರಕ್ಷರಕುಕ್ಷಿಯವರ ಹಾಗೆಯೇ ಮೇಲ್-ವರ್ಗದ ಅಧಿಕಾರಿ, ಶಿಕ್ಷಕರಿಂದ ಹಿಡಿದು ಕೂಲಿ ನಾಲಿ ಜೀವನ ನಡೆಸುವವರ ಜೊತೆಯಲ್ಲಿ ರಾಮ ಜನ್ಮ ಭೂಮಿ-ಬಾಬ್ರಿ ಮಸೀದಿ ಸಮಸ್ಯೆ ವೀರೇಂದರ ಪಾಟೀಲರ ಸರಕಾರದ ಪತನ ಜಿಲ್ಲೆಯಲ್ಲಿ ಮಳೆಯ ಅಭಾವದಿಂದಾಗಿ ಉಂಟಾದ ಪರಿಸ್ಥಿತಿಗಳ ಕುರಿತು ವಿಚಾರ ವಿನಿಮಯ ಮಾಡಿದೆ.

ಅಯೋಧ್ಯೆಯಲ್ಲಿ ರಾಮ ದೇವಸ್ಥಾನ ಕಟ್ಟುವ ಕುರಿತು ಎದ್ದಿರುವ ಗಂಭೀರ ಪ್ರಶ್ನೆ ಕುರಿತು ಜನರ ಅಭಿಪ್ರಾಯ ಕೇಳಿ ನನಗೆ ವಿಗ್ರಮೆಯಾಯಿತು. ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆಗಳಿಂದ ತತ್ತರಿಸುತ್ತಿರುವ ಸಮಾಜದ ಕೆಳಸ್ತರದ ಜನ ರಾಮ-ಜನ್ಮ ಭೂಮಿ-ಬಾಬ್ರಿ ಮಸೀದಿ ಕುರಿತಾಗಲಿ, ಅದ್ವಾಣಿಯವರ ರಥಯಾತ್ರೆಯ ಕುರಿತಾಗಲಿ ತಲೆಕೆಡಿಸಿಕೊಂಡಂತೆ ಕಂಡುಬರಲಿಲ್ಲ. "ಅದೆಲ್ಲ ದೊಡ್ಡವರ ಸಮಸ್ಯೆ ಉಪಾಧ್ಯಾಯರೇ, ನಾವು ದುಡಿದು ಬದುಕುವುದೇ ಕಷ್ಟಕರವಾಗಿರುವಾಗ ರಾಮ ಜನ್ಮ ಭೂಮಿ ಕಟ್ಟಿಕೊಂಡು ಏನು ಮಾಡಲಿ ಸ್ವಾಮಿ. ನಮ್ಮ ದೇವರು "ಇಲ್ಲೇ ಕಟ್ಟೆಯ ಮೇಲಿದ್ದಾನೆ. ನಾವ್ಯಾಕೆ ಅಯೋಧ್ಯೆಗೆ ಹೋಗೋಣ" ಎಂಬ ಉದ್ಗಾರ ಹಲವರ ಬಾಯಿಗಳಲ್ಲಿ ಹೊರಟವು. ಅಭಿಪ್ರಾಯ ಮೂಡಿಸುವ ಜನ, ನಿಚ್ಚಳ ಸ್ವಭಾವದ ಬಡಜನರನ್ನು ತಮ್ಮ ಉದ್ದೇಶ ಸಾಧನವನ್ನಾಗಿ ದುರುಪಯೋಗಪಡಿಸಿಕೊಳ್ಳುವ ಜನ 'ನೀವೆಲ್ಲ ಕಮ್ಯುನಿಸ್ಟರು ಮುಸಲ್ಮಾನರನ್ನು ಎತ್ತಿ ಹಿಡಿಯುತ್ತೀರಿ. ರಾಮ ಹುಟ್ಟಿದ ಜಾಗದಲ್ಲಿ ಗುಡಿ ಕಟ್ಟಿದರೆ ತಪ್ಪೇನಿದೆ. ಅಲ್ಲಿ ಪೂಜೆ ನಡೆಯುತ್ತಿದೆ. ಆ ಪಾಳು ಬಿದ್ದ ಗುಡಿಯನ್ನು ಜೀರ್ಣೋದ್ಧಾರ ಮಾಡಿದರೆ ತಪ್ಪೇನು? ಎಂಬ ತಪ್ಪು ತಿಳುವಳಿಕೆ ಹೊಂದಿದ್ದು ರಾಮ ಜನ್ಮ ಭೂಮಿಯಲ್ಲಿ ದೇವಸ್ಥಾನ ನಿರ್ಮಿಸುವ ಕಾಯಕ್ರಮ ಕ್ರಮಬದ್ಧವೆಂದು ತಮ್ಮ ಎಲ್ಲ ಬುದ್ಧಿವಂತಿಕೆ, ಶ್ರಮಗಳನ್ನು ಉಪಯೋಗಿಸಿ ತಮ್ಮ ವಿಚಾರ ಧಾರೆಯನ್ನು ಪ್ರತಿಪಾದಿಸುವುದನ್ನು ನೋಡಿ ನನ್ನ ಮನಸ್ಸಿಗೆ ಆಘಾತವಾಯಿತು. ಕೆಲವು ಸುಶಿಕ್ಷಿತರು ಕಮ್ಯುನಿಸ್ಟ್ ಪಕ್ಷದ ಕುರಿತು ಅಭಿಮಾನ ಹೊಂದಿದ್ದರೂ ಕೂಡ ರಾಜಜನ್ಮ ಭೂಮಿ ಸಮಸ್ಯೆ ಬಂದಾಗ ಎಲ್ಲ ಸಿದ್ಧಾಂತಗಳನ್ನು ಬದಿಗೊತ್ತಿ ಹಿಂದುತ್ವದತ್ತ ವಾಲುತ್ತಿರುವುದು ಅಪಾಯಕಾರಿಯೆಂದು ಕಂಡುಕೊಂಡೆ. ಶಹಾಬಾನು ಪ್ರಕರಣ, ಎಲ್ಲರಿಗೂ ಒಂದೇ ಸಿವಿಲ್ ಕೋಡಿಗೆ ವಿರೋಧ, ಕುಟುಂಬ ಯೋಜನೆಗೆ ವಿರೋಧ-ಇವುಗಳನ್ನು ಆರ್‌ಎಸ್‌ಎಸ್, ಬಿಜೆಪಿ ಮತ್ತಿತರ ಕಟ್ಟಾ ಹಿಂದೂ ಪಂಥವಾದಿಗಳು ಜನರ ಮಧ್ಯ ಪರಿಣಾಮಕಾರಿಯಾಗಿ ಪ್ರಚಾರ ನಡೆಸುರುವಂತೆ ಕಂಡುಬರುತ್ತಿತ್ತು. ಸರ್ವಸಾಧಾರಣವಾಗಿ ಹೆಚ್ಚಿನವರೆಲ್ಲ ಮುಸಲ್ಮಾನರಿಗೆ ವಿರೋಧ ವ್ಯಕ್ತಮಾಡುತ್ತಾ, ಹಿಂದುತ್ವವನ್ನು ಉಳಿಸಿಕೊಳ್ಳುವ ಅಗತ್ಯದ ಕುರಿತು ಪ್ರಚಾರ ನಡೆಸಿರುವಂತೆ ಕಂಡುಬರುತ್ತದೆ. ಇದಕ್ಕೆಲ್ಲಾ ಪತ್ರಿಕಾ ಮಾಧ್ಯಮ, ಸ್ವಾಮಿಜಿಗಳ ಪಾತ್ರ ಹೆಚ್ಚು ಕೆಲಸ ನಡೆಸುತ್ತಿರುವಂತೆ ಕಾಣುತ್ತದೆ.

ಈಗಿನ ಸಮಾಜದ ವ್ಯವಸ್ಥೆಯಲ್ಲಿ ಸುಶಿಕ್ಷಿತರ ಅಭಿಪ್ರಾಯ ಹೆಚ್ಚು ಪರಿಣಾಮ ಬೀರುತ್ತದೆ. ಆದ್ದರಿಂದ ರಾಮ-ಜನ್ಮ ಭೂಮಿ ಸಮಸ್ಯೆಯ ಕುರಿತು ಅವರ ಅಭಿಪ್ರಾಯ. ಅಪಾಯಕಾರಿಯ ನಿರಪರಾಧಿ ಜನರ ವಿಚಾರಗಳನ್ನು ಕಲುಷಿತಗೊಳಿಸುವಂತದ್ದು. ಆದ್ದರಿಂದ ಇಂಥ ವಿಚಾರಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ವ್ಯವಸ್ಥೆ ಕೂಡಲೇ ಕಾರ್ಯೋನ್ಮುಖರಾಗಬೇಕಾಗಿದೆ. ದೇವರು ಮತ್ತು ಜಾತಿ ಸುಲಭವಾಗಿಯೇ ನುಂಗಬಹುದಾದ ಪ್ರಕ್ಯಟಿಯಾಗಿಯೇ ಕೊಂಡುಕೊಳ್ಳಬಹುದಾದ ಗುಳಿಗೆ(-ಔಷಧಿ) ಆಗಿರುವುದರಿಂದ ಮುಸಲ್ಮಾನರ ವಿರುದ್ಧ ಪರ ಪ್ರಚಾರಕ್ಕೆ ಬಹಳ ಅನುಕೂಲಕರವಾಗಿದೆ.

ಇಂಥ ಗಂಡಾಂತರಕಾರಿ ತಿಳುವಳಿಕೆ ಪ್ರಚಾರಗಳನ್ನು ಎದುರಿಸಲು ಜಾತೀ. ಸೌಹಾರ್ದತೆ, ಧರ್ಮಗಳ ಸಹನೆಯ ಕುರಿತು ಜನರ ಮಧ್ಯೆ ತುರ್ತಾಗಿ ಪ್ರಚಾರ ಪ್ರಕ್ರಿಯೆ ಕೈಗೊಳ್ಳುವ ಜವಾಬ್ದಾರಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳದಾಗಿದೆ. ಆ ಚರಿತ್ರಾರ್ಹ ಕರ್ತವ್ಯ ಪೂರೈಸಲು ತುರ್ತು ಕಾಯಕ್ರಮ ರೂಪಿಸುವುದು ಅತ್ಯಗತ್ಯ.

ರಾಮ ಜನ್ಮ ಭೂಮಿ, ಹಿಂದುತ್ವದ ಪರ ಅಭಿಪ್ರಾಯ ಹೊಂದಿದವರಾಗಿದ್ದರೂ, ಹೆಚ್ಚಿನವರು ಆರ್.ಎಸ್.ಎಸ್. ಬಿಜೆಪಿ, ವಿಶ್ವ ಹಿಂದೂ ಪರಿಷತ್‌ಗಳ ಜೊತೆ ಹೋಗಲು ಹಿಂಜರಿಯುತ್ತಿರವುದು, ಮತೀಯ ಸೌಹಾರ್ದತೆಯ ಅಗತ್ಯ ವೆಂಬ ನಿಲುವು ತಾಳಿರುವುದು, ಚುನಾವಣೆಯಲ್ಲಿ ಬಿಜೆಪಿಗೆ ಮತ ನೀಡಲಾರೆವೆಂಬ ತಿಳುವಳಿಕೆ ಹೊಂದಿರುವುದು ಸಮಾಧಾನದ ಸಂಗತಿಯಾಗಿದೆ. ಅಯೋಧ್ಯೆಯಲ್ಲಿ ರಾಮ ದೇಗುಲ ನಿರ್ಮಾಣವಾಗಬೇಕೆಂದು ವಾದಿಸುವವರೆಲ್ಲ ಹಿಂದೂ ವಾದಿಗಳಲ್ಲ. ಅವರನ್ನೆಲ್ಲಾ ಸರಿಯಾದ ರಾಷ್ಟ್ರೀಯ ಪ್ರವಾಹದತ್ತ ಕೆಲಸವನ್ನು ನಾವು ಮಾಡಬೇಕಾಗಿದೆ.

ಬರಗಾಲ-ರೈತರ ಗೋಳು

ಮೇ-ಜೂನ್ ತಿಂಗಳಲ್ಲಾದ ಮಳೆಯನ್ನವಲಂಬಿಸಿ ರೈತರು ಮುಂಗಾರು ಬಿತ್ತನೆ ಮುಗಿಸಿದ ನಂತರ ಸರಿಯಾಗಿ ಮಳೆ ಆಗಿರದೆ ಅರ್ಧಕ್ಕಿಂತಲೂ ಹೆಚ್ಚಿನ ಪ್ರದೇಶಗಳಲ್ಲಿ ಬೆಳೆ ಒಣಗಿದೆ. ಉತ್ತರ- ಹಸ್ತ ಮಳೆಯೂ ಕೈ ಕೊಟ್ಟದ್ದರಿಂದ ಹಿಂಗಾರು ಬಿತ್ತುವ ಕೆಲಸವೂ ಸ್ಥಗಿತಗೊಂಡಿದೆ. ಆಹಾರ ಧಾನ್ಯದ ಬೆಲೆಯ ಮೇಲೆ ಇದರ ಪರಿಣಾಮವಾಗಿದೆ. ಹೋದ ತಿಂಗಳು ಒಂದು ಕ್ವಿಂಟಾಲ್ ಜೋಳದ ಬೆಲೆ ರೂ. 180 ರಿಂದ 200 ಇತ್ತು. ಈಗ ಅದರ ಬೆಲೆ ರೂ.250 ಕ್ಕಿಂತಲೂ ಹೆಚ್ಚಾಗುತ್ತಿದೆ. ಗೋಧಿಯ ಬೆಲೆ 450ರಷ್ಟಿದೆ. ಬೆಲೆಯ ಏರುಪೇರಿನಿಂದಾಗಿ ಹತ್ತಿ, ಸೂರ್ಯಕಾಂತಿ ಮತ್ತಿನ್ನಿತರ ಆಹಾರ ಧಾನ್ಯಗಳನ್ನು ಬೆಳೆದವರಿಗೆ ಹಾನಿಯಾಗಿದೆ. ಬಡ ಮತ್ತು ಮಧ್ಯಮ ರೈತರು ತಮ್ಮ ಅಡಚಣೆಗಾಗಿ ಮಾರ್ಚ್ ತಿಂಗಳಲ್ಲಿ ರಾಶಿಯಾದ ಕೂಡಲೇ ಸೂರ್ಯಕಾಂತಿಯನ್ನು ಮಾರಿದಾಗ ಅದರ ಬೆಲೆ ರೂ.800 ಇತ್ತು. ಈಗ ದರ ಬೆಲೆ ರೂ 1300 ರಷ್ಟಾಗಿದೆ. ಹತ್ತಿ, ಗೋಧಿ, ಜೋಳದ ಬೆಲೆ ಕೂಡ ಹಾಗಯೇ. ಹೀಗಾಗಿ ಹೆಚ್ಚಿನ ರೈತರಲ್ಲದ ಶ್ರೀಮಂತ ರೈತರು ಮಳೆಯ ಅಳೆಯ ಅಬಾವದ ಲಾಭ ಪಡೆದು ಹೆಚ್ಚು ಹಣ ಸಂಪಾದಿಸುವಂತಾಗಿದೆ. ಮಳೆಯ ಅಭಾವದಿಂದುಂಟಾಗುವ ಬೆಲೆ ಹೆಚ್ಚಳ ರೈತನನ್ನು ಪೇಟೆಯಲ್ಲಿರುವವರನ್ನು ಕಾಡುತ್ತಿದೆ. ಬೆಲೆ ಹೆಚ್ಚಳಕ್ಕೆ ರಾಜ್ಯ ಮತ್ತು ಕೇಂದ್ರ ಸರಕಾರದ ಆರ್ಥಿಕನೀತಿಯೂ ಸಹಾಯ ಮಾಡುತ್ತಿದೆ.

ವೀರೇಂದ್ರ ಪಾಟೀಲರ ಸರಕಾರದ ವಿಸರ್ಜನೆ

ವೀರೇಂದ್ರ ಪಾಟೀಲರ ಸರಕಾರದ ವಿಸರ್ಜನೆಯ ಕುರಿತು ಮಿಶ್ರ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಅನಾರೋಗ್ಯದಲ್ಲಿರುವ ಮುಖ್ಯಮಂತ್ರಿಯವರನ್ನು ಕಿತ್ತು ಹಾಕಿದ್ದು ... ಅಭಿಪ್ರಾಯ ಹೆಚ್ಚಿನವರು ವ್ಯಕ್ತ ಮಾಡಿದರೂ ಕೂಡ, ಜಾತೀಯ ಗಲಭೆ ಯನ್ನು ಹಿಡಿತದಲ್ಲಿ ತರುವಲ್ಲಿ ಸರಕಾರದ ವೈಫಲ್ಯ ವೀರೇಂದ್ರರನ್ನು ಅಧಿಕಾರದಿಂದ ತೆಗೆದಿರುವುದಕ್ಕೆ ಬೆಂಬಲ ನೀಡಿದೆ. ವೀರೇಂದ್ರ ಪಾಟೀಲರಿಗೆ ಅಸ್ಸೆಂಬ್ಲಿಯಲ್ಲಿ ಬಹುಮತ ತೋರಿಸಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು ಎಂದು ಹೇಳುವವರೂ ಕೆಲವರು. ಕಾಂಗ್ರೆಸ 1 1 ಶಾಸಕರ ಪೈಕಿ 4 ಶಾಸಕರು ಮಾತ್ರ ವೀರೇಂದ್ರ ಪಾಟೀಲರಿಗೆ ಬೆಂಬಲ ತೋರಿಸಿದ್ದರು. ಆದರೆ ಆಗ ಬಂಗಾರಪ್ಪ ಮುಖ್ಯಮಂತ್ರಿಯಾದ ನಂತರ ಅವರು ತಮ್ಮ ನಿಷ್ಠೆ ಬದಲಾಯಿಸಿದ್ದಾರೆ. ತಮಗೆ ಬಂಗಾರಪ್ಪನ ಮುಖಂಡತ್ವ ಕುರಿತು ಅಸಮಧಾನವಿದ್ದರೂ ಕೂಡ, ಹೈಕಮಾಂಡನ್ನು ಎದುರು ಹಾಕಿಕೊಳ್ಳುವ ಧೈರ್ಯ ಯಾರಿಗೂ ಇಲ್ಲವಾಗಿದೆ. ಬಂಗಾರಪ್ಪನವರು ಒಳ್ಳೆ ಆಡಳಿತ ನೀಡಬಹುದೆಂಬ ಅಭಿಪ್ರಾಯ ಹೆಚ್ಚಿನವರಲ್ಲಿದ್ದರೆ, ಲಿಂಗಾಯಿತ-ಒಕ್ಕಲಿಗ ಭೂಮಾಲಿಕ ಲಾಬಿ ಹಾಗೆಯೇ ಹೈಕಮಾಂಡಿಗೆ 'ಜಿ ಹುಜೂರ್' ಎಂದು ಸಲಾಮ್ ಹೊಡೆಯುವ ಪ್ರವೃತ್ತಿಯನ್ನು ಬಂಗಾರಪ್ಪ ಅನುಸರಿಸದಿದ್ದರೆ ವೀರೇಂದ್ರ ಪಾಟೀಲರ ದಾರಿ ಹಿಡಿಯಬೇಕಾದೀತು ಎಂಬ ಉದ್ಗಾರಗಳೂ ಕೇಳಿ ಬರುತ್ತಿವೆ.

ದೇಶದಲ್ಲಿ ರಾಜ್ಯದಲ್ಲಿ ಇಷ್ಟೆಲ್ಲಾ ಮಹತ್ವದ ಸ್ಥಿತ್ಯಂತರಗಳು ನಡೆಯುತ್ತಿದ್ದರೂ ಕೂಡ ಜಿಲ್ಲೆಯ ಜನ ಸಾಮಾನ್ಯರು ರೈತರೆಲ್ಲ ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಾರಂಭವಾಗದಿರುವುದಕ್ಕೆ ಮಳೆಯ ಅಭಾವದಿಂದಾಗಿ ಇದ್ದ ಬೆಳೆ ಒಣಗಿ, ಹಿಂಗಾರಿ ಬಿತ್ತನೆಯ ಕೆಲಸ ಆಗದಿರುವುದಕ್ಕೆ, ಬೆಲೆ ಹೆಚ್ಚಳಕ್ಕೆ ಹೆಚ್ಚು ಗಮನ ಹರಿಸುತ್ತಿರುವುದು ಕಂಡುಬರುತ್ತದೆ.

ಗ್ರಾಮಾಂತರ ಪ್ರದೇಶದಲ್ಲಿ ರಾಜ್ಯ ರೈತ ಸಂಘದ ಚಟುವಟಿಕೆಗಳು ಬೆಳೆಯುತ್ತಿದ್ದು ಪ್ರಾಂತ ರೈತ ಸಂಘದವರ ಜೊತೆಯಲ್ಲಿ ತೀವ್ರ ಪೈಪೋಟಿಗಿಳಿದಿರುವುದು, ಕೆಲವು ಗ್ರಾಮಗಳಲ್ಲಿ ನೇರ ಸ್ಪರ್ಧೆ ನಡೆಯುತ್ತಿರುವುದು...

ಗೋರ್ಬಚೇವ್ ಯೋಜನೆ ಅಂಗೀಕೃತ

ಸೋವಿಯತ್ ಒಕ್ಕೂಟದಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಹಂತಹಂತವಾಗಿ ಜಾರಿಗೆ ತರುವ ಗೋರ್ಬಚೇವ್ ಯೋಜನೆಯನ್ನು ಸೋವಿಯತ್ ಪಾರ್ಲಿಮೆಂಟ್ ಭಾರಿ ಬಹುಮತದಿಂದ ಅಂಗೀಕರಿಸಿತು. 356 ಸದಸ್ಯರು ಅದರ ಪರವಾಗಿ ಮತ ನೀಡಿದರೆ, 12 ವಿರುದ್ಧ ಮತಗಳು ಬಿದ್ದವು. 26 ಸದಸ್ಯರು ಮತದಾನದಲ್ಲಿ ಭಾಗವಹಿಸಲಿಲ್ಲ. ಕಳೆದ ಬಾರಿ ಪಾರ್ಲಿಮೆಂಟಿನ ಮುಂದೆ ಹಲವು ಮಾರುಕಟ್ಟೆ ಯೋಜನೆಗಳನ್ನು ಮಂಡಿಸಲಾಗಿತ್ತು. ಇದರಲ್ಲಿ ಪ್ರಮುಖವಾದ ಪ್ರಧಾನ ಮಂತ್ರಿ ರಿಝ್‌ಕೋವ್ ಮತ್ತು ಆರ್ಥಿಕ ತಜ್ಞ ಶಾಟಲಿನ್‌ರ ಯೋಜನೆಗಳನ್ನು ಪಾರ್ಲಿಮೆಂಟ್ ಚರ್ಚಿಸಿ, ಇದರ ಅಂಶಗಳನ್ನೊಳಗೊಂಡ ಒಂದು ಸಮಗ್ರ ಯೋಜನೆಯನ್ನು ತಯಾರಿಸಿ ಮಂಡಿಸಲು ಅಧ್ಯಕ್ಷ ಗೋರ್ಬಚೇವ್‌ರಿಗೆ ಆದೇಶ ನೀಡಿತ್ತು. ಇದರ ಫಲವಾಗಿ ಈಗಿನ ಗೋರ್ಬಚೇವ್ ಯೋಜನೆ.

ಎರಡು ಹಂತದ 66 ಪುಟಗಳ ಯೋಜನೆಯನ್ನು ಗೋರ್ಬಚೇವ್ ಮಂಡಿಸುತ್ತಾ ಮಾರುಕಟ್ಟೆ ಆರ್ಥಿಕತೆಗೆ ಹೋಗುವ ಪ್ರಕ್ರಿಯೆಯನ್ನು ಇನ್ನೂ ಮುಂದಕ್ಕೆ ಹಾಕುವುದು ಅಪಾಯಕರ ಎಂದರು.

ಈ ಯೋಜನೆಯ ಪ್ರಕಾರ ಮೊದಲನೆಯ ಹಂತದಲ್ಲಿ ಬಜೆಟ್ ಕೊರತೆ ಮತ್ತು ಹಣದ ಪೂರೈಕೆಯನ್ನು ಕಡಿತಗೊಳಿಸುವುದು ಮತ್ತು ಬಳಕೆ ಮತ್ತು, ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುವುದು ಸೇರಿದೆ. ಎರಡನೆಯ ಹಂತದಲ್ಲಿ ಶೇಕಡಾ 70 ಭಾಗ ಸರಕು ಮತ್ತು ಸೇವೆಗಳ ಬೆಲೆ ಮಾರುಕಟ್ಟೆಯ ಪ್ರಕ್ರಿಯೆಗೆ ಬಿಡಲಾಗುತ್ತದೆ. ಸಣ್ಣ ಖಾಸಗಿ ವ್ಯಾಪಾರಕ್ಕೆ ಉತ್ತೇಜನ ಕೊಡಲಾಗುತ್ತದೆ ಎನ್ನಲಾಗಿದೆ.

ರಶಿಯನ್ ಫೆಡರೇಷನ್ ಅಧ್ಯಕ್ಷ ಬೋರಿಸ್ ಯೆಲ್ಟ್‌ಸಿನ್ ಈ ಯೋಜನೆಗಳನ್ನು ಟೀಕಿಸುತ್ತಾ 'ಈ ಕಲಸುಮೇಲೋಗರ ಯೋಜನೆ' ಕೆಲವೇ ತಿಂಗಳಲ್ಲಿ ವಿಫಲವಾಗುವುದು ಎಂದು ಟೀಕಿಸಿದರು. ಮಾರುಕಟ್ಟೆ ಆರ್ಥಿಕತೆಯತ್ತ ಹೋಗುವ ಸಂಕ್ರಮಣ ಕಾಲದ ಸಂಕಷ್ಟಗಳನ್ನು ಎದುರಿಸುವ ಜವಾಬ್ದಾರಿಯಿಂದ ಯೆಲ್ಟ್‌ಸಿನ್ ಓಡಿಹೋಗುತ್ತಿದ್ದಾರೆ ಎಂದು ಗೋರ್ಬಚೇವ್ ಯೆಲ್ಟ್‌ಸಿನ್‌ರಿಗೆ ಉತ್ತರ ನೀಡಿದ್ದಾರೆ. ಯೆಲ್ಟ್‌ಸಿನ್ ಅವರೇ ಮಾಂಸದ ಬೆಲೆಯನ್ನು ರಶ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಏರಿಸಿದ್ದಾರೆ ಮತ್ತು ಇದು ಹಣದುಬ್ಬರಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ಅವರಿಗೆ ನೆನಪಿಸಿದರು. ರಶ್ಯದ ಸರಕಾರ ಎಲ್ಲಾ ಕಷ್ಟಗಳನ್ನು ಕೇಂದ್ರ ಸರಕಾರಕ್ಕೆ ತಳ್ಳುವ ಧೋರಣೆ ತೋರುತ್ತಿದೆ ಎಂದು ಟೀಕಿಸಿದರು.

ಸಂಪೂರ್ಣ ಕೇಂದ್ರೀಕೃತ ಯೋಜಿತ ವ್ಯವಸ್ಥೆಯಿಂದ, ಮಾರುಕಟ್ಟೆ ವ್ಯವಸ್ಥೆಯತ್ತ ಹೋಗುವುದು ಸಮಾಜವಾದದಿಂದ ಹಿನ್ನಡೆ ಎಂಬುದು ತಪ್ಪು ಎಂದು ಇಂತಹ ಟೀಕೆಗೆ ಉತ್ತರಿಸಿದ್ದಾರೆ.

'ಮಾರುಕಟ್ಟೆ ಬಂಡವಾಳಶಾಹಿ ಅವಿಷ್ಕಾರವಲ್ಲ. ಮಾರುಕಟ್ಟೆಗೆ ನಾವು ಹೋಗುತ್ತಿರುವುದು ಕೆಲವರು ಸಮಾಜವಾದದಿಂದ ಹಿನ್ನಡೆ, ಬಂಡವಾಳಶಾಹಿ ಆರ್ಥಿಕತೆ ಮತ್ತು ವ್ಯವಸ್ಥೆಯತ್ತ ಎಂದು ಬಹಳ ಜನ ನಂಬುತ್ತಾರೆ. ಇದು ಸರಿಯಲ್ಲ. ಮಾರುಕಟ್ಟೆ ಪ್ರಾಚೀನ ರೋಮ್‌ನಲ್ಲಿ ಇತ್ತು. ಪಿರಾಮಿಡ್ಡುಗಳನ್ನು ನಿರ್ಮಿಸಿದ, ಸರಕುಗಳನ್ನು ಕುಲಾಂತರ ಸಾಗಿಸುವ ಮತ್ತು ಈ ರೀತಿಯಲ್ಲಿ ಒಂದು ಪ್ರದೇಶದ ಮತ್ತು ವ್ಯಕ್ತಿಗಳ ಎಲ್ಲಾ ಅವಶ್ಯಕತೆ ಪೂರೈಸುವ ವ್ಯವಸ್ಥೆ....

........ಪರ-ಸ್ತ್ರೋಯ್ಕಾ ಪೂರ್ವದ ಸಮಾಜವಾದದಲ್ಲಿ ಎಲ್ಲವೂ ಪ್ರಭುತ್ವದ ಆಸ್ತಿ. ಜನರದಲ್ಲ ಪ್ರಭುತ್ವದ್ದು ಮಾತ್ರ. ಆಸ್ತಿಯನ್ನು ಉಪಯೋಗಿಸುವ ಜನತೆಗೆ ಅದರಲ್ಲಿ ಯಾವುದೇ ಹಕ್ಕುಗಳಿಲ್ಲ. ಸಾರಾಸಗಟು ಪ್ರಭುತ್ವದ ನಿಯಂತ್ರಣ ಸರಕಾರಿ ಉದ್ಯಮಗಳು, ಸಾಮೂಹಿಕ ಕ್ಷೇತ್ರಗಳು, ಮತ್ತು ಸಹಕಾರಿಗಳ ಸ್ವಾತಂತ್ರ್ಯವನ್ನು ನಿರಾಕರಿಸಿತ್ತು. .... ಮಾರುಕಟ್ಟೆಯನ್ನು ಇರಗೊಡಲಿಲ್ಲ. ವಿವಿಧ ಸಮಾಜವಾದಿ ಉದ್ಯಮಗಳ ನಡುವೆ ಮಾರುಕಟ್ಟೆ ಸಂಬಂಧಗಳು ಸಮಾಜವಾದಿ ಏಳಿಗೆ ಮತ್ತು ಯೋಜನಾಬದ್ಧ ಸಂಬಂಧಗಳಿಗೆ ವಿರುದ್ಧವಾದದ್ದು ಎಂದು ತಿಳಿಯಲಾಯಿತು. ಸರಕು-ಹಣ ಸಂಬಂಧಗಳು ಇದರಿಂದ ಸೀಮಿತವಾಗಿದ್ದವು. ಉತ್ಪನ್ನಗಳ ವಿನಿಮಯ ಇದರಿಂದ ವಿರೂಪವಾದವು. ಈ ಧೋರಣೆಯೇ ಕಾಲಕ್ರಮೇಣ ಸಮಾನಾಂತರ ಆರ್ಥಿಕತೆ, ಉದ್ಯಮಗಳು ಕಾನೂನು ವಿರೋಧಿ ಒಪ್ಪಂದಗಳನ್ನು ಮಾಡುವುದು, ನಿರಂತರ ಉತ್ಪನ್ನಗಳ ಕೊರತೆ, ಕಾಳಸಂತೆ ಮತ್ತು ಕ್ಯೂಗಳಿಗೆ ಎಡೆಮಾಡಿಕೊಟ್ಟಿದ್ದು. ಮಾರುಕಟ್ಟೆ ನಿರ್ಬಂಧಗಳು ಮತ್ತು ಸ್ಪರ್ಧೆಯ ಅಭಾವ ಏಕಸ್ವಾಮ್ಯಕ್ಕೆ ಮತ್ತು ಉತ್ಪಾದಕರ ಮರ್ಜಿ ಬಂದಂತೆ ಉತ್ಪಾದಿಸುವ ಹಾಗಾಯಿತು. ಇಂತಹ ಏಕಸ್ವಾಮ್ಯ ಇರುವವರೆಗೆ, ಬಳಕೆದಾರರ ಬೇಡಿಕೆ ಪೂರೈಸುವ ಮತ್ತು ಕೊರತೆಗಳನ್ನು ಅಳಿಸಿ ಹಾಕುವ ಆರ್ಥಿಕತೆಯತ್ತ ಹೋಗುವುದು ಸಾಧ್ಯವಿಲ್ಲ.........

ನಾವು

ಬರಿಯ ಘೋಷಣೆಗಳಿಂದ ಸಮಾಜವಾದವನ್ನು ಬಲಪಡಿಸಬಹುದು ಎಂದು ತಿಳಿದಿಲ್ಲ. ಇದು ಜನರ ಆರ್ಥಿಕ ಸಾಧ್ಯತೆಗಳನ್ನು ಹೆಚ್ಚಿಸುವುದರಿಂದ ಮಾತ್ರ ಸಾಧ್ಯ.......

ಇದು

ಇಂತಹ ಟೀಕೆಗಳಿಗೆ ಗೋರ್ಬಚೇವ್‌ರವರು ಕೊಡುವ ಉತ್ತರ.

ಅಮೇರಿಕದಲ್ಲಿ ಯುದ್ಧ-ವಿರೋಧಿ ಚಳುವಳಿ

ಕೊಲ್ಲಿ ಬಿಕ್ಕಟ್ಟನ್ನು ಪರಿಹಾರ ಶಾಂತಿಯುತ ಮತ್ತು ಮಿಲಿಟರಿ ಕ್ರಮಗಳ ನಡುವೆ ತೂಗುಯ್ಯಾಲೆಯಾಡುತ್ತಿರುವಂತೆ, ಅಮೇರಿಕದಲ್ಲಿ ಯುದ್ಧ-ವಿರೋಧಿ ಭಾವನೆಗಳು ಹೆಚ್ಚುತ್ತಿವೆ. ಇವು ಚಳುವಳಿಯಾಗಿ ರೂಪ ಪಡೆಯಲು ಆರಂಭಿಸಿವೆ. ಪರಿಸರವಾದಿಗಳು, ವಿದ್ಯಾರ್ಥಿಗಳು, ಮತ್ತು ಶಾಂತಿ ಸಂಘಟನೆಗಳು ಇಂತಹ ಚಳುವಳಿಯನ್ನು ಹಲವು ಕಡೆ ಆಗಲೇ ಆರಂಭಿಸಿದ್ದು ಇದು ಬೆಳೆಯುವ ಸೂಚನೆಗಳಿವೆ.

ಇತ್ತೀಚೆಗೆ ಅಧ್ಯಕ್ಷ ಬುಶ್ ಆಯೋಜಿಸಿದ್ದ ಮಧ್ಯಂತರ ಕಾಂಗ್ರೆಸ್ ಚುನಾವಣೆಗಳ ಪ್ರಚಾರದ ಸಂಬಂಧ ಸಭೆಯೊಂದರಲ್ಲಿ, ಯುದ್ಧ-ವಿರೋಧಿ ಘೋಷಣೆ ಕೂಗಲಾಯಿತು. 'ತೈಲಕ್ಕಾಗಿ ರಕ್ತ ಬೇಡ' ಇದು ಒಂದು ಘೋಷಣೆಯಾಗಿತ್ತು. ದೇಶಾದ್ಯಂತ ಮೇಣದ ಬತ್ತಿ ಹಿಡಿದು ಮೆರವಣಿಗೆಗಳು ನಡೆದಿವೆ ಎಂದು ವಾಶಿಂಗ್‌ಟನ್ ಪೋಸ್ಟ್ ವರದಿ ಮಾಡಿದೆ. ರೋಮನ್ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟ್ ಚರ್ಚ್ ನಾಯಕರು ಯುದ್ಧದ ನೈತಿಕತೆಯನ್ನು ಹಲವು ಬಾರಿ ಪ್ರಶ್ನಿಸಿದ್ದಾರಂತೆ. ಈ ಎಲ್ಲಾ ಚಳುವಳಿಗಳು ಈಗ ಇರುವುದು ಇರಾಕ್‌ನ 'ದುರಾಕ್ರಮಣ'ದ ಪ್ರಶ್ನೆ ಮಾತ್ರವಲ್ಲ. ಕೊಲ್ಲಿಯ ಬಿಕ್ಕಟ್ಟಿನ ಚರಿತ್ರೆಯಲ್ಲಿ ಅಮೇರಿಕ ಸೇರಿದಂತೆ ಪಾಶ್ಚಿಮಾತ್ಯ ದೇಶಗಳ ಜವಾಬ್ದಾರಿ, ಅಮೇರಿಕ ರಕ್ಷಿಸುತ್ತಿರುವ ಅಮಿರ್-ಶೇಖ್‌ಗಳ ಪ್ರಜಾಪ್ರಭುತ್ವದ ಬಗ್ಗೆ ಧೋರಣೆ,- ಇವುಗಳ ಬಗೆಗೆ ಪ್ರಶ್ನೆ ಎತ್ತುತ್ತಿವೆ.

ಇಂತಹ ಚಳುವಳಿಗಳು ಯೂರೋಪಿನಲ್ಲಿ ಅದರಲ್ಲೂ ಬ್ರಿಟನ್‌ನಲ್ಲಿ ನಡೆದಿವೆ. ಇರಾಕ್‌ನಲ್ಲಿರುವ ಪಾಶ್ಚಿಮಾತ್ಯ ದೇಶಿಯರ ಬಗೆಗೆ ಮಾತ್ರ ಕಾಳಜಿ ತೋರುವ ಸರಕಾರದ ಧೋರಣೆಯನ್ನು ಟೀಕಿಸಿ, ಏಶ್ಯನ್ ನಿರಾಶ್ರಿತರಿಗೆ ಪರಿಹಾರ ಕಾರ್ಯದಲ್ಲಿ ಭಾಗವಹಿಸಬೇಕು ಎಂದು ಒತ್ತಾಯ ಪಡಿಸಿವೆ. ಇಂತಹ ಪರಿಹಾರಕ್ಕೆ ಸಾರ್ವಜನಿಕರಿಂದ ಧನ ಸಂಗ್ರಹ ಮಾಡುತ್ತಿವೆ. ಬ್ರಿಟನ್‌ನಲ್ಲಿ ಇಂತಹ ಪ್ರಯತ್ನದಲ್ಲಿ ಎಡ-ಒಲವಿನ ಸಂಘಟನೆ ಇಂಡಿಯನ್ ವರ್ಕರ್ಸ್ ಅಸೋಸಿಯೇಶನ್ ಮುಖ್ಯ ಪಾತ್ರ ವಹಿಸುತ್ತಿದೆ.

ಪಾಕ್ ಚುನಾವಣೆ

ಪಾಕಿಸ್ತಾನದಲ್ಲಿ ಈ ವಾರ ಚುನಾವಣೆಗಳು ನಡೆಯಲಿದ್ದು, ಇದು ಆ ದೇಶದ ಚರಿತ್ರೆಯಲ್ಲೇ ಅತ್ಯಂತ ಹಿಂಸಾತ್ಮಕ, ಮಹತ್ವದ ಚುನಾವಣೆಯಾಗುವ ಸಂಭವವಿದೆ. ಅಮೇರಿಕ ಪಾಕಿಸ್ತಾನದಲ್ಲಿ ಮಧ್ಯಪ್ರವೇಶದ ಬಗ್ಗೆ ಹೊಸ ಪಿತೂರಿಯೇನೋ ತಯಾರಿಸಿದ ಹಾಗಿದೆ. ಇದ್ದಕ್ಕಿದ್ದ ಹಾಗೆ ಸರಕಾರದಮೇಲೆ ನ್ಯಾಯಯುತ ಮುಕ್ತ ಚುನಾವಣೆ ಮಾಡಬೇಕೆಂದು 'ಒತ್ತಡ' ಹೇರುತ್ತಿದೆ. ಅಮೇರಿಕಾದ ಸಂಸ್ಥೆಯೊಂದು 1 8-ದೇಶಗಳ 40 ಸದಸ್ಯರ ಸಮಿತಿಯೊಂದನ್ನು ಚುನಾವಣೆಯ 'ನಿರೀಕ್ಷಣೆ'ಗೆ ಕಳಿಸುತ್ತಿದೆ.

ಇತ್ತ ಪಾಕಿಸ್ತಾನ ಹಂಗಾಮಿ ಸರಕಾರ ಬೆನಜಿರ್ ಮತ್ತು ಆಕೆಯ ಪತಿಯ ಮೇಲೆ ಭ್ರಷ್ಟಾಚಾರ ಮುಂತಾದ ಕ್ರಿಮಿನಲ್ ಕೇಸುಗಳನ್ನು ಹಾಕಿ ಇದಕ್ಕಾಗಿ ವಿಶೇಷ ನ್ಯಾಯಮಂಡಲಿ ರಚಿಸಿದೆ. ಬೆನಜಿರ್ ಪತಿ ಅಸಿಫ್ ಝರದಾರಿಯನ್ನು ಇಂತಹ ಆಪಾದನೆಗಳ ಮೇಲೆ ಬಂಧಿಸಲಾಗಿದೆ. ಇದು ಇವರಿಬ್ಬರನ್ನು ಚುನಾವಣೆಯಿಂದ ರಾಜಕೀಯದಿಂದ ಬರಖಾಸ್ತು ಮಾಡಲು ಸಂಚು ಎಂದು ಬೆನಜಿರ್ ತಮ್ಮ ಚುನಾವಣೆ ಸಭೆಗಳಲ್ಲಿ ಹೇಳಿದ್ದಾರೆ. ಆಪಾದನೆಗಳು ನಿಜವಾದರೆ ಸಾಮಾನ್ಯ ಕೋರ್ಟುಗಳೇ ಸಾಕಲ್ಲ, ವಿಶೇಷ ನ್ಯಾಯ ಮಂಡಲಿಗಳು ಏಕೆ ಎಂದು ಪ್ರಶ್ನಿಸಿದ್ದಾರೆ. ಪಾಕಿಸ್ತಾನದಲ್ಲಿ ವಿಶೇಷ ನ್ಯಾಯಮಂಡಲಿಗಳಿಗೆ ಸರಕಾರದ-ಪರ ವಿರೋಧ ಪಕ್ಷಗಳ ನಾಯಕರ ವಿರುದ್ಧ ನ್ಯಾಯಬಾಹಿರ ತೀರ್ಪು ಕೊಟ್ಟಿರುವ ಪರಂಪರೆ ಇದೆ. ಈ ಹಿನ್ನೆಲೆಯಲ್ಲಿ ಬೆನಜಿರ್ ಸರಕಾರವನ್ನು ವಜಾ ಮಾಡಿದ್ದನ್ನು ನ್ಯಾಯಬಾಹಿರ ಎಂದು ಪಿಪಿಪಿ ಪಕ್ಷ ಕೋರ್ಟುಗಳಲ್ಲಿ ಪ್ರಶ್ನಿಸಿದ್ದನ್ನು, ಕೋರ್ಟುಗಳು ತಳ್ಳಿಹಾಕಿದ್ದರೂ ಜನತೆಗೆ ಆ ಪಕ್ಷದ ಮೇಲೆ, ಬೆನಜಿರ್ ಮೇಲೆ ಸಹಾನುಭೂತಿ ಬರುವಂತಾಗಿದೆ.

ಪೋಲೆಂಡ್‌ನಲ್ಲಿ ಸ್ಕೂಲ್‌ಗಳಲ್ಲಿ ಪ್ರಾರ್ಥನೆ

ಪೋಲೆಂಡಿನಲ್ಲಿ ಈ ಶೈಕ್ಷಣಿಕ ವರ್ಷದಿಂದ ಸ್ಕೂಲ್‌ಗಳಲ್ಲಿ ಪ್ರಾರ್ಥನೆ ಮತ್ತು ಧಾರ್ಮಿಕ ಶಿಕ್ಷಣವನ್ನು ಪಠ್ಯಕ್ರಮದ ಭಾಗವಾಗಿಸಲಾಗುತ್ತಿದೆ. ಇದು ಚರ್ಚಿನ ಒತ್ತಾಯದ ಮೇರೆಗೆ ಶಿಕ್ಷಣ ಖಾತೆ ಕೈಗೊಂಡಿರುವ ಕ್ರಮ. ಇದನ್ನು ಹಲವು ಕಾರ್ಮಿಕರೂ, ಬುದ್ಧಿಜೀವಿಗಳೂ, ವಿದ್ಯಾರ್ಥಿಗಳೂ, ಪಾಲಕರ ಸಂಘಟನೆಗಳು ವಿರೋಧಿಸಿವೆ. ಇದು ಪೋಲೆಂಡಿನ ಸಂವಿಧಾನದಲ್ಲಿ ಹೇಳಿರುವಂತೆ 'ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸಬೇಕು'ಎನ್ನು ವಿಧಿಗೆ ವಿರುದ್ಧ ಅಲ್ಲದೆ ಈಗ ಹೆಚ್ಚು ಕಡಿಮೆ ಎಲ್ಲಾ ಆಧುನಿಕ ದೇಶಗಳಲ್ಲಿ ಅಂಗೀಕರಿಸಲಾಗಿರುವ ಸಂಪ್ರದಾಯಕ್ಕೆ ವಿರುದ್ಧವಾದುದು. ಯಾವುದೇ ಬಂಡವಾಳಶಾಹಿ ದೇಶಗಳಲ್ಲೂ ಸ್ಕೂಲಿನ ಪಠ್ಯಕ್ರಮದ ಭಾಗವಾಗಿ ಧಾರ್ಮಿಕ ಶಿಕ್ಷಣವಿಲ್ಲ. ಇದು ಧರ್ಮವನ್ನು ಜನತೆಯ ಮೇಲೆ ಹೇರಿದಂತೆ. ಧರ್ಮ ಮತ್ತು ರಾಜಕೀಯದ ಮಿಶ್ರಣ ಎಷ್ಟು ಆಸ್ಫೋಟಕಾರಿ ಎಂದು ಜಗತ್ತಿನ ಎಷ್ಟೋ ಪ್ರದೇಶಗಳಲ್ಲಿ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಇದು ಪ್ರತಿಗಾಮಿ ಕ್ರಮ.

ಟೋರಿ ಪರಾಜಯ

ಥ್ಯಾಚರ್‌ರವರ ಆಳುವ ಟೋರಿ ಪಕ್ಷ ಬ್ರಿಟನ್ನಿನ ಪ್ರಮುಖ ಮರು ಚುನಾವಣೆಯೊಂದರಲ್ಲಿ ಭಾರಿ ಪರಾಜಯ ಕಂಡಿದೆ. ಈ ಕ್ಷೇತ್ರ ಟೋರಿ ಪಕ್ಷದ ಭಾರಿ ಪ್ರಭಾವವಿರುವ 'ಸುರಕ್ಷಿತ' ಸೀಟು ಎಂದು ಭಾವಿಸಲಾಗಿತ್ತು. ಇಲ್ಲಿ ಪಾರ್ಲಿಮೆಂಟು ಸದಸ್ಯನನ್ನು ಐರಿಷ್ ಭಯೋತ್ಪಾದಕರು ಕೊಲೆ ಮಾಡಿದ್ದು, ಅದೂ ಟೋರಿಗಳಿಗೆ ಚುನಾವಣೆಯಲ್ಲಿ ಸಹಾಯ ಮಾಡಬಹುದು ಎಂದು ಪರಿಗಣಿಸಲಾಗಿತ್ತು. ಥ್ಯಾಚರ್‌ರ ಕರಾಳ ಆರ್ಥಿಕ ಧೋರಣೆಗಳು ಮಾರಕ ಪರಿಣಾಮ ಈಗ ಜನರಿಗೆ ಅರ್ಥವಾಗುವುದರ ಫಲ, ಥ್ಯಾಚರ್‌ರ ಆರ್ಥಿಕತೆಯಲ್ಲಿ ಮ್ಯಾಜಿಕ್ ಮಾಡುವ ಟೋರಿ ರಾಜಕೀಯದ ಸೋಲು ಇದು ಎನ್ನಲಾಗಿದೆ. ಈ ಕ್ಷೇತ್ರದಲ್ಲಿ ಲಿಬರಲ್ ಪಕ್ಷ ಗೆದ್ದಿದೆ.

ಥ್ಯಾಚರ್‌ರ 11 ವರ್ಷಗಳ ಆಡಳಿತದ ನಂತರ, ಪದೇ ಪದೇ ಪಕ್ಷಗಳ ಬೆಂಬಲದ ಬಗ್ಗೆ ನಡೆಸಿರುವ ಸಮೀಕ್ಷೆಗಳಲ್ಲಿ ಟೋರಿ ಜನಪ್ರಿಯತೆ ಕಡಿಮೆಯಾಗಿ ಲಿಬರಲ್ ಜನಪ್ರಿಯತೆ ಜಾಸ್ತಿಯಾಗುತ್ತಿದೆ. ಅಂತರ ಆಗಾಗ ಹೆಚ್ಚು ಕಡಿಮೆಯಾಗುತ್ತಿದ್ದರೂ, ಲಿಬರಲ್ ಪಕ್ಷ ಟೋರಿಗಳಿಗಿಂತ ಕನಿಷ್ಟ ಶೇಕಡಾ 10 ರ ವ್ಯತ್ಯಾಸದಿಂದ ಮುಂದಿದೆ.

ಇಸ್ರೇಲಿನ ಮೇಲೆ ಕ್ರಮಕ್ಕೆ ಆಗ್ರಹ

ಇಸ್ರೇಲ್ ಈವರೆಗೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯದ ಪ್ರಕಾರ ವಿಶ್ವಸಂಸ್ಥೆಯ ನಿಯೋಗ ಇತ್ತೀಚೆಗೆ ಪ್ಯಾಲೆಸ್ತೀನರ ನರಮೇಧದ ಬಗ್ಗೆ ವಿಚಾರಣೆಗ ಇಸ್ರೇಲ್‌ಗೆ ಬರುವುದನ್ನು ವಿರೋಧಿಸುತ್ತಿದೆ. ಅದರ ಜತೆಗೆ ಸಹಕರಿಸುವುದಿಲ್ಲ ಎಂದು ಹೇಳಿದೆ. ಈ ನಿರಾಕರಣೆಯ ವಿರುದ್ಧ ಇಸ್ರೇಲಿನ ಮೇಲೆ ಅಂತರರಾಷ್ಟ್ರೀಯ ದಿಗ್ಬಂಧನದಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅರಬ್ ದೇಶಗಳು, ಭದ್ರತಾ ಸಮಿತಿಯ ಅಲಿಪ್ತ ದೇಶಗಳು ಒತ್ತಾಯಿಸಿವೆ. ಹಿಂದೆ ಇಂತಹ ಕ್ರಮಗಳನ್ನು ಇಸ್ರೇಲಿನ ವಿರುದ್ಧ ಪ್ರಸ್ತಾಪವೆದ್ದಾಗಲೆಲ್ಲಾ, ಅಮೇರಿಕ ಅದನ್ನು ವಿಟೋ ಮಾಡಿ ಇಸ್ರೇಲನ್ನು ರಕ್ಷಿಸುತ್ತಿತ್ತು. ಆದರೆ ಈಗ ಕೊಲ್ಲಿ ಬಿಕ್ಕಟ್ಟು, ಆ ಹಿನ್ನೆಲೆಯಲ್ಲಿ ಅಮೇರಿಕಕ್ಕೆ ಬೇಕಾಗಿರುವ ಅರಬ್ ದೇಶಗಳ ಬೆಂಬಲ, ಸೌದಿ ಅರೇಬಿಯಾದಲ್ಲಿ ಅಮೇರಿಕಕ್ಕೆ ಸಿಕ್ಕಿರುವ ನೆಲೆ, ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಅಂತರರಾಷ್ಟ್ರೀಯ ವಿವಾದಗಳಲ್ಲಿ ವಹಿಸುತ್ತಿರುವ ಹೆಚ್ಚಿನ ಪಾತ್ರ-ಈ ಹಿನ್ನೆಲೆಯಲ್ಲಿ ಅಮೇರಿಕ ಇಸ್ರೇಲನ್ನು ಮೊದಲಿನ ರೀತಿಯಲ್ಲಿ ಬೆಂಬಲಿಸುವುದು ಸಾಧ್ಯವಾಗದ ಮಾತು. ಈಗಾಗಲೇ ವಿಶ್ವ ಸಂಸ್ಥೆಯ ನಿಯೋಗದ ಜತೆ ಸಹಕರಿಸದಿದ್ದರೆ 'ಜನ ಸದ್ದಾಂ ಹುಸೇನರ ಜತೆ ನಿಮ್ಮನ್ನು ಹೋಲಿಸುತ್ತಾರೆ, ಅದನ್ನು ನಿರಾಕರಿಸುವುದು ಸಾಧ್ಯವಾಗುವುದಿಲ್ಲ' ಎಂದು ಅಮೇರಿಕ ಇಸ್ರೇಲಿಗೆ ಬುದ್ಧಿಹೇಳಿದೆ.

ಅರಬ್ ದೇಶಗಳು, ಸೋವಿಯತ್ ಒಕ್ಕೂಟ ಮತ್ತು ಹಲವು ಪಾಶ್ಚಿಮಾತ್ಯ ದೇಶಗಳೂ ಇರಾಕ್-ಕುವೈತ್ ಬಿಕ್ಕಟ್ಟು, ಪಶ್ಚಿಮ ಏಶ್ಯಾದ ಇತರ ಸಮಸ್ಯೆಗಳನ್ನು ಜತೆಯಾಗಿ ಬಗೆಹರಿಸಬೇಕು ಎಂಬ ಧೋರಣೆಯ ಸುತ್ತ ಒಮ್ಮತ ರೂಪಿತವಾಗುತ್ತಿರುವ ಹಿನ್ನೆಲೆಯಲ್ಲಿ ಇಸ್ರೇಲ್ ಇನ್ನೂ ಹೆಚ್ಚಾಗಿ ಒಂಟಿಯಾಗುತ್ತಿದೆ. ಇದರಲ್ಲಿ ಪ್ಯಾಲೆಸ್ತೀನ್ ಪ್ರಶ್ನೆ, ಇಸ್ರೇಲ್ ಆಕ್ರಮಿತ ಪ್ರದೇಶಗಳ ತೆರವು ಸೇರಿವೆ.

ಈಜಿಪ್ತ್ ಸ್ಪೀಕರ್ ಕೊಲೆ

ಈಜಿಪ್ತ್ ಪಾರ್ಲಿಮೆಂಟಿನ ಸ್ಪೀಕರರನ್ನು ಕೈರೋದಲ್ಲಿ ಇತ್ತೀಚೆಗೆ ಹಾಡುಹಗಲಲ್ಲೇ ಗುಂಡಿಟ್ಟು ಕೊಲೆ ಮಾಡಲಾಗಿದೆ. ಹಂತಕರು ಯಾರೆಂದು ಇನ್ನೂ ಗೊತ್ತಾಗಿಲ್ಲ. ಆದರೆ ಇದು ಅರಬ್-ವಿರೋಧಿ ಪಾಶ್ಚಿಮಾತ್ಯ -ಪರ ಈಜಿಪ್ತ್‌ನ ನೀತಿಗಳ ವಿರುದ್ಧ ಎಚ್ಚರಿಕೆ ನೀಡುವ ಕೃತ್ಯ ಎನ್ನಲಾಗುತ್ತಿದೆ. ಇದನ್ನು ಎಸಗಿದವರು ನಾಸೆರ್‌ವಾದಿಗಳು ಅಥವಾ ಮುಸ್ಲಿಂ ಮೂಲಭೂತವಾದಿಗಳು ಎನ್ನಲಾಗಿದೆ. ಇಸ್ರೇಲನಲ್ಲಿ ಪ್ಯಾಲೆಸ್ತೀನಿಯರ ನರಮೇಧದ ವಿರುದ್ಧ ಪ್ರತಿಕಾರ ಎಂದೂ ಹೇಳಲಾಗುತ್ತಿದೆ.

ಇಂಡೋನೇಶ್ಯಾಕ್ಕೆ ಮಂಡೇಲಾ ಭೇಟಿ

ಮಂಡೇಲಾ ಭಾರತದಿಂದ ಇಂಡೋನೇಶ್ಯಕ್ಕೆ ತೆರಳಿದ್ದು ಅಲ್ಲಿಯೂ ಅವರಿಗೆ ಭವ್ಯ ಸ್ವಾಗತ ದೊರೆಯಿತು. ಇಂಡೋನೇಶ್ಯಾದ 4 ದಿನಗಳ ಭೇಟಿಯ ಕೊನೆಯಲ್ಲಿ ಇಂಡೋನೇಶ್ಯಾ ಅಧ್ಯಕ್ಷರು 10 ಶತಕೋಟಿ ಡಾಲರುಗಳನ್ನು ಎಎನ್‌ಸಿಗೆ ಕಾಣಿಕೆಯಾಗಿ ಅರ್ಪಿಸಿದರು. ಅಲ್ಲದೆ ಮುಂದಿನ 3 ವರ್ಷಗಳ ವರೆಗೆ ಪ್ರತಿ ವರ್ಷ ಎರಡೂವರೆ ಲಕ್ಷ ಡಾಲರುಗಳ ಕಾಣಿಕೆ ಕೊಡುವುದಾಗಿ ಪ್ರಕಟಿಸಿದೆ.

ಇಟಾಲಿಯನ್ ಹಿರಿಯ ಕಮ್ಯುನಿಸ್ಟರಿಗೆ ಕಂಬನಿ

ಇಟಲಿಯನ್ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಮತ್ತು ಫ್ಯಾಸಿಸ್ಟ್-ವಿರೋಧಿ ಹೋರಾಟದ ಹೀರೋಗಳಲ್ಲೊಬ್ಬರಾದ ಕಾಮ್ರೇಡ್ ಗಿಯಾನ್ ಕಾರ್ಲೋ ಪಜೆಟ್ಟಾರ ನಿಧನಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಸಂತಾಪ ವ್ಯಕ್ತ ಪಡಿಸಿದೆ.

ಮೈಕೋ-ಐಟಿಸಿ ಕಾರ್ಮಿಕರಿಗೆ, ಕಾಂ.ಸೂರಿಯವರಿಗೆ "ಐಕ್ಯರಂಗ" ಕೃತಜ್ಞತೆ

'ಐಕ್ಯರಂಗ' ಕಳೆದ ಎರಡು ಸಂಚಿಕೆಗಳಿಂದ ಪೂರ್ಣವಾಗಿ ನಮ್ಮದೇ ಡಿ.ಟಿ.ಪಿ (ಕಮ್ಪ್ಯೂಟರ್ ಹಾಗೂ ಲೇಸರ್ ಪ್ರಿಂಟರ್ ಉಪಯೋಗಿಸುವ ಡೆಸ್ಕ್‌ಟಾಪ್ ಪಬ್ಲಿಶಿಂಗ್ ವ್ಯವಸ್ಥೆ)ಘಟಕದಲ್ಲಿ ಕಂಪೋಸ್ ಆಗಿ ಬರುತ್ತಲಿದೆ. ಇದನ್ನು ನಮ್ಮ ಓದುಗರು ಆಗಲೇ ಗಮನಿಸಿರಬಹುದು. ಮುದ್ರಣ ತಂತ್ರಜ್ಞಾನದಲ್ಲಿ ಆಧುನಿಕವಾದ ಈ ವ್ಯವಸ್ಥೆಯನ್ನು ನಿಮ್ಮ ಪತ್ರಿಕೆ ಹೊಂದಲು ಸಾಧ್ಯವಾಗಿರುವುದು ಮೈಕೋ ಮತ್ತು ಐಟಿಸಿ ಕಾರ್ಮಿಕರ ಕೊಡುಗೆಗಳಿಂದಾಗಿ. ಈ ಕಾರ್ಮಿಕರು ತಮ್ಮ ಮುಖಂಡ ಹಾಗೂ ಸಿಐಟಿಯು ರಾಜ್ಯ ಅಧ್ಯಕ್ಷ ಎಸ್.ಸೂರ್ಯನಾರಾಯಣ ರಾವ್‌ರವರ ಮೂಲಕ ರೂ. 1.6 ಲಕ್ಷವನ್ನು 'ಐಕ್ಯರಂಗ'ಕ್ಕೆ ನೀಡಿರುವುದನ್ನು ಈ ಸಂದರ್ಭದಲ್ಲಿ 'ಐಕ್ಯರಂಗ' ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತದೆ.

ಮಂಡೇಲಾ....

ಪುಟ 3 ರಿಂದ

ಈ ಅಪ್ರತಿಮ ನಾಯಕನನ್ನು ಪ್ರಶಂಸುತ್ತಿರುವಾಗ ಕರ್ನಾಟಕದ ಬಿಜೆಪಿಯ ಕೆಲವು ಮುಖಂಡರು ಮಂಡೇಲಾರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಿರುವ ಬಗ್ಗೆ ಆಕ್ಷೇಪವೆತ್ತಿದ್ದಾರೆ. ಈ ಪ್ರಶಸ್ತಿ ಭಾರತೀಯರಿಗೆ ಮಾತ್ರ ಎನ್ನುವುದು ಅವರ ಅಂಬೋಣ. ಆದರೆ ಈ ಪ್ರಶಸ್ತಿಯನ್ನು ಮಂಡೇಲಾರಿಗೆ ಅರ್ಪಿಸುವುದರಿಂದ ಅದರ ಮೌಲ್ಯವೇ ಹೆಚ್ಚಿದೆ ಎನ್ನುವುದು ಬಹುತೇಕ ಎಲ್ಲ ಪತ್ರಿಕೆಗಳ ಅಭಿಪ್ರಾಯವಾಗಿದೆ. ಹಾಗಿರುವಾಗ ಈ ರೀತಿಯ ಟೀಕೆ 'ನಿಜಪ್ರಜ್ಞೆ'ಯಲ್ಲಿ ಕರಡು ಮುಳುಗಿದ ಹಾಗೆ ಅಜ್ಞಾನವಲ್ಲದೆ ಬೇರೇನಿಲ್ಲ.

ನನ್ನ ಹೆಣದ ಮೇಲೆ...
ಪುಟ 5 ರಿಂದ

ಪ್ರಶ್ನೆ:
ಮಸೀದಿ ಒಡೆಯುವ ಪ್ರಯತ್ನ ನಡೆದರೆ ನೀವದನ್ನು ತಡೆಯುವಿರೋ?

ಉತ್ತರ:
ಖಂಡಿತವಾಗಿಯೂ. ನನ್ನ ಬಳಿ ಇರುವ ಎಲ್ಲಾ ಶಕ್ತಿ ಉಪಯೋಗಿಸಿ ತಡೆಯುತ್ತೇನೆ.

ಪ್ರಶ್ನೆ:
ಅವರು ನಿಮ್ಮನ್ನು ಕೊಂದರೆ?

ಉತ್ತರ:
ನಾನು ಜೀವಂತ ಇರುವವರೆಗೆ ಅವರನ್ನು ತಡೆಯಲು ಪ್ರಯತ್ನಿಸುವೆ. ನನ್ನ ಹೆಣವನ್ನು ತುಳಿದಷ್ಟೇ ಅವರು ಮಸೀದಿ ಒಡೆಯಲು ಸಾಧ್ಯ

ಪ್ರಶ್ನೆ:
ಅಯೋಧ್ಯೆಯ ಜನ ಯಾವ ನಿಲುವು ತಳೆಯಬಹುದು?

ಉತ್ತರ:
ಅಯೋಧ್ಯೆಯಲ್ಲಿರುವ ಜನರು ಮಸೀದಿ ಒಡೆಯಬೇಕೆನ್ನುತ್ತಿಲ್ಲ. ಇಲ್ಲಿ ವಿಎಚ್‌ಪಿ ಬೆಂಬಲವಿರುವುದು ಒಟ್ಟು 2-3 ಸನ್ಯಾಸಿಗಳಷ್ಟೇ. ಅವ... ಗಿದ್ದಾರೆ. ಯಾವತ್ತೂ ಪೋಲೀಸರಿಗೆ ಪೂರಕವಾಗಿ ಕೆಲಸ ಮಾಡುವವನಿದ್ದಾನೆ. ಮೂರನೆಯವರು ನಿತ್ಯ ಗೋಪಾಲ, ಮೂರನೆಯವರು ವಿಲಾಸ ವೇದಾಂತಿ. ಆದರೆ ಇವರಿಗೆ ಯಾವತ್ತೂ ಜನರ ಬೆಂಬಲ ಪಡೆಯಲು ಸಾಧ್ಯವಾಗಿಲ್ಲ.

ಪ್ರಶ್ನೆ:
ಸ್ಥಳೀಯ ಎಮ್‌ಎಲ್‌ಎ ನಿಲುವೇನು?

ಉತ್ತರ:
ಜನತಾದಳದವರು ಇಲ್ಲಿನ ಎಮ್‌ಎಲ್‌ಎ. ವಿಎಚ್‌ಪಿಯ ಅಭ್ಯರ್ಥಿಯನ್ನು ಇವರು ಸೋಲಿಸಿ ಆಯ್ಕೆಯಾಗಿದ್ದಾರೆ. ಸಧ್ಯದಲ್ಲಿ ಫೈಜಾಬಾದ್ ಜಿಲ್ಲೆಯ ಒಂದೆಡೆ ಕೂಡ ಬಿಜೆಪಿಗೂ ವಿಎಚ್‌ಪಿಗೂ ಸಾಧ್ಯವಾಗಿಲ್ಲ. ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದು ಸಿಪಿಐ ಪಕ್ಷದ ಮಿತ್ರಸೇನ್ ಯಾದವ್ ಆಗಿದ್ದಾರೆ.

ಪ್ರಶ್ನೆ:
ಉಳಿದ ರಾಷ್ಟ್ರೀಯ ಪಕ್ಷಗಳ ಅಭಿಪ್ರಾಯೇನು? ಮುಸ್ಲಿರು ಏನು ಹೇಳುತ್ತಾರೆ?

ಉತ್ತರ:
ಓರ್ವರಿಗೂ ಮಸೀದಿ ಒಡೆಯಬೇಕೆ-

ಪ್ರಶ್ನೆ:
ಅಯೋಧ್ಯೆಯಲ್ಲಿ ಎಷ್ಟು ದೇವಾಲಯಗಳಿವೆ.?

ಉತ್ತರ:
ಸುಮಾರು 8500 ದೇವಸ್ಥಾನಗಳಿವೆ. ಇಲ್ಲಿ ಎಲ್ಲೂ ಇಷ್ಟು ಘರ್ಷಣೆಗಳು ನಡೆಯುತ್ತಿಲ್ಲ.

ಪ್ರಶ್ನೆ:
ಫೈಜಾಬಾದ್‌ನ ವಾಬ್ ಆಗಿದ್ದ ಫಿರೋಜ್ ರೋಜ್‌ದಾವನ್ ನಿರ್ಮಿಸಿದ ದೇವಾಲಯಗಳು ಎಷ್ಟು?

150. ಇದರಲ್ಲಿ ಅತ್ಯಂತ ದೊಡ್ಡ ಹನುಮಾನ್ ಗಿರಿಯಲ್ಲಿರುವುದು ಆಗಿದೆ. ಮೊದಲು ಇದು ಸಣ್ಣ ಕ್ಷೇತ್ರವಾಗಿತ್ತು. ಫಿರೋಜ್ ದಾವಳ ನವಾಬ್ ದೇವಾಲಯ ನಿರ್ಮಿಸಲು ಸ್ಥಳ ದಾನ ಮಾಡಿದರು. ಬಾಂಡಘಾಟ್, ಜಗನಿಘಾಟ್, ರಾಜಗೋಪಾಲನಾರಾಯಣ ಚಾರಿ–ಮೊದಲಾದೆಡೆ ದೇವಾಲಯ ನಿರ್ಮಿಸಲು ನೀಡಿದ ಸ್ಥಳದಾನ ಮಾಡಿದ್ದಾರೆ. ವಾಸ್ತವದಲ್ಲಿ ವಿಎಚ್‌ಪಿ ಮಾಡುವುದು ಶ್ರೀರಾಮನನ್ನು ಮಾರುವ ಕೆಲಸ. ಶ್ರೀರಾಮನ ಹೆಸರಿನಲ್ಲಿ ಹಣ ಜನರ ಮೇಲೆ ಅವರು ಸಾಕಷ್ಟು ಕೀಳುತ್ತಿದ್ದಾರೆ.

ಅದನ್ನು ಸರಿಪಡಿಸಬಹುದು; ಮಂದಿರ ಅಥವಾ ಮಸೀದಿ ಹುಂದಾದರೆ ಅದನ್ನು ದುರಸ್ತಿ ಮಾಡಬಹುದು; ಆದರೆ ಭಾರತಮಾತೆ ಹುಂದಾದರೆ ಅದನ್ನು ಸರಿಪಡಿಸುವುದು ಹೇಗೆ?" ಎಂದು ಅತ್ಯಂತ ಸೂಕ್ಷ್ಮವಾಗಿ ನುಡಿದರು.

ಭಾರತಮಾತೆಯನ್ನು ಛಿದ್ರ ಛಿದ್ರ ಮಾಡುವ ಅಂಜಿಕೆ ಬಿಜೆಪಿಯ ಈ ನಿಲುಮೆಯ ಹಿಂದೆ ಇದೆ ಎಂಬುದರಲ್ಲಿ ಎರಡು ಮಾತಿಲ್ಲ. " ಹಿಂದೂ ರಾಷ್ಟ್ರ" ಕಟ್ಟುವ ಉದ್ದೇಶದಿಂದ ಕೂಡಿದ ಈ ತಂತ್ರದ ವಿರುದ್ಧ-ಈ ಸವಾಲಿನ ವಿರುದ್ಧ–ಇಂದು ದೇಶದಲ್ಲಿ ಬಿಜೆಪಿ ಹೊರತುಪಡಿಸಿ ಎಲ್ಲಾ ರಾಷ್ಟ್ರೀಯ ಶಕ್ತಿಗಳೂ, ಪಕ್ಷಗಳೂ ಎದ್ದು ನಿಂತಿದ್ದಾರೆ. ವಿ.ಪಿ.ಸಿಂಗ್ ಈ ಶತ್ರುಗಳ ಪ್ರತೀಕದಂತೆ "ನನ್ನ ಸರಕಾರ ಉಳಿಯುವುದೇ ಇಲ್ಲವೋ ಎಂಬುದು ಸಣ್ಣ ಪ್ರಶ್ನೆ; ಈ ರಾಷ್ಟ್ರ ಒಂದು ರಾಷ್ಟ್ರವಾಗಿ ಉಳಿಯುವುದೋ ಇಲ್ಲವೋ ಎಂಬುದು ಈಗ ದೇಶದ ಮುಂದೆ ನಮ್ಮೆಲ್ಲರ ಮುಂದೆ ಇರುವ ಪ್ರಶ್ನೆ" ಎಂದು ಸ್ಪಷ್ಟವಾಗಿ ನುಡಿದಿದ್ದಾರೆ.

ಇಟ್ಟಿಗೆ ರಾಜಕೀಯದಿಂದ 2 ಸ್ಥಾನಗಳಿದ್ದುದನ್ನು ನಾವು 88 ಸ್ಥಾನಗಳಾಗಿ ಪರಿವರ್ತನೆ ಮಾಡಿದ್ದೇವೆ.; ಈಗ ಬಾಬ್ರಿ ಮಸೀದಿ-ರಾಮಜನ್ಮ ಭೂಮಿ ಪ್ರಶ್ನೆ ಎತ್ತಿ ಚುನಾವಣೆಯಲ್ಲಿ ನಾವು 188 ಸ್ಥಾನಗಳನ್ನು ಪಡೆಯುತ್ತೇವೆ ಎಂಬ ದುಷ್ಟ ಪ್ರಶ್ನೆಯೇ ಈ ಬಿಜೆಪಿಯ ಅರ್ಥರಹಿತ ಹಠವಾದಿ ನಿಲುಮೆಯಾಗಿದೆ ಎಂಬುದು ಸ್ಪಷ್ಟ.

ಬಾರತ ರಾಷ್ಟ್ರ ಜಾತ್ಯಾತೀತವಾಗಿ ಎಂದೆಂದಿಗೂ ಉಳಿಯುತ್ತದೆ ಎಂಬ ವಿಶ್ವಾಸ ನಮಗೆ ಇದೆ. ಇಂತಹ ಸವಾಲುಗಳು ಆಗಾಗ ಇಂದಿನ "ಬಾರತದ ಅರೆ- ಪಾಳೆಯಗಾರಿ ಸಾಮಾಜಿಕ-ಸಾಸ್ಕೃತಿಕ-ಆರ್ಥಿಕ ಸ್ಥಿತಿ ಗತಿಗಳಲ್ಲಿ " ಎದ್ದು ಬರಬಹುದು. ಅಂತಹ ಸಾಧ್ಯತೆಗಳೂ ಇವೆ. ಆದರೆ, ಅಂತಹ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸುವ ಸಾಧ್ಯತೆಗಳೂ ಅಷ್ಟೇ ಪ್ರಭಲವಾಗಿದೆ ಈ ಸಮಾಜದಲ್ಲಿ ಇವೆ ಎಂಬುದೂ ಸ್ಪಷ್ಟ.

ಇದನ್ನೇ ಕಾಂ. ನಂಬೂದರಿಪಾದರೂ, ಕಾಂ. ಜ್ಯೋತಿಬಸುಹಾಗೂ ಕಾಂ. ಹರಿಕೃಷ್ಣ ಸುರ್ಜೀತರು ದೇಶದ ಪ್ರಜಾಸತ್ತಾತ್ಮಕ ಸಮೂಹಗಳ ಮತ್ತು ರಾಷ್ಟ್ರದ ಪ್ರತಿನಿಧಿಗಳಾಗಿ ಒತ್ತಿಹೇಳುತ್ತಾ ವಿ.ಪಿ.ಸಿಂಗ್‌ರ ದೃಢ ನಿಲುಮೆಗೆ ದೃಢವಾಗಿ "ಏನೇ ಬರಲಿ ರಾಷ್ಟ್ರಕ್ಕೆ ಬಿಜೆಪಿಯವರು ಹಾಕಿದ ಸವಾಲು ಎದುರಿಸಿ" ಎಂದು ಬೆಂಬಲ ಪಾತ್ರ ವಹಿಸಿದ್ದಾರೆ.

ಈ ವಾರ

* 1965 ರಿಂದ86ರವರೆಗಿನ ಅವಧಿಯಲ್ಲಿ ಚೀನಾದ ತಲಾವಾರು ಆದಾಯ ಪ್ರತಿವರ್ಷ ಶೇಕಡಾ 5ರ ದರದಲ್ಲಿ ಪ್ರಗತಿಯಾಗಿದ್ದರೆ ಭಾತರದಲ್ಲಿ ಮಾತ್ರ ಶೇಕಡ 1.8 ರಷ್ಟಷ್ಟಕ್ಕಿಂತ ಹೆಚ್ಚಾಗಿಲ್ಲ.

1980ರ ನಂತರದ ಅವಧಿಯಲ್ಲಂತೂ ಚೀನಾದ ರಾಷ್ಟ್ರೀಯ ಉತ್ಪನ್ನ ಪ್ರತಿವರ್ಷ ಶೇಕಡ 10 ಕ್ಕಿಂತಲೂ ಹೆಚ್ಚಿನ ದರದಲ್ಲಿ ವೃದ್ಧಿಯಾಯಿತು. ಇದಕ್ಕೆ ಚೀನಾದ ಅರ್ಥವ್ಯವಸ್ಥೆಯಲ್ಲಿ ತಂದ ಪ್ರಗತಿ ಪರ ಮಾರುಕಟ್ಟೆ ಸುಧಾರಣೆಗಳೇ ಕಾರಣ..

.........ಚೀನಾದಲ್ಲಿ ಮಾತ್ರ ಭಾರತದಂಥ ಪರಿಸ್ಥಿತಿಯೇ ಇದ್ದರೂ ಆ ದೇಶಕ್ಕೆ ಅದ್ಭುತ ಪ್ರಗತಿ ಸಾಧಿಸಲು ಸಾಧ್ಯವಾಗಿದೆ.

—'ಸಂಯುಕ್ತ ಕರ್ನಾಟಕ' ಲೇಖನದಲ್ಲಿ
—ಅಕ್ಟೋಬರ್ 21

* ಪಾಶ್ಚಾತ್ಯ ರಾಜಕೀಯ ತಜ್ಞರುಗಳು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಕತೆ ಮುಗಿದಂತೆಯೇ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಇದು ನಿಜ ಎಂದು ತೋರಲೂಬಹುದು. ಆದರೆ ಕಮ್ಯುನಿಸ್ಟ್ ಪಾರ್ಟಿಗಳಿಗೆ ಮುಂದೆ ಭವಿಷ್ಯವೇ ಇಲ್ಲವೆಂದು ಹೇಳಲಿಕ್ಕಾಗದು. ತಾತ್ಕಾಲಿಕವಾಗಿ ಕಮ್ಯುನಿಸ್ಟ್ ಚಳುವಳಿಗೆ ಹಿನ್ನಡೆಯಾಗಿದ್ದರೂ. ಚಳುವಳಿ ಸತ್ತಿದೆ ಎಂದು ಹೇಳುವುದು ಸರಿಯಲ್ಲ. ಬದಲಾದ ಪರಿಸ್ಥಿತಿಗನುಸಾರವಾಗಿ ಕಮ್ಯುನಿಸ್ಟ್ ಪಾರ್ಟಿಗಳ ನೀತಿಗಳಲ್ಲೂ ಬದಲಾವಣೆಯಾಗುತ್ತಿದೆ.

—ಲೇಖನವೊಂದರಲ್ಲಿ ಸಿಯಾಕೀ

* ಶ್ರೀರಾಮ ದೇವಸ್ಥಾನಕ್ಕೆಂದು ಹಣ ಸಂಗ್ರಹಿಸುವ ನೆಪದಲ್ಲಿ ವಿಶ್ವ ಹಿಂದೂ ಪರಿಷತ್ ಜನರನ್ನು ಲೂಟಿ ಮಾಡುತ್ತಿದೆ.

—ಲಾಲ್ ದಾಸ್ , ಅಯೋಧ್ಯೆ ವಿವಾದದ
ಕೇಂದ್ರ ಬಿಂದುವಾಗಿರುವ ರಾಮ ದೇವಾಲಯದಲ್ಲಿ
ಏಳುವರ್ಷಗಳಿಂದ ಇರುವ ಅರ್ಚಕ

* ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಅಧಿಕಾರ ತ್ಯಜಿಸುವಂತೆ ತಿಳಿಸಿದ ಕಾಂಗ್ರೆಸ್(ಐ) ಹೈ ಕಮಾಂಡಿನ ಸರ್ವಾಧಿಕಾರಿ ರೀತಿಗೆ ಸರಿಸಾಟಿಯಾಗಿ ಕರ್ನಾಟಕದಲ್ಲಿ ಅಧಿಕಾರಿಶಾಹಿ ಹಾಗೂ ಅನೈತಿಕ ಮಾರ್ಗದಿಂದ ರಾಷ್ಟ್ರಪತಿ ಆಡಳಿತ ಹೇರಲಾಯಿತು.

— ಅಕ್ಟೋಬರ್ 31ರ
'ಇಂಡಿಯಾ ಟುಡೇ' ವರದಿಯಲ್ಲಿ

* ಇನ್ನು ಕ್ರೀಡೆಗಳಲ್ಲಿ ಚೀನದ ಯಶಸ್ಸಂತೂ ಎಲ್ಲರಿಗೂ ಗೊತ್ತೇ ಇದೆ. ಜಪಾನ್, ಕೋರಿಯಾದಂಥ ಪ್ರಬಲ ಕ್ರೀಡಾ ರಾಷ್ಟ್ರಗಳೂ ಚೀನಾದೆದುರು ಮಣಿದವು. ಇಂಥ ಅಭೂತಪೂರ್ವ ಯಶಸ್ಸಿಗೆ ವರುಷಗಳ ಪರಿಶ್ರಮ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಬಹುಶ: ಅಲ್ಲಿನ ಕಟ್ಟುನಿಟ್ಟಿನ ವ್ಯವಸ್ಥೆಯೂ ಪ್ರಮುಖ ಪಾತ್ರ ವಹಿಸಿರಬಹುದು. ಪ್ರಗತಿಯ ಮೆಟ್ಟಿಲೇರಲು ಅದು ಅವಶ್ಯಕವೂ ಎನಿಸುತ್ತದೆ. ಭಾರತದ ಸ್ಥಿತಿ ನೋಡಿ ಹೇಳಿಕೊಳ್ಳಲೂ ನಾಚಿಕೆಯಾಗುತ್ತದೆ. ನಮ್ಮ ದೇಶ ಎಂಬ ಭಾವನೆ ಮೊದಲು ನಮ್ಮಲ್ಲಿ ಮೂಡಬೇಕು. ಸರಕಾರವನ್ನು ಮನಬಂದಂತೆ ದೂರುವ ನಾವು, ನಮ್ಮ ಕರ್ತವ್ಯವನ್ನು ಮರೆಯುವುದು ದೊಡ್ಡ ದುರಂತ. ಅದೇ ಕ್ರೀಡೆಯಲ್ಲೂ ಪ್ರತಿಬಿಂಬಿಸುತ್ತದೆ. ಬೀಜಿಂಗ್‌ನಲ್ಲಿಯ ರಸ್ತೆಗಳನ್ನು ನೋಡಿದಾಗ, ಕಂಡಕಂಡಲ್ಲಿ ಉಗಿಯುವ, ಸಿಗರೇಟು ತುಂಡುಗಳನ್ನು ಎಸೆಯುವ ನಾವು ಕಲಿಯುವುದು ಯಾವಾಗ ಎಂದೆನಿಸುತ್ತದೆ. ಸ್ವಾತಂತ್ರ್ಯವನ್ನು ನಾವು ಹೇಗೆ ಅರ್ಥೈಸಿದ್ದೇವೆ' ಎಂಬ ಬಗೆಗೆ ಮರು ಯೋಚನೆ ಮಾಡುವಂತಾಗುತ್ತದೆ.

—ಗೋಪಾಲ ಹೆಗಡೆ
ಪ್ರಜಾವಾಣಿ, ಅಕ್ಟೋಬರ್ 21

ಬಾಲಂಗೋಚಿ

ಜಾತ್ಯಾತೀತ ಶಕ್ತಿದೊಂದಿಗೆ ಸಿಪಿಐ(ಎಂ) ರಾಜಿ ಮಾಡಿಕೊಳ್ಳುತ್ತಿದೆ.

—(ಮಾಜಿ ಮಹಾರಾಜ) ರಾಜೀವ್‌ಗಾಂಧಿ 'ಅಪ್ಪಣೆ'

'ಕೋತಿ ತಿಂದು ಮೇಕ ಬಾಯಿಗೆ ಒರೆಸಿತು' ಎಂಬ ಮಾತು ನೆನಪಿಗೆ ಬರುತ್ತಿದೆ ಮಹಾಸ್ವಾಮಿ ಎಂದರಂತೆ ಆರಾದೋ ಒಬ್ಬರು.

ನಿರ್ಣಾಯಕ ಸಂಘರ್ಷ ಆರಂಭ

"ಮಸೆದುದಿತ್ತಂಡಕ್ಕೆ ಸಮರವ್ರ"

ಕೋಮುವಾದ ಮತ್ತು ಜಾತ್ಯಾತೀತ ಶಕ್ತಿಗಳ ನಡುವಿನ ನಿರ್ಣಾಯಕ ಸಂಘರ್ಷದ ಆರಂಭವಾಗಿದೆ. ಭಾರತವನ್ನು ಹಿಂದಕ್ಕೆಳೆಯುವ ಹಾಗೂ ಮುಂದೊಯ್ಯಬಯಸುವ ಶಕ್ತಿಗಳ ನಡುವಣ ಸಂಘರ್ಷವಿದು. 15 ಶತಮಾನಕ್ಕೆ ಹಿಂದಕ್ಕೆ ಹೋಗುವ ದಾರಿ 21ನೆ ಶತಮಾನಕ್ಕೆ ಹೋಗುವ ದಾರಿಯ ನಡುವೆ ಸಂಘರ್ಷವಿದು.

ಸಂಧಾನಗಳು

ಸೂತ್ರಗಳು ಮರುಸಂಧಾನಗಳು ರಾಷ್ಟ್ರೀಯ ಸಮಗ್ರತಾ ಮಂಡಳಿ, ಸರ್ವಪಕ್ಷಗಳ ಸಭೆಗಳ ಕರೆಗಳ ಹಂತ, ಮುಖ್ಯಮಂತ್ರಿಗಳ ಸಮಿತಿ, ಧಾರ್ಮಿಕ ಮುಖಂಡರೊಂದಿಗೆ ಸಮಾಲೋಚನೆಗಳ ಹಂತ ಮುಗಿದು ಸಂಘರ್ಷ ನಿರ್ಣಾಯಕ ಹಂತವನ್ನು ತಲುಪಿತು. ರಾಷ್ಟ್ರದ ರಾಜಕೀಯ ಪಕ್ಷಗಳು, ಇತರ ಶಕ್ತಿಗಳೆಲ್ಲಾ ತಮ್ಮ ಒತ್ತಾಯ ಹೇರಿದರೂ ತಮ್ಮ ಪಟ್ಟು-ರಾಷ್ಟ್ರವನ್ನು ವಿನಾಶದಂಚಿಗೆ ಒಯ್ಯದೆ ಬಿಡುವುದಿಲ್ಲವೆಂಬ ಪಟ್ಟು ಸಡಿಸಲಿಲ್ಲ. ಮಾತ್ರವಲ್ಲ ಕಾನೂನು ಬದ್ಧವಾದ ಯಾವುದೇ ಕ್ರಮ ನ್ಯಾಯಾಂಗದ ಆಜ್ಞೆಯನ್ನು ರಕ್ಷಿಸುವ ಯಾವುದೇ ಕ್ರಮ ಆಮೂಲಕ ಸಂವಿಧಾನವನ್ನು ಸಂವಿಧಾನದ ಜಾತ್ಯಾತೀತ ಲಕ್ಷಣವನ್ನು ರಕ್ಷಿಸುವ ಯಾವುದೇ ಕ್ರಮವನ್ನು ಸರಕಾರ ಕೈಗೊಳ್ಳಲು ಬಿಡುವುದಿಲ್ಲ. ರಾಷ್ಟ್ರೀಯ ರಂಗ ಸರಕಾರ ಪ್ರಧಾನ ಮಂತ್ರಿಗಳು ರಾಜ್ಯಗಳ ಜನತಾದಳ ಸರಕಾರದ ಮುಖ್ಯಮಂತ್ರಿಗಳು ತಾವು ಅಧಿಕಾರ ಸ್ವೀಕರಿಸುವಾಗಿನ ಪ್ರಮಾಣವಚನಕ್ಕೆ ಬದ್ಧರಾಗಿ ಯಾವುದೇ ಕ್ರಮತೆಗೆದುಕೊಂಡರೂ ಅಂತಹ ಸರಕಾರವನ್ನೇ ಉಳಿಯಲು ಬಿಡುವುದಿಲ್ಲ ಎಂಬ ಈ ಸವಾಲನ್ನು ಸರಕಾರ ಸ್ವೀಕರಿಸದೇ ಬೇರೆ ಯಾವುದೇ ದಾರಿಯೇ ಇರಲಿಲ್ಲ.

ಎಡ ಪಕ್ಷಗಳು ದೆಹಲಿಯಲ್ಲಿ ಸಮಾಲೋಚಿಸಿ ಈ ಮಾತನ್ನು ಪ್ರಧಾನಿ ವಿ.ಪಿ. ಸಿಂಗ್‌ರವರಿಗೆ 22ನೇ ದಿನಾಂಕವೇ ಸ್ಪಷ್ಟವಾಗಿ ತಿಳಿಸಿದವು. ರಾಮಜನ್ಮಭೂಮಿ-ಬಾಬರಿ ಸಮಾದಿ ವಿವಾದವನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ರಾಷ್ಟ್ರೀಯ ರಂಗ ಸರಕಾರದ ಈ ಪ್ರಯತ್ನವನ್ನು ನಾವು ಸ್ವಾಗತಿಸುತ್ತೇವೆ ಎಂದು ಸರಕಾರಕ್ಕೆ ಹೇಳಿದುವು. ಬಿಜೆಪಿ ಮತ್ತು ವಿಎಚ್‌ಪಿಯ ಹಠಮಾರಿತನದಿಂದಾಗಿ ಈಗ ಉಳಿದಿರುವ ಒಂದೇ ದಾರಿ ರಥಯಾತ್ರೆಗೆ ಪೂರ್ಣವಿರಾಮ ಹಾಕುವುದು ವಿವಾದಕ್ಕೆ ಒಳಗಾಗಿರುವ ಜಾಗದಲ್ಲಿ ಈಗಿರುವ ಸ್ಥಿತಿಯನ್ನು ರಕ್ಷಿಸುವುದು ಅಲಹಾಬಾದ್ ಹೈಕೋರ್ಟಿನ ತೀರ್ಪಿನ ದಾರಿ ಕಾಯುವುದು ಎಂದು ಒತ್ತಾಯಿಸಿದುವು.

23ರ ಬೆಳಗ್ಗೆ ಅದ್ವಾನಿಯವರನ್ನು ಬಿಹಾರ ರಾಜ್ಯದಲ್ಲಿದ್ದಾಗಲೇ ಬಂಧಿಸಿ ರಥಯಾತ್ರೆಗೆ ಕೊನೆ ಹಾಡಲಾಯಿತು. ಬಿಜೆಪಿ ಒಂದು ಸರಕಾರವನ್ನುರುಳಿಸುವ ಪ್ರಯತ್ನಕ್ಕೆ ಕ್ಷಣವೂ ತಡಮಾಡದೆ ಕೈ ಹಾಕಿತು. ಮಾತ್ರವಲ್ಲ ಈಗಾಗಲೇ ಉಂಟಾಗಿರುವ ಸ್ಫೋಟಕ ಪರಿಸ್ಥಿತಿ ಮತ್ತಷ್ಟು ತೈಲವೆರೆದು ದೇಶಾದ್ಯಂತ ಹಬ್ಬಿಸುವ ಪ್ರಯತ್ನವಾಗಿ 'ಭಾರತ್ ಬಂದ್'ಗೆ ಕೈ ಹಾಕಿತು.

ಪಕ್ಷದ ರಾಜ್ಯ ಸಮಿತಿ ತೀವ್ರಗೊಳ್ಳುತ್ತಿರುವ ಈ ಪರಿಸ್ಥಿತಿಗೆ ಕೂಡಲೇ ಪ್ರತಿಕ್ರಿಯಿಸಿತು.

ಎಡ ಪಕ್ಷಗಳು ದೆಹಲಿಯಲ್ಲಿ ಮತ್ತೆ ಕೂಡಿ, " ಜನತೆ ಎಚ್ಚರದಿಂದಿರಬೇಕೆಂದು, ಕೋಮುಗಲಭೆಗಳನ್ನುಂಟುಮಾಡುವ ಎಲ್ಲಾ ಪ್ರಯತ್ನವನ್ನು ಸೋಲಿಸಬೇಕೆಂದು ಕರೆನೀಡಿದವು. ಎಲ್ಲಾ ರಾಜ್ಯ ಸರಕಾರಗಳೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಎಳ್ಳಷ್ಟೂ ಹೆಚ್ಚು ಕಡಿಮೆಯಾಗಬಾರದೆಂದು ಕೋಮು ಸೌಹಾರ್ದತೆಯನ್ನು ಕದಡುವ ಯಾವುದೇ ಪ್ರಯತ್ನವನ್ನು ಕುಡಿಯಲ್ಲಿಯೇ ಚಿವುಟಬೇಕೆಂದು ಒತ್ತಾಯಿಸಿತು.

ಈ ಭಾರತ್ ಬಂದ್ ಒಂದೇ ದಿನದಲ್ಲಿ 50 ಕ್ಕೂ ಹೆಚ್ಚಿನ ಸಾವು ನೋವನ್ನು ಉಂಟುಮಾಡಿದೆ. ಬಿಜೆಪಿ ಆಳ್ವಿಕೆಯ ರಾಜಾಸ್ಥಾನದಲ್ಲೊಂದರಲ್ಲಿಯೇ 40ಕ್ಕೂ ಹೆಚ್ಚಿನ ಸಾವುಗಳು ವರದಿಯಾಗಿವೆ. ಬಿಜೆಪಿ ಆಡಳಿತದ ರಾಜ್ಯಗಳು ಒಂದು ರೀತಿಯಾದರೆ ಕಾಂಗ್ರೆ ಐಡಳಿತದ ರಾಜ್ಯಗಳಲ್ಲಿಯೂ ಬಂದ್ ಯಶಸ್ವಿಯಾಗಲಿ ಎಂಬ ಭಾವನೆ ಇರುವುದು ಸ್ಪಷ್ಟವಾಗಿದೆ. ಭಾರತಕ್ಕೆ ಅಪಾಯ ಕಾದಿರುವ ಈ ವೇಳೆಯಲ್ಲಿ ತನ್ನದೇ ಹಿತವೆಂದು ಸಂಕುಚಿತ ದೃಷ್ಟಿಯನ್ನು ತೊರೆದು ಕಾಂಗ್ರೆಸ್(ಐ) ರಾಷ್ಟ್ರದ ಎಲ್ಲಾ ಜಾತ್ಯಾತೀತ ಪಕ್ಷಗಳ ಜತೆಗೂಡಿ ಕೋಮುವಾದವನ್ನು ಸೆಣಸಬೇಕಾಗಿದೆ.

1989ರ ಲೋಕಸಭಾ ಚುನಾವಣೆಯಲ್ಲಿ ಈ ಬಗ್ಗೆ ರಾಷ್ಟ್ರೀಯ ರಂಗ- ಜನತಾದಳಗಳು ತೋರಿಸಿದ ದೌರ್ಬಲ್ಯ ಮತ್ತು ತೂಗುಯ್ಯಾಲೆ ನೀತಿ ಇಂದು ಅವರ ಆಳ್ವಿಕೆಗೆ ಮಾರಕವಾಗಿ ಪರಿಣಮಿಸಿದೆ. ಅದೇ ಸಮಯದಲ್ಲಿ ಉತ್ತರ ಪ್ರದೇಶ ಬಿಹಾರಗಳಲ್ಲಿ ಚುನಾವಣೆಯ ಸಮಯದಲ್ಲಿಯೇ ತೋರಿಸಿದ ಸ್ಥೈರ್ಯದ ನಿಲುಮೆ ಬಿಜೆಪಿ ಜೊತೆ ಜಯ ವೇದಿಕೆಗಳಲ್ಲಿ ಭಾಗವಹಿದ ವಿಪಿ ಸಿಂಗ್ ನೀತಿ ಇಂದು ಅಪಾರ ಫಲ ಕೊಟ್ಟಿದೆ. ದೃಢವಾಗಿ ನಿಂತು ಕೋಮುವಾದಕ್ಕೆ ಸೆಡ್ಡು ಹೊಡೆಯುವ ಶಕ್ತಿಯನ್ನು ಒದಗಿಸಿದೆ.

1979ರಲ್ಲೊಮ್ಮೆ ಕೋಮುವಾದಿ ಶಕ್ತಿಗಳು ಕಾಂಗ್ರೆ ವಿರೋಧಿ ಸರಕಾರವನ್ನು ಮುರಿದವು. ಈ 1990ರಲ್ಲಿಅದೇ ಶಕ್ತಿ ಇನ್ನಷ್ಟು ಭೀಕರ ಪ್ರಯತ್ನ ಮಾಡಿ ಕಾಂಗ್ರೆ ವಿರೋಧಿ ಸರಕಾರವನ್ನುರುಳಿಸುವ ಯತ್ನ ಮಾಡಿದೆ.

ಜಾತ್ಯಾತೀತ ಶಕ್ತಿಗಳ ಒಗ್ಗೂಡುವಿಕೆಗಾಗಿ, ಒಗ್ಗೂಡಿ ಕೋಮುವಾವನ್ನು ಸೆಣಸುವುದಕ್ಕಾಗಿ ಕಲ್ಕತ್ತಾ ಅಧಿವೇಶನದಲ್ಲಿ ನೀಡಿದ ಕರೆ ದಿನಕಳೆದಂತೆ ಹೆಚ್ಚು ಪಕ್ಷಗಳು, ಜನ ವಿಭಾಗಗಳು ಒಪ್ಪಬೇಕಾದ ಸ್ಥಿತಿ ಬಂದಿದೆ.

ಇದೀಗ ಎಲ್ಲ ಸ್ಪಷ್ಟವಾಗಿದೆ. ಇಂದು ನಡೆಯುತ್ತಿರುವ ಸಮರ ಹಿಂದೂ ಮತ್ತು ಮುಸ್ಲಿಂ ಮತಾಂಧರ ನಡುವೆ ಅಲ್ಲ. ಹಿದೂ ಮಸ್ಲಿಂ, ಸಿಖ್, ಕ್ರಿಶ್ಚಿಯನ್ ಮೂಲಭೂತವಾದಿ ಶಕ್ತಿಗಳು ಮತ್ತೊಂದು ಕಡೆ ಅಣಿನೆರೆದಿರುವ ಭೀಕರ ಸಮರ. ಭೂತಾಕಾಲದ ಧರ್ಮಾನಂದ ಚಿಂತನೆಗೂ ವರ್ತಮಾನ ಭವಿಷ್ಯದ ವೈಜ್ಞಾನಿಕ ಚಿಂತನೆಗೂ ನಡೆಯುತ್ತಿರುವ ಸಮರ. ಈ ಸಮರದಲ್ಲಿ ಯಾರು ಎತ್ತ ಕಡೆ ಎಂಬುದು ಅವರ ಭವಿಷ್ಯವನ್ನು ನಿರ್ಣಯಿಸಲಿದೆ. ದೇಶದ ಭವಿಷ್ಯವನ್ನು ನಿರ್ಮಾಣ ಮಾಡಬೇಕೆನ್ನುವವರೆಲ್ಲ ದಾರಿ ಬರಿ ಮೂಕ ಪ್ರಕ್ಷೇಕಕರಾಗದೇ ನೇರವಾಗಿ ಈ ಕಾಳಗಕ್ಕೆ ದುಮಿಕಿದ ಕೋಮುವಾದವನ್ನು ಹಿಮ್ಮೆಟ್ಟಿಸಬೇಕಾಗಿ ಬಂತು. ಮತ್ತೊಂದೂ ತಲೆಯೆತ್ತದಂತೆ ಸೋಲಿಸಬೇಕಾಗಿದೆ...

ಇಂದಿನ ತುರ್ತು ಅಗತ್ಯ...
ಪುಟ 1 ರಿಂದ

ಎಲ್ಲಾ ಪಕ್ಷಗಳು ಸೇರಿದ ಸರಕಾರ ರಚನೆಗೆ ಸಿಪಿಐ(ಎಂ) ವಿರೋಧಿಸಿದೆ.

ಬಿಜೆಪಿ ಪಕ್ಷ ನಿಷೇಧಕ್ಕೆ ನಾವು ಒಪ್ಪುವುದಿಲ್ಲವೆಂದು ಅದರಿಂದ ಪ್ರಶ್ನೆ ಪರಿಹಾರವಾಗದು ಎಂದು ಅವರು ಹೇಳಿದರು. ಬಿಜೆಪಿಯವರ ಸವಾಲನ್ನು ರಾಜಕೀಯವಾಗಿ ಎದುರಿಸಬೇಕಾಗಿದೆ ಮತ್ತು ಬಿಜೆಪಿ ತಳೆದಿರುವ ಹಠಮಾರಿ ನಿಲುವನ್ನು ಜನರ ಮುಂದೆ ಬಿಚ್ಚಿಟ್ಟು ಜನರಿಗೆ ತಿಳುವಳಿಕೆಯನ್ನು ನೀಡಲೇಬೇಕಾಗಿದೆ ಎಂದು ತಿಳಿಸಿದರು.

1989ರ ಲೋಕಸಭೆ ಚುನಾವಣೆಗಳಲ್ಲಿ ರಾಮಜನ್ಮ ಭೂಮಿ ವಿವಾದಕ್ಕೆ ಸಂಬಂಧಿಸಿ ಬಿಜೆಪಿಯವರ ನಿಲುವನ್ನು ಅರ್ಥಮಾಡಿಕೊಂಡು ತಾನೇ ಜನತಾದಳದವರು ಬಿಜೆಪಿಯವರ ಜೊತೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದ್ದು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಇಎಂಎಸ್ ಅವರು ಉತ್ತರಪ್ರದೇಶ ಮತ್ತು ಬಿಹಾರಗಳಲ್ಲಿ ಜನತಾದಳದವರು ಬಿಜೆಪಿಯವರ ಜೊತೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿಲ್ಲ ಎಂದರು. ಅಂದು ಏನೇ ಆಗಲಿ, ಈಗ ಎಲ್ಲಾ ಪಕ್ಷಗಳು ಬಿಜೆಪಿಯನ್ನು ವಿರೋಧಿಸುತ್ತಿದ್ದಾರೆ. ಬಿಜೆಪಿಯ ಅಧ್ಯಕ್ಷ ಎಲ್.ಕೆ. ಅದ್ವಾನಿಯವರ ರಥಯಾತ್ರೆಯಿಂದ ಪ್ರಾರಂಭವಾಗಿರುವ ಕೋಮು ವಿಕಾರಗಳು, ಘರ್ಷಣೆ, ಹಿಂಸಾಚಾರಕ್ಕೆ ಎಡೆಮಾಡಬಹುದು ಆದ್ದರಿಂದ ಇದೇ ಈಗ ಮುಖ್ಯವಾದದ್ದು ಎಂದರು.

Printed and Published by P.Ramachandra Rao on behslf of Communist Party of India (Marxist) Karnataka State Committee, 95 A, 2nd cross, Muneswara Block, Palace Guttahslli, BANGALORE-3, Phone: 366489. Editor: P. Ramachandra Rao.